
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮೇ 11, 2011 ಪುಟ 20 ರೂ. 12/-



ರಾಜೇಶ್ವರಿಯ ತೇಜಸ್ವಿಯಾನ



ಬಾಬಾ ಸತ್ಯಜಿತ್

ಇದೆಂಥಾ ನಂಟು?

ಪ್ಯಾಟೆ ಹುಡ್ಗೀರು ಬೀದಿಗೆ ಬಿದ್ರು



ಕಾಂಗ್ರೆಸ್ ಕಿರೀಟಕ್ಕಾಗಿ ಕಸರತ್ತು



...ಹಿಂಪ ಹೆಸರಲ್ಲಿ ಸಿಂಘಾಲ್ ಬಂಟರ ಭೂ ಡಕಾಯಿತಿ




ರಾಧಿಕಾ ನಾನು ನನ್ನ ಕನಸು...

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ನೋ ಕಾಮೆಂಟ್ಸ್


"ಗುಜರಾತ್ ಹಿಂಸಾಚಾರದ ವೇಳೆ ಹಿಂಸಾಕಾರರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದಂತೆ ನನ್ನ ಸಹೋದರ ಐಪಿಎಸ್ ಅಧಿಕಾರಿ ಕುಲದೀಪ್ ಶರ್ಮಾರಿಗೆ ತಿಳಿಸುವಂತೆ ನನಗೆ ಮುಖ್ಯಮಂತ್ರಿ ಕಚೇರಿಯಿಂದ ಕರೆಬಂದಿತ್ತು."

- ಪ್ರದೀಪ್ ಶರ್ಮಾ, ಅಮಾನತುಗೊಂಡಿರುವ ಹಿರಿಯ ಪೊಲೀಸ್ ಅಧಿಕಾರಿ



"ಅನ್ಯಾಯವನ್ನು ವಿರೋಧಿಸುವ, ಜಾತ್ಯತೀತ ತತ್ವಗಳನ್ನು ಪರಿಪಾಲಿಸುವ ಲಿಂಗಾಯತ ಮಠಗಳು ಜಾತಿ ಕಾರಣಕ್ಕೆ ಯಡಿಯೂರಪ್ಪನವರನ್ನು ಬೆಂಬಲಿಸಿ ತೀರ್ಮಾನ ತೆಗೆದುಕೊಂಡಿರುವುದು ದುರ್ದೈವದ ಸಂಗತಿ. ಮಾರ್ಗ ದರ್ಶನ ಮಾಡಬೇಕಾದ ಮಠಾಧೀಶರು ಯಡಿಯೂರಪ್ಪರ ಕೈಗೊಂಬೆಗಳಾಗಿ ನಡೆದುಕೊಂಡಿದ್ದಾರೆ. ಸಮಾವೇಶ ನಡೆದ ರೀತಿ, ತೆಗೆದುಕೊಂಡ ತೀರ್ಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಯಡಿಯೂರಪ್ಪನವರೇ ಹಣಕೊಟ್ಟು ಈ ಸಮಾವೇಶ ಮಾಡಿಸಿದ್ದಾರೆ ಮತ್ತು ತಮ್ಮ ಪರ ವಕಾಲತ್ತು ವಹಿಸಲು ಸ್ವಾಮೀಜಿಗಳನ್ನು ಬಳಸಿಕೊಂಡಿದ್ದಾರೆ ಎನ್ನುವ ಅನುಮಾನಗಳು ದಟ್ಟವಾಗುತ್ತವೆ."

- ಎಚ್. ಎಸ್. ದೊರೆಸ್ವಾಮಿ



"ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾಗಿ ಸಂವಿಧಾನಬದ್ಧವಾಗಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ವೀರಶೈವ ಸಮಾವೇಶದಲ್ಲಿ 'ಮಠಾಧೀಶರ ಮಾರ್ಗದರ್ಶನದಲ್ಲಿ ಆಡಳಿತ ನಡೆಸುತ್ತೇನೆ' ಎಂದು ವಾಗ್ದಾನ ಮಾಡಿರುವುದು ಸಂವಿಧಾನ ವಿರೋಧಿ. ಇದು ಯಡಿಯೂರಪ್ಪನವರಿಗೆ ಸಂವಿಧಾನದಲ್ಲಿ ಗೌರವ, ನಂಬಿಕೆ ಮತ್ತು ಬದ್ಧತೆ ಇಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ವ್ಯವಸ್ಥೆಯ ವಿರುದ್ಧ ದೂರು-ದುಮ್ಮಾನಗಳಿದ್ದರೆ ಪ್ರಜಾತಾಂತ್ರಿಕ ವ್ಯವಸ್ಥೆ ಬಿಟ್ಟು ಮಠಾಧೀಶರಿಗೆ ದೂರು ನೀಡಬೇಕು ಎನ್ನುವ ಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ. ಆದ್ದರಿಂದ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಳ್ವಿಕೆ ಹೇರಲು ಇದು ಸಕಾಲ."

-ಸಿ.ಎಚ್.ಹನುಮಂತರಾಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ಸಾಯಿಬಾಬಾ ಟ್ರಸ್ಟ್‌ನ ಸ್ಥಿರಾಸ್ತಿ ಮತ್ತು ಚರಾಸ್ತಿಯ ಮೌಲ್ಯ 40,000 ಕೋಟಿ ಎಂದು ಹೇಳಲಾಗುತ್ತದೆ. ಆದರೆ ಒಂದು ಅಂದಾಜಿನ ಪ್ರಕಾರ ಅದು 1.5 ಲಕ್ಷ ಕೋಟಿ ರೂ ಮುಟ್ಟಿದೆ ಎಂದು ಹೇಳಲಾಗಿದೆ."

- ಪತ್ರಿಕಾ ವರದಿ

ಹೊನ್ನಶೂಲದಲ್ಲಿ ಹಾಕಿ ಇರಿಯುವುದೆಂದರೆ ಇದೇ!

"ಕರ್ನಾಟಕದಲ್ಲಿ ಕುವೆಂಪು ಮತ್ತು ಡಾ.ರಾಜ್ ಅವರು ಪವಾಡ ಪುರುಷರು. ಡಾ.ರಾಜ್ ಅವರಿಗೆ ಯಾವ ಸಾಧು ಸಂತರಿಗೂ ಇಲ್ಲದ ಜನಪ್ರಿಯತೆ ದಕ್ಕಿದೆ. ಬಡತನ ಹಾಗೂ ಹಿಂದುಳಿದ ಜಾತಿಯಿಂದ ಬಂದ ಅವರು, ಕುಟುಂಬ ಸಮೇತ ನೋಡುವಂಥ ಚಿತ್ರಗಳಲ್ಲಿ ನಟಿಸಿದರು. ಚಿತ್ರರಂಗದ ಜೀವನದುದ್ದಕ್ಕೂ, ಕನ್ನಡ ಬಿಟ್ಟು ಬೇರೆ ಭಾಷೆಯಲ್ಲಿ ಅಭಿನಯಿಸಲಿಲ್ಲ, ಸಮಾಜ ವಿರೋಧಿ ಚಿತ್ರಗಳಲ್ಲಿ ಅಭಿನಯಿಸಲಿಲ್ಲ, ಆದ್ದರಿಂದ ಅವರು ಕನ್ನಡ ಭಾಷೆಯ ಮಾದರಿಯಾಗಿದ್ದಾರೆ."

- ಡಾ. ಚಂದ್ರಶೇಖರ ಕಂಬಾರ

ಅಮೆರಿಕದ ಮೊದಲ ಆಯ್ಕೆ ನೀವೆ?!

"ಅಮೆರಿಕಕ್ಕೆ ತೃಣಮೂಲ ಕಾಂಗ್ರೆಸ್ ಪ.ಬಂಗಾಳದಲ್ಲಿ ಆಳುವುದು ಬೇಕು."

- ಪ್ರಕಾಶ್ ಕಾರಟ್, ಸಿಪಿಎಂ ಕಾರ್ಯದರ್ಶಿ

ಹಾಗಿದ್ದಲ್ಲಿ ದೇವರು ಸತ್ತಿದ್ದೇಕೆ?

"ದೇವರು ಸಾಯಿಬಾಬಾರಿಗೆ ಮೋಕ್ಷ ಕೊಡಬೇಕು ಎಂದು ಕೇಳುವುದು ಸಣ್ಣತನವಾಗುತ್ತದೆ. ಏಕೆಂದರೆ ಅವರೇ ದೇವ ಪುರುಷ."

- ದೇವೇಗೌಡ



ಸಾಯಿಬಾಬಾರ ಧರ್ಮಾರ್ಥಗಳು ಪ್ರಜಾತಂತ್ರದ ಅಣಕವಲ್ಲವೇ?



ಶಿವಸುಂದರ್ ಚಾರ್ವಾಕ

ದೈವಮಾನವ, ನಡೆದಾಡುವ ದೇವರು, ದೈವಾಂಶ ಸಂಭೂತ ಇತ್ಯಾದಿ ಅಲಂಕಾರಗಳಿಂದ ಪ್ರಭುತ್ವ ಮತ್ತು ಸಮಾಜ ಕೊಂಡಾಡುತ್ತಿದ್ದ ಸಾಯಿಬಾಬಾನಂಥ ಸಾಯಿಬಾಬಾ ಸಹ ಮೃತರಾಗಿದ್ದಾರೆ. ಸಾಯುವ ಮುನ್ನ ಸಾಮಾನ್ಯ ನರಮಾನವರಂತೆ 28ಕ್ಕೂ ಹೆಚ್ಚು ದಿನಗಳ ಕಾಲ ಹಲವಾರು ಕಾಯಿಲೆಗಳಿಂದ ನರಳಿದ್ದಾರೆ. ತಮ್ಮಲ್ಲೇ ಸರ್ವರೋಗ ನಿವಾರಣೆ ಬೂದಿಯಿದ್ದರೂ ಅವೇನೂ ದೇವಮಾನವನ ಸಾವನ್ನೂ ತಡೆಯಲಿಲ್ಲ ನೋವನ್ನೂ ಕಡಿಮೆ ಮಾಡಲಿಲ್ಲ. ಬದಲಿಗೆ ಹಗಲು ರಾತ್ರಿ ಶ್ರಮಿಸಿ ಆ ನಿರ್ಜೀವ ದೇಹವನ್ನು ಏಪ್ರಿಲ್ 24ರ ತನಕ ಉಳಿಸಲು ಹರಸಾಹಸ ಪಟ್ಟಿದ್ದು ಅಮೆರಿಕ ಹಾಗೂ ಭಾರತದ ಅತ್ಯುತ್ತಮ ವೈದ್ಯರುಗಳು! ಹಾಗೆ ನೋಡಿದರೆ ಇದೇ ಸಾಯಿಬಾಬಾ ವಿದೇಶಿ ಸಂಘ ಸಂಸ್ಥೆಗಳ ಅಪಾರ ಧನಸಹಾಯದೊಂದಿಗೆ ಕಟ್ಟಿದ್ದ ಆಸ್ಪತ್ರೆಗಳಲ್ಲಿ ಕೊಡುತ್ತಿದ್ದದ್ದು ಸಾಯಿಬಾಬಾ ಮಂತ್ರಿಸಿದ ಬೂದಿಯನ್ನೇನಲ್ಲ, ವೈಜ್ಞಾನಿಕ ವಿಧಾನದಿಂದ ಅನ್ವೇಷಿತವಾದ ಔಷಧಿಗಳನ್ನೇ. ಈ ಆಸ್ಪತ್ರೆಯ ಸಹಾಯದಿಂದ ಸಾಕಷ್ಟು ಜನರು ಉಪಯೋಗ ಪಡೆದುಕೊಂಡಿದ್ದು ನಿಜ. ಆದರೆ ವಿಪರ್ಯಾಸವೇನೆಂದರೆ ಸಾಯಿಬಾಬಾರ ಸಾವು, ಆಧುನಿಕ ವೈದ್ಯಕೀಯ ಸೇವೆ ಇವೆಲ್ಲವೂ ಸಾರಾಂಶದಲ್ಲಿ ಸಾಯಿಬಾಬಾ ಜೀವನದುದ್ದಕ್ಕೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಚಾರ ಮಾಡಿದ ಮೌಢ್ಯಗಳನ್ನೇನೂ ಅಲುಗಾಡಿಸುತ್ತಿಲ್ಲ. ಬದಲಿಗೆ ಕಷ್ಟಕಾಲದಲ್ಲಿ ಬಡಜನತೆಗೆ ಒದಗಿಬಂದ ಸಹಾಯ ಅವರಲ್ಲಿ ಋಣೀ ಭಾವನೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಅದು ಅವರಲ್ಲಿ ಸಾಯಿಬಾಬಾರ ದೈವತ್ವದ ಬಗ್ಗೆ ಮತ್ತಷ್ಟು ವಿಶ್ವಾಸವನ್ನು ಹೆಚ್ಚಿಸುತ್ತಿದೆ. ಇದು ಸಾಯಿಬಾಬಾರನ್ನು ಮರಣಾನಂತರವೂ ಸಹ ಪವಾಡ ಪುರುಷನನ್ನಾಗಿ ಸ್ಥಾಪಿಸುತ್ತಿದೆ ಮತ್ತು ಒಂದು ಪ್ರಜಾತಂತ್ರದಲ್ಲಿಯೂ ಜನರು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಪವಾಡಗಳನ್ನೋ ಅಥವಾ ಪವಾಡ ಪುರುಷರನ್ನೋ ಆಶ್ರಯಿಸುವಂತೆ ಮಾಡುತ್ತದೆ. ಹೀಗಾಗಿ ಸಾಯಿಬಾಬಾರ ವೈಭವೀಕರಣ ಸಾರಾಂಶದಲ್ಲಿ ಪ್ರಜಾತಂತ್ರದ ವೈಫಲ್ಯದ ವೈಭವೀಕರಣವೇ ಆಗಿದೆ.

ಸಾಯಿಬಾಬಾರ ಬದುಕು ಮತ್ತು ಅವರ ಬದುಕಿನ ಏರುಗತಿ ನಮ್ಮ ದೇಶದ ಪ್ರಜಾಸತ್ತೆ ಮತ್ತು ಜನತೆಯ ಬದುಕಿನ ಅವನತಿಯ ಜೊತೆಜೊತೆಗೆ ನೇರವಾಗಿ ಸಂಬಂಧಿಸಿದೆ. ಪ್ರಾರಂಭದಲ್ಲಿ ಸಾಯಿಬಾಬಾ ಮೂರನೇ ದರ್ಜೆ ತಂತ್ರಗಳನ್ನು ಬಳಸಿ, ಬೂದಿ, ಉಂಗುರಗಳನ್ನು "ಶೂನ್ಯದಿಂದ ಸೃಷ್ಟಿಸಿ" ಕೊಡುವ ಕಳಪೆ ಕಣ್ಕಟ್ಟುಗಳನ್ನು ಮಾಡುತ್ತಾ ಪವಾಡ ಪುರುಷರ ಸ್ಥಾನ ಗಿಟ್ಟಿಸಿಕೊಂಡರು. ಈ ದೇಶದ ಸಾಮಾಜಿಕ ಪರಿಸ್ಥಿತಿ ಮತ್ತು ದಮನಿತ ಜನರ ದೈನೇಸಿ ಪರಿಸ್ಥಿತಿಗಳು ಬಾಬಾಗಳ ಬುರುಡೆಯನ್ನು ಪ್ರಶ್ನಿಸುವ ಮನಸ್ಥಿತಿಗಿಂತ ಅದನ್ನು ಒಪ್ಪಿಕೊಂಡು ಅದರ ಮೂಲಕ ತಮ್ಮ ತೀರದ ಬವಣೆಗಳಿಗೆ ಭ್ರಾಮಕ ಪರಿಹಾರವನ್ನು ಕಂಡುಕೊಳ್ಳುವ ಶರಣಾಗತಿಯ ಮನೋಭಾವವನ್ನೇ ಮುಂದುವರೆಸಿತ್ತು. ಬೇರೇ ಯಾವುದೇ ದೇಶಗಳಿಗಿಂತ ಈ ದೇಶದಲ್ಲಿ ಧರ್ಮ ಮತ್ತು ಜಾತಿ ವ್ಯವಸ್ಥೆಗಳಂಥಾ ವ್ಯವಸ್ಥಿತ ಆಕ್ರಮಣಗಳು ದಮನಿತ ಜನತೆಯಲ್ಲಿ ತಮ್ಮ ಶೋಚನೀಯ ಪರಿಸ್ಥಿತಿಗೆ ಕಾರಣಗಳನ್ನು ವ್ಯವಸ್ಥೆಯಲ್ಲಿ ಹುಡುಕುವುದಕ್ಕಿಂತಾ ತಮ್ಮ ಪೂರ್ವಜನ್ಮದ ಪಾಪ ಕರ್ಮಗಳಲ್ಲೇ ಹುಡುಕಿಕೊಳ್ಳುವಂತ ಆತ್ಮಘಾತುಕ ಮನಸ್ಥಿತಿಯನ್ನು ಪೋಷಿಸಿಕೊಂಡು ಬಂದಿವೆ. ಹೀಗಾಗಿಯೇ ಈ ದೇಶದ ದಮನಿತ ಮತ್ತು ಬಡಜನರಲ್ಲಿ ತಮ್ಮ ಬಗ್ಗೆ ತಮಗೆ ಆತ್ಮವಿಶ್ವಾಸ ಇರುವುದಕ್ಕಿಂತ ಪವಾಡ ಪುರುಷರ ಬಗ್ಗೆ, ದೇವೀ ಮಾನವರ ಬಗ್ಗೆ ನಂಬಿಕೆ, ಮೂಢ ನಂಬಿಕೆ ಹೆಚ್ಚು. ಈ ಮೂಢನಂಬಿಕೆಯ ಮೂಲ ಅವರ ಅಸಹಾಯಕತೆಯನ್ನು ಹೆಚ್ಚಿಸುವ ತಮ್ಮ ನಿಯಂತ್ರಣದಲ್ಲಿಲ್ಲದ ಶೋಷಕ ವ್ಯವಸ್ಥೆಯಲ್ಲಿದೆ.

ವಾಸ್ತವವಾಗಿ ಒಂದು ಪ್ರಜಾತಂತ್ರ ಜನರ ಈ ನಿಸ್ಸಹಾಯತೆಯನ್ನು ದೂರ ಮಾಡಿ ಜನತೆಗೆ ತಮ್ಮ ಸಂಘಟಿತ ಶಕ್ತಿಯ ಮೇಲೆ ತಮಗೇ ನಂಬಿಕೆ ಬರುವಂತೆ ಮಾಡಬೇಕಿತ್ತು, ಇದುವರೆಗೆ ಹೇಳಿದ್ದನ್ನೆಲ್ಲಾ ಒಪ್ಪಿಕೊಂಡು ಬಂದ ಸಮಾಜ ಮತ್ತು ಜನರಲ್ಲಿ ಪ್ರಶ್ನಿಸುವ ಮತ್ತು ಸ್ವೀಕೃತ ಗ್ರಹಿಕೆಗಳನ್ನು ಅನುಮಾನಿಸುವ ವಿಚಾರವಾದಿ ಮನೋಧರ್ಮವನ್ನು ಹುಟ್ಟುಹಾಕಬೇಕಿತ್ತು, ಒಂದು ಪ್ರಜಾತಂತ್ರ ಜನರಿಗೆ ತಮ್ಮ ಬದುಕಿನ ಆಗುಹೋಗುಗಳ ಮೇಲೆ ತಮಗೇ ನಿಯಂತ್ರಣ ಇರುವಂತ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ನೀಡಿದ್ದಿದ್ದರೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಹುಟ್ಟುಹಾಕುವಂಥಾ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿದ್ದರೆ ಜನರಲ್ಲಿ ಪರಾವಲಂಬಿ ಮನೋಭಾವವೇ ಹುಟ್ಟುತ್ತಿರಲಿಲ್ಲ. ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ಸ್ವಾವಲಂಬನೆ ಇರುವ ಸಮಾಜ ನಿರ್ಮಾಣವಾಗಿದ್ದರೆ ಈ ದೇಶದಲ್ಲಿ ಬಾಬಾಗಳು ಹುಟ್ಟಿಕೊಳ್ಳುತ್ತಲೇ ಇರಲಿಲ್ಲ.

ಆದರೆ ನಮ್ಮ ಪ್ರಜಾತಂತ್ರಕ್ಕೆ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಅಜೆಂಡಾವೇ ಇರಲಿಲ್ಲ. ಬಡತನದ ಮತ್ತು ಪರಾವಲಂಬನೆಯನ್ನು ಮುಂದುವರೆಸುವುದು ಈ ದೇಶದ ಆಳುವವರ್ಗಗಳ ಪಟ್ಟಭದ್ರ ಹಿತಾಸಕ್ತಿಯೂ ಆಗಿದ್ದರಿಂದ ಈ ದೇಶದ ಜನತೆಯ ನಿಸ್ಸಹಾಯಕ ಪರಾವಲಂಬನೆ ಹಾಗೆಯೇ ಮುಂದುವರೆದು ಬಾಬಾಗಳ ಹುಟ್ಟಿಗೆ ಭೂಮಿಕೆಯನ್ನು ಸೃಷ್ಟಿಸಿತ್ತು. ಈ ಸಾಮಾಜಿಕ ಸಂದರ್ಭದ ಮನೋಭೂಮಿಕೆಯೇ ಪವಾಡಗಳನ್ನು ನಂಬುವ, ಹಂಬಲಿಸುವ ಮಾನಸಿಕತೆಯನ್ನು ಹುಟ್ಟುಹಾಕಿತು. ಇದರ ಪ್ರಯೋಜನವನ್ನು ಮಾಡಿಕೊಂಡು ಸಾಯಿಬಾಬಾಗಳಂಥವರು ಜನರನ್ನು ಹಿಂಬಾಲಕರನ್ನಾಗಿಸಿಕೊಂಡರು. ಈ ಪ್ರಕ್ರಿಯೆಯಲ್ಲಿ ಸಾಯಿಬಾಬಾ ವ್ಯಕ್ತಿಯಾಗದೇ ಜನರ ವಿಶ್ವಾಸವನ್ನು ಗಳಿಸಿಕೊಂಡ ಶಕ್ತಿಕೇಂದ್ರವಾಗುತ್ತಿದ್ದಂತೆ ಆಳುವ ವರ್ಗ ಮತ್ತು ಪ್ರಭುತ್ವಗಳು ಸಹ ಯೋಜಿತವಾಗಿ ಸಾಯಿಬಾಬಾರನ್ನು ವಿಶ್ವಮಾನ್ಯ ಆಧ್ಯಾತ್ಮಿಕ ಗುರುವನ್ನಾಗಿ ಪ್ರವರ್ಧಮಾನಕ್ಕೆ ತಂದರು. ಸಾಯಿಬಾಬಾರ ವರ್ಗಾತೀತ ಸಂಘರ್ಷರಹಿತ ಮಾನವತೆ, ದಾನ-ಧರ್ಮಗಳ ಮುಸುಕಿನಲ್ಲಿ ಎಲ್ಲಾ ವ್ಯವಸ್ಥಿತ ಶೋಷಣೆ, ಲೂಟಿಗಳಿಗೆ ಪಾರಮಾರ್ಥಿಕ ಮಾನ್ಯತೆಗಳನ್ನು ಗಳಿಸಿಕೊಂಡರು ಹಾಗೂ ಲಕ್ಷಾಂತರ ಕೋಟಿ ರೂಪಾಯಿ ಬೆಲೆಬಾಳುವ ಹಲವು ಲೌಕಿಕ ದಂಧೆಗಳಿಗೆ ಸಾಯಿಬಾಬಾ ಸಂಸ್ಥೆ ಅಲೌಕಿಕ ಮುಸುಕನ್ನು ಒದಗಿಸಿಕೊಡುವ ಸಂಸ್ಥೆಯಾಗಿಯೂ ಬಳಕೆಯಾಯಿತು.

ಆದರೆ 80ರ ದಶಕದಲ್ಲಿ ಸ್ವಶ್ರಮ ಮತ್ತು ಸಾರ್ವಜನಿಕ ಹಿತಾಸಕ್ತಿಯ ಮೌಲ್ಯಗಳು ಜೀವಂತವಾಗಿದ್ದ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದ ಮಧ್ಯಮವರ್ಗ ಈ ಮೌಢ್ಯಗಳ ಬೇರುಗಳನ್ನು ಪ್ರಶ್ನಿಸದಿದ್ದರೂ ಒಟ್ಟಾರೆಯಾಗಿ ಸಾಯಿಬಾಬಾರ ಹಿಂದಿದ್ದ ಪ್ರಭಾವಲಯವನ್ನು ಪ್ರಶ್ನಿಸುತ್ತಲೇ ಬಯಲುಗೊಳಿಸುತ್ತಾ ಬಂದರು. ಉಂಗುರ ಕೊಡುವ ಸಾಯಿಬಾಬಾ ಕುಂಬಳಕಾಯಿ ಏಕೆ ಕೊಡಲು ಸಾಧ್ಯವಿಲ್ಲ, ಶೂನ್ಯದಲ್ಲೇ ಎಲ್ಲಾ ಸೃಷ್ಟಿಸಲು ಸಾಧ್ಯವಿದ್ದರೆ ಸಮುದ್ರದಲ್ಲಿ ಬೆರಳದ್ದಿ ಪೆಟ್ರೋಲ್ ಮಾಡಿಬಿಟ್ಟರೆ ದೇಶದ ಹಲವು ಕಷ್ಟಗಳು ತೀರುತ್ತದಲ್ಲ ಎಂಬ ಕೋವೂರ್, ಎಚ್. ನರಸಿಂಹಯ್ಯ ಇನಿತರರ ವಾದ ಸಮಾಜದಲ್ಲಿ ಸಾಯಿಬಾಬಾರ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿತು. ಅದೇ ಸಮಯದಲ್ಲಿ ಸಾಯಿಬಾಬಾ ಆಶ್ರಮದಲ್ಲಿ ನಡೆದ ಆಸ್ತಿ ವಿವಾದದ ಹಿನ್ನೆಲೆಯಲ್ಲಿ ನಡೆದ ನಾಲ್ಕು ಕೊಲೆಗಳೂ ಸಹ ಸಾಯಿಬಾಬಾರ ಪ್ರಭಾವಲಯವು ವಿಸ್ತರಿಸುವುದಕ್ಕೆ ಅಡ್ಡಿಯಾಯಿತು.

ಆದರೆ 1991ರ ಜಾಗತೀಕರಣದ ನೀತಿಗಳು ಈ ದೇಶದ ಪ್ರಜಾತಂತ್ರ, ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಆಶಯದ ಮೂಲಕ್ಕೆ ಕೊಡಲಿಪೆಟ್ಟು ಹಾಕಿದವು. ಅದು ಈವರೆಗೆ ಜನರಿಗೆ ಜವಾಬುದಾರರಾಗಿರಬೇಕಾದ ಸರ್ಕಾರವನ್ನು ಸ್ಥಳಾಂತರಿಸಿ ಅದರಲ್ಲಿ ಜನರ ನೇರ ನಿಯಂತ್ರಣಕ್ಕೆ ಒಳಪಡದ ಬಲವಿದ್ದವರು ಮಾತ್ರ ಬದುಕಬಹುದಾದ ಮಾರುಕಟ್ಟೆಯೆಂಬ ಕಸಾಯಿಖಾನೆಗೆ ಜನರನ್ನು ದೂಡಿತು. ಇದರಿಂದ ಜನರ ಅತಂತ್ರತೆ ಇನ್ನಷ್ಟು ಹೆಚ್ಚಾಗಿ ಪರಾವಲಂಬಿ ಮನೋಭಾವ ಇನ್ನಷ್ಟು ಬೇರುಬಿಡುವಂತಾಯಿತು. ತಾನು ಕಷ್ಟಪಟ್ಟು ಒಂದೊಂದೇ ಹನಿಯನ್ನು ಶೇಖರಿಸಿ ರೂಪುಗೊಂಡ ಮಧ್ಯಮವರ್ಗಕ್ಕಿಂತ ಜಾಗತೀಕರಣದಿಂದ ಮತ್ತು ಮಾರುಕಟ್ಟೆ ನೀತಿಯಿಂದ ದಿಢೀರ್ ಸಂಪನ್ನರಾದ ಒಂದು ನವ ಶ್ರೀಮಂತ ವರ್ಗ ಈ ಕಾಲಘಟ್ಟದಲ್ಲಿ ಉದಯವಾಯಿತು. ಈ ನವ ಮೇಲ್‌ಮಧ್ಯಮ ವರ್ಗದ ಸುಸಂಪನ್ನತೆಗೆ ಅದರ ಶ್ರಮಕ್ಕಿಂತ, ಪ್ರತಿಭೆಗಿಂತ ಮಾರುಕಟ್ಟೆಯ ಒಲವೇ ಕಾರಣವಾದ್ದರಿಂದ ಈ ನವ ಮಧ್ಯಮವರ್ಗದಲ್ಲಿ ವೈಚಾರಿಕತೆ, ವೈಜ್ಞಾನಿಕತೆಗಿಂತ ಹೆಚ್ಚಾಗಿ ಅದೃಷ್ಟದಲ್ಲಿ, ಮಾರುಕಟ್ಟೆಯ ಆಶೀರ್ವಾದದಲ್ಲಿ, ಅದನ್ನು ದೊರಕಿಸಿಕೊಡಬಹುದಾದ ಅತಿಮಾನವರಲ್ಲಿ ನಂಬಿಕೆ ಇಡುವುದು ಒಂದು ಮೌಲ್ಯವೂ ಜೀವನ ಶೈಲಿಯೂ ಆಯಿತು. ಇಂದಿಗೂ ನಗರಗಳಲ್ಲಿ ಸಾಯಿಬಾಬಾನ ಭಕ್ತರು ಈ ನವ ಶ್ರೀಮಂತರೇ ಆಗಿರುತ್ತಾರೆ. ಮತ್ತು ಅವರ ಜೀವನ ದೃಷ್ಟಿ ಬಹುಮಾಡಿ ಪ್ರಜಾತಂತ್ರ ವಿರೋಧಿ ಮಾರುಕಟ್ಟೆ ಪರ ವಕ್ತಾರಿಕೆಯೇ ಆಗಿರುತ್ತದೆ. ಆಧ್ಯಾತ್ಮಿಕವಾಗಿ ಮಾನವಾತೀತ ಶಕ್ತಿಗಳ ಎದುರು ಶರಣಾಗುವುದೇ ಈ ವರ್ಗದ ಆಧ್ಯಾತ್ಮಿಕ ಮೌಲ್ಯವೂ ಆಗಿರುತ್ತದೆ. ಈ ವರ್ಗ ಈ ಕಾಲಘಟ್ಟದಲ್ಲಿ ಸಮಾಜದಲ್ಲಿ ನೇತಾರಿಕೆಯ ಮತ್ತು ವಕ್ತಾರಿಕೆಯ ಸ್ಥಾನವನ್ನೂ ಪಡೆದಿದ್ದರಿಂದಲೇ ಪವಾಡಗಳ ಬಯಲಿಂದ ಮಂಕಾಗಿದ್ದ ಸಾಯಿಬಾಬಾ ಮತ್ತೆ ದೇವಮಾನವರ ಸ್ಥಾನಕ್ಕೆ ಪರ್ಯಾಯ ಸರ್ಕಾರದ ಸ್ಥಾನಕ್ಕೆ ಏರಿದ್ದು.

ಆದರೆ ಅದೇ ಸಮಯದಲ್ಲಿ ಸರ್ಕಾರ ಶಿಕ್ಷಣ, ಆರೋಗ್ಯ ಇನ್ನಿತರ ಜನತೆಯ ಅತ್ಯಗತ್ಯ ಕ್ಷೇತ್ರಗಳಿಂದ ಹಿಂದೆ ಸರಿಯುತ್ತಿತ್ತು. ಸಾಯಿಬಾಬಾ ತಮ್ಮ ಟ್ರಸ್ಟ್ ಮೂಲಕ ಕುಡಿಯುವ ನೀರು ಮತ್ತು ಹೈಟೆಕ್ ಆಸ್ಪತ್ರೆಯ ಸೌಲಭ್ಯವನ್ನು ಬಡಜನರಿಗೂ ವಿಸ್ತರಿಸಿ ಸರ್ಕಾರದಿಂದ ವಂಚಿತಗೊಂಡು ಕಂಗಾಲಾಗಿದ್ದ ಜನರ ಕಣ್ಣಲ್ಲಿ ನಡೆದಾಡುವ ದೇವರೇ ಆಗಿಬಿಟ್ಟರು. ಆದರೆ ಈ ಆಸ್ಪತ್ರೆ ಮತ್ತು ಶಿಕ್ಷಣವನ್ನು ದೊರಕಿಸಲು ಬೇಕಾಗಿದ್ದ ಸಂಪನ್ಮೂಲ ಸಾಯಿಬಾಬಾ ಸಂಸ್ಥೆ ಪಡೆದುಕೊಂಡಿದ್ದು ಹೇಗೆ? ಅಷ್ಟು ಹಣ ಒಂದು ಸರ್ಕಾರದ ಬಳಿ ಇರುವುದಿಲ್ಲವೇ? ಎಂಬ ಪ್ರಶ್ನೆಗಳನ್ನು ಯಾರೂ ಕೇಳದೇ ಸಾಯಿಬಾಬಾರ ಸಮಾಜ ಸೇವೆಯನ್ನು ವಾಚಾಮಗೋಚರವಾಗಿ ಹೊಗಳಲು ಪ್ರಾರಂಭಿಸಿದ್ದಾರೆ. ಅದರಲ್ಲೂ ಸಾಯಿಬಾಬಾ ನಿಧನದ ನಂತರ ಅವರ ಪವಾಡ ಇತ್ಯಾದಿಗಳ 1991ರ ಪೂರ್ವಾಶ್ರಮದ ಅವತಾರವನ್ನು ಖಂಡಿಸಿದ ಕೆಲವೇ ಕೆಲವು ಮಾಧ್ಯಮಗಳೂ ಸಹ ನಂತರದಲ್ಲಿ ಅವರು ಮಾಡಿದ ಕುಡಿಯುವ ನೀರಿನ ಯೋಜನೆ ಮತ್ತು ಒದಗಿಸಿದ ಆಸ್ಪತ್ರೆ ಸೌಲಭ್ಯಗಳೇ ನಿಜವಾದ ಪವಾಡ, ಅವರ ಜಾತ್ಯತೀತ ಮಾನವೀಯತೆ ಇವೆಲ್ಲವೂ ಹೆಚ್ಚೂ ಕಡಿಮೆ ಅವರು ದೇವಮಾನವನಿಗೆ ಸಮ ಎಂಬುದನ್ನು ರುಜುವಾತು ಮಾಡುತ್ತದೆ ಎಂದು ಬರೆಯುತ್ತಿವೆ. ಇನ್ನುಳಿದ ಮಾಧ್ಯಮಗಳಂತೂ ಸಾಯಿಬಾಬಾ ಸಾಮಾನ್ಯ ಮನುಷ್ಯರಂತೆ ಸತ್ತರೂ ಈ ಕಾಲದಲ್ಲೂ ಆತ ದೈವಾಂಶ ಸಂಭೂತ ಮತ್ತೆ ಆತ ಪುನರ್ಜನ್ಮ ಎತ್ತುತ್ತಾನೆ ಎನ್ನುವಂತೆಯೇ ಬಿತ್ತರಿಸುತ್ತಿವೆ. ಅದೇ ರೀತಿ ಪ್ರಭುತ್ವವೂ ಸಹ ಸಾಯಿಬಾಬಾರನ್ನು ದೈವೀ ಮಾನವ ಮತ್ತು ಜನತೆಯಿಂದ ಆಯ್ಕೆಯಾದ ಸರ್ಕಾರಕ್ಕೆ ಪರ್ಯಾಯವಾದ ಮತ್ತು ಅದಕ್ಕಿಂತಲೂ ಮಿಗಿಲಾದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಶಕ್ತಿ ಕೇಂದ್ರವೆಂದು ಅಧಿಕೃತವಾದ ಮಾನ್ಯತೆ ನೀಡುತ್ತಿದೆ.

ಇದರ ಹಿಂದೆ ಒಂದು ವ್ಯವಸ್ಥಿತ ಷಡ್ಯಂತ್ರವಿದೆ. ಇದು ಪ್ರಭುತ್ವ ಜನರ ಕಲ್ಯಾಣ ಕಾರ್ಯಕ್ರಮಗಳಿಂದ ಹಿಂತೆಗೆಯುವುದನ್ನು, ಜನರಲ್ಲಿ ತಮಗಿಂತ ಹೆಚ್ಚಾಗಿ ಮಾನವಾತೀತ ಶಕ್ತಿಗಳಲ್ಲಿ ನಂಬಿಕೆ ಇಡುವುದನ್ನು, ಸ್ವಶ್ರಮ ಮತ್ತು ಸ್ವಾವಲಂಬನೆಗಳಿಗಿಂತ ಅದೃಷ್ಟ ಮತ್ತು ಪವಾಡಗಳಲ್ಲಿ ನಂಬಿಕೆ ಇಡುವಂಥ ವ್ಯವಸ್ಥೆಯನ್ನು ಪೋಷಿಸುವ ಅತ್ಯಂತ ಪ್ರಜಾತಂತ್ರ ವಿರೋಧಿ ಮಾನಸಿಕತೆಯನ್ನು ಪೋಷಿಸುವ ಹುನ್ನಾರ. ಸಹಾಯ ಮಾಡಿದವರನ್ನು ನೆನೆಯುವ ಜನಸಾಮಾನ್ಯರ ಸಹಜ ಭಾವನೆಗಳನ್ನು ದುರುಪಯೋಗಪಡಿಸಿಕೊಂಡು ಜನರನ್ನು ಶಾಶ್ವತವಾಗಿ ದೈನೇಸಿಗಳನ್ನಾಗಿ ಮಾಡುವ ಹುನ್ನಾರ ಇದಾಗಿದೆ.ಜನರ ಪ್ರಶ್ನಿಸುವ ಮನೋಭಾವವನ್ನೇ ಚಿವುಟಿಹಾಕುವ ಯತ್ನ.

'Why People believe in weird things' ಎಂಬ (ಜನರೇಕೆ ಅಸಂಗತ ವಿಷಯಗಳಲ್ಲಿ ನಂಬಿಕೆ ಇಡುತ್ತಾರೆ?) ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ ಅಮೆರಿಕದ ಪ್ರಖ್ಯಾತ ವಿಚಾರವಾದಿ ಸ್ಟೀಫನ್ ಜೇ ಗೌಲ್ಡ್ ಎಂಬುವರು "Skepticism is the agent of reason against organized irrationalism-and is therefore one of the keys to human and social decency" ಎಂದು ಹೇಳುತ್ತಾರೆ. ಅಂದರೆ "ಅನುಮಾನಿಸುವುದು ಸಂಘಟಿತ ಮೌಢ್ಯದ ವಿರುದ್ಧ ವಿಚಾರವಾದದ ಉಪಕರಣವಾಗಿರುತ್ತದೆ. ಆದ್ದರಿಂದಲೇ ಅದು ಮಾನವೀಯ ಮತ್ತು ಸಾಮಾಜಿಕ ಆರೋಗ್ಯವನ್ನು ಸಾಧಿಸಲು ಒಂದು ಪ್ರಮುಖ ಸಾಧನವೂ ಆಗುತ್ತದೆ" ಎಂದು ಹೇಳುತ್ತಾರೆ. ಸಾಯಿಬಾಬಾರಂಥ ಸಂಘಟಿತ ಮೌಢ್ಯದ ವಿರುದ್ಧ ಎಲ್ಲಿಯೂ ಒಂದು ಅನುಮಾನದ ಎಳೆಯೂ ಕಾಣದಿರುವುದು ನಮ್ಮ ಪ್ರಜಾತಂತ್ರ ಎಷ್ಟು ಅನಾರೋಗ್ಯವಾಗಿದೆ ಎಂಬುದರ ಸಂಕೇತವಾಗಿಲ್ಲವೇ? ●

ಒಂದು ಸರಳ ಮದುವೆ ಹೀಗಿತ್ತು.....



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಈಗ ಮದುವೆ ಸೀಸನ್. ಎಲ್ಲ ಕಡೆ ಮದುವೆ ಛತ್ರಗಳಿಗೆ, ಪುರೋಹಿತರಿಗೆ, ಅಡುಗೆ ಭಟ್ಟರಿಗೆ, ಪಾರ್ಟಿಹಾಲ್‌ಗಳಿಗೆ ಡಿಮ್ಯಾಂಡೋ ಡಿಮ್ಯಾಂಡು. ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡುವ ಮೂಲಕ ತಮ್ಮ ಐಶ್ವರ್ಯವನ್ನು, ಸಮಾಜದಲ್ಲಿನ ತಮ್ಮ ಸ್ಥಾನಮಾನವನ್ನು ತೋರಿಸಿಕೊಳ್ಳಲು ಸಾವಿರಾರು ತಂದೆತಾಯಂದಿರು ಯತ್ನಿಸುತ್ತಿದ್ದಾರೆ. ಇನ್ನು ಮದುವೆ ಆಗುತ್ತಿರುವ ವಧುವರರು ಯಾರಿಗೂ ಅರ್ಥವಾಗದ ಸಂಸ್ಕೃತ ಭಾಷೆಯಲ್ಲಿ ಪುರೋಹಿತನೊಬ್ಬ ಪಠಿಸುವ 'ಮಂತ್ರ'ಗಳಿಂದಾಗಿಯೇ ತಮ್ಮ ವಿವಾಹ ಅಧಿಕೃತವಾಯಿತೆಂಬ ಭ್ರಮೆಯಲ್ಲಿ ಮುಳುಗುತ್ತಿದ್ದಾರೆ. ಇನ್ನು ಇಂಥ ಮದುವೆಗಳಿಗೆ ಹಾಜರಾಗುವ ಜನ ಗಡದ್ದಾಗಿ ತಿಂದಿದ್ದರೂ "ಬರೇ ನಾಲ್ಕು ಸ್ವೀಟ್ಸ್ ಮಾಡಿಸಿದ್ದರು, ಇವರಿಗೇನು ಬರ?" ಎಂದು ಎಲೆಅಡಿಕೆ ಮೇಯುತ್ತಾ ಮನೆಗೆ ಹಿಂತಿರುಗುತ್ತಾರೆ.

ಇನ್ನು ಸ್ಥಾನಮಾನ ಎಂದೂ, ಸಂಪ್ರದಾಯ ಎಂದೂ ತಮ್ಮ ಹೆಣ್ಣುಮಕ್ಕಳ ಮದುವೆಗೆ ಮಧ್ಯಮವರ್ಗ ಮತ್ತು ಕೆಳವರ್ಗದ ಜನ ಸಾಲಸೋಲ ಮಾಡಿ ವರದಕ್ಷಿಣೆ ನೀಡಿ, ಛತ್ರದಲ್ಲಿ ಮದುವೆ ಮಾಡಿಸಿ ಹೈರಾಣಾಗುತ್ತಿದ್ದಾರೆ.

ಇಷ್ಟೆಲ್ಲ ಖರ್ಚು, ದುಂದುವೆಚ್ಚ, ನಷ್ಟ, ಕಷ್ಟ ಯಾಕೆ? ಸಾವಿರಾರು ಜನಕ್ಕೆ ಊಟ ಹಾಕಿಸಲು ಅವರೇನು ಬಡಬಗ್ಗರೇ? ನೂರಾರು ಜನಕ್ಕೆ ಸೀರೆ, ಬಟ್ಟೆ ಕೊಡಿಸಲು ಅವರೇನು ನಿರ್ಗತಿಕರೇ? ಸಂಪ್ರದಾಯದ ಹೆಸರಲ್ಲಿ ಯಾರೋ ಪುರೋಹಿತ ಹೇಳುವ ಅರ್ಥವಾಗದ ಪದಗಳಿಗೆ ಯಾಕಿಷ್ಟು ಮನ್ನಣೆ? ಇನ್ನು ವರನಿಗೆ ನಿಮ್ಮ ಮಗಳನ್ನು ಕೊಡುವುದಲ್ಲದೆ ಅದರೊಂದಿಗೆ ವರದಕ್ಷಿಣೆ ಎಂಬ ಭಕ್ಷೀಸನ್ನೂ ನೀಡುವಷ್ಟು ನಿಮ್ಮ ಮಗಳು ತುಚ್ಛಳೆ? ಯಾವಾಗ ನಮ್ಮ ಜನ ವರದಕ್ಷಿಣೆಯಂತಹ ಪಿಡುಗಿನಿಂದ ಮತ್ತು ಶಾಸ್ತ್ರೋಕ್ತದ ಹೆಸರಲ್ಲಿ ಪುರೋಹಿತಶಾಹಿಗಳು ನಡೆಸುವ ಕಪಟತನದಿಂದ ಹೊರಬರುವುದು?

ಇದನ್ನೆಲ್ಲ ಯೋಚಿಸುತ್ತಿರುವಾಗ ಇತ್ತೀಚೆಗೆ ನಡೆದ ಒಂದು ಸುಂದರ ಮತ್ತು ಸರಳ ಮದುವೆ ನೆನಪಾಗುತ್ತಿದೆ.

ಅವರ ಹೆಸರು ಕೆಂಪೇಗೌಡ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಉಳ್ಳಾಗಾಳ ಹಳ್ಳಿಯಲ್ಲಿ ಕೆಂಪೇಗೌಡರು ಕೃಷಿಕರಾಗಿದ್ದಾರೆ. ಅವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗನಿದ್ದಾನೆ. ಕೆಂಪೇಗೌಡರು ಕಳೆದ ಮೂರು ದಶಕಗಳಿಂದ ಪತ್ರಿಕೆಯ ಅಪ್ಪಟ ಅಭಿಮಾನಿಯಾಗಿದ್ದಾರೆ. ಎಷ್ಟರಮಟ್ಟಿಗೆ ಅಂದರೆ ಗೌಡರ ಪತ್ನಿ ಸಾವಿತ್ರಮ್ಮನವರು ಹೇಳುವಂತೆ: "ಆ ವಾರದ ಪತ್ರಿಕೆ ನಮ್ಮ ಹಳ್ಳಿಯಲ್ಲಿ ಸಿಗಲಿಲ್ಲವೆಂದರೆ ಮಳವಳ್ಳಿಗೆ ಹೋಗಿ ತರುತ್ತಾರೆ. ಕೆಲವೊಮ್ಮೆ ಅಲ್ಲೂ ಸಿಗದಿದ್ದರೆ ಮಂಡ್ಯಕ್ಕೋ, ಮೈಸೂರಿಗೋ ಹೋಗಿ ತರುತ್ತಾರೆ."

ಮೂವತ್ತು ವರ್ಷಗಳಿಂದ ಕೆಂಪೇಗೌಡರು ಪತ್ರಿಕೆಯನ್ನು ಓದುತ್ತಾ ಅದರಿಂದ ಪ್ರಭಾವಿತರಾಗಿದ್ದರೂ ಅವರೆಂದೂ ಅಪ್ಪನನ್ನಾಗಲಿ, ನನ್ನನ್ನಾಗಲಿ ಮಾತನಾಡಿಸಿದವರಲ್ಲ, ನಮ್ಮ ಆಫೀಸಿಗೆ ಫೋನ್ ಮಾಡಿದವರಲ್ಲ, ಅಪ್ಪ ಹೋದಾಗ ಮಾತ್ರ ಆಫೀಸಿಗೆ ಬಂದು ಅವರನ್ನು ನೋಡಿ ಹೋಗಿದ್ದರಂತೆ.

ಇಂತಹ ಕೆಂಪೇಗೌಡರು ನಮ್ಮ ಸ್ನೇಹಿತ [illegible]ಗೌಡರ ಮೂಲಕ ಕಳೆದ ಫೆಬ್ರವರಿ ತಿಂಗಳಲ್ಲಿ ನನಗೆ ಫೋನ್ ಮಾಡಿದರು. ಅದಕ್ಕೆ ಕಾರಣ ಅವರೇ ವಿವರಿಸಿದಂತೆ "ನನ್ನ ಮಗನಿಗೆ ಸರಳ ಮದುವೆ ಮಾಡಿಸುತ್ತಿದ್ದೇನೆ. ಆ ಮದುವೆಯ ಅಧ್ಯಕ್ಷತೆಯನ್ನು ನೀವು ವಹಿಸಬೇಕು. ಪತ್ರಿಕೆಯ ಓದುಗನಾದ ನಾನು ಒಳ್ಳೆಯ ದಿನ, ಒಳ್ಳೆಯ ಕಾಲ ಎಂದೆಲ್ಲ ನೋಡುವುದಿಲ್ಲವಾದ್ದರಿಂದ ನಿಮಗೆ ಯಾವತ್ತು ಬಿಡುವಿರುತ್ತದೋ ಅದೇ ದಿನದಂದು ಮದುವೆ ಕಾರ್ಯಕ್ರಮವನ್ನು ನಿಗದಿ ಪಡಿಸುತ್ತೇನೆ" ಎಂದರು.

ಅದನ್ನು ಕೇಳಿ ನನಗೆ ನಿಜಕ್ಕೂ ಸಂತೋಷವಾಯಿತು. ಒಂದು ಮದುವೆಗೆ ಯಾಕೆ ಅಧ್ಯಕ್ಷತೆ ಎನಿಸಿದರೂ ಸಂಸ್ಕೃತದಲ್ಲಿ ಅದೇನೇನೋ ಬಡಬಡಿಸುವ ಒಬ್ಬ ಪುರೋಹಿತನಿಗಿಂತ ಕನ್ನಡದಲ್ಲಿ ಮಾತನಾಡುವ ನಾನು ವಾಸಿ ಅನ್ನಿಸಿ ಒಪ್ಪಿಕೊಂಡೆ. ಮಾರ್ಚ್ ತಿಂಗಳಲ್ಲಿ ಅಪ್ಪನ ಹುಟ್ಟುಹಬ್ಬದ ಕಾರ್ಯಕ್ರಮ ಇದ್ದದ್ದರಿಂದ ಮಾರ್ಚ್ ಆರರ ನಂತರದ ಯಾವ ಭಾನುವಾರವಾದರೂ ನನಗೆ ಸರಿ ಎಂದೆ. ಮಂಡ್ಯ ನಗರದಲ್ಲಿರುವ ರೈತ ಭವನವು ಮಾರ್ಚ್ 20ರಂದು ಫ್ರೀ ಇದ್ದುದ್ದರಿಂದ ಆ ದಿನವೇ ಮದುವೆ ಎಂದು ಕೆಂಪೇಗೌಡರು ನಿರ್ಧರಿಸಿದರು.

ಇದೆಷ್ಟು ಸರಳ ಮದುವೆ ಎಂದರೆ ಅದಕ್ಕೊಂದು ಕೆಂಪೇಗೌಡರು ಒಂದು ಆಹ್ವಾನ ಪತ್ರಿಕೆಯನ್ನೂ ಪ್ರಕಟಿಸಲಿಲ್ಲ! ಏಕೆಂದರೆ ಅವರು ಆಪ್ತರನ್ನು ಮಾತ್ರ ಮದುವೆಗೆ ಕರೆಯುತ್ತಿದ್ದರಿಂದ ಅದಕ್ಕೆ ಆಹ್ವಾನ ಪತ್ರ, ಅದಕ್ಕೊಂದು ಕಾಗದ, ಕಾಗದಕ್ಕೊಂದು ಮರಗಳ ನಾಶ, ಇವೆಲ್ಲ ಬೇಡ ಎಂದು ಸರಿಯಾಗಿಯೇ ನಿರ್ಧರಿಸಿದ್ದರು. ಹಾಗೆಯೇ ಬೇರೆ ಯಾವುದೋ ಕೆಲಸಕ್ಕೆ ಬೆಂಗಳೂರಿಗೆ ಬಂದಾಗ ಪ್ರಥಮ ಬಾರಿಗೆ ನಮ್ಮ ಆಫೀಸಿಗೆ ಬಂದು ನನ್ನನ್ನು 'ಅಧಿಕೃತ'ವಾಗಿ ಆಹ್ವಾನಿಸಿದರು. ಆಗ ನಾನು ಕೆಂಪೇಗೌಡರನ್ನು ಕೇಳಿದೆ: "ನೀವು ಪತ್ರಿಕೆಯಿಂದ ಪ್ರಭಾವಿತರಾಗಿರುವವರು, ನಿಜ. ಆದರೆ ನಿಮ್ಮ ಮಗ ಕೂಡ ನಿಮ್ಮಂತೆಯೇ ಚಿಂತಿಸುತ್ತಾನೆಯೇ? ಆತನಿಗೂ ಸರಳ ಮದುವೆಯಲ್ಲಿ ನಂಬಿಕೆ ಇದೆಯೇ?"

"ಆತ ಕೂಡ ನಮ್ಮ ಪತ್ರಿಕೆಯ ಓದುಗ. ತನ್ನ ಮದುವೆ ಸರಳವಾಗಿ ನಡೆಯಬೇಕೆಂಬುದು ಆತನ ಆಸೆ ಕೂಡ" ಎಂದು ಕೆಂಪೇಗೌಡರು ಹೇಳಿದಾಗ ಆ ಯುವಕನ ಬಗ್ಗೆ ನನಗೆ ಮೆಚ್ಚುಗೆ ಆಯಿತು.



ಸರಳ ಮದುವೆಯಾದ ಸುಮಾ ಮತ್ತು ವಿನಯ್

ಅಂದಹಾಗೆ ಆ ಹುಡುಗನ ಹೆಸರು ವಿನಯ್. ಆತ ಕೂಡ ತನ್ನ ತಂದೆಯಂತೆಯೇ ಕೃಷಿಕ. ಆತ ಮದುವೆಯಾದ ಸುಮಾ ಕೂಡ ರೈತ ಕುಟುಂಬವೊಂದರ ಹೆಣ್ಣುಮಗಳು. ಆಕೆಯ ತಾಯಿಯ ಹೆಸರು ಲಕ್ಷ್ಮಿ ಮತ್ತು ತಂದೆಯ ಹೆಸರು ಸೋಮೇಗೌಡ. ಆದರೆ ಸುಮಾಳ ಕುಟುಂಬಕ್ಕೆ ಸರಳ ವಿವಾಹ, ಮಂತ್ರ ಮಾಂಗಲ್ಯ ಎಂಬೆಲ್ಲದರ ಬಗ್ಗೆ ಗೊತ್ತಿರಲಿಲ್ಲ. ವಿನಯ್ ಮತ್ತು ಸುಮಾಳ ನಿಶ್ಚಿತಾರ್ಥದ ಸಂದರ್ಭದಲ್ಲೇ ವರದಕ್ಷಿಣೆ ಬಗ್ಗೆ ಸೊಲ್ಲು ಎತ್ತಕೂಡದೆಂದು, ಆಸ್ತಿ ಮಾರಿಯೋ ಸಾಲ ಪಡೆದೋ ಉಳಿತಾಯವನ್ನು ಕರಗಿಸಿಯೋ ಮದುವೆಯ ಶಾಸ್ತ್ರ ಮಾಡಕೂಡದೆಂದು ಮತ್ತು ಈ ಮದುವೆ ಸರಳವಾಗಿ ನಡೆಯಬೇಕೆಂದು ಕೆಂಪೇಗೌಡರು ಆಕೆಯ ಕುಟುಂಬದವರಲ್ಲಿ ಕೇಳಿಕೊಂಡರಂತೆ. ಆದರೆ ಇಂತಹದ್ದೆಲ್ಲ ಅವರಿಗೆ ಹೊಸ ವಿಚಾರವಾದ್ದರಿಂದ "ಅದೆಂತಹ ಮದುವೆ? ಹಾಗೆಲ್ಲ ಮಾಡೋದಕ್ಕೆ ಆಗುತ್ತಾ, ಜನ ಏನಂತಾರೆ" ಎಂದು ತಕರಾರು ಎತ್ತಿದರಂತೆ.

"ಆದರೆ ನಾನು ಮತ್ತು ನನ್ನ ಮಗ ನಮ್ಮ ಪಟ್ಟು ಬಿಡಲಿಲ್ಲ" ಎಂದ ಕೆಂಪೇಗೌಡರು "ನಾವು ಹುಡುಗನ ಕಡೆಯವರಾದ್ದರಿಂದ ಅವರು ಒಪ್ಪಿಕೊಂಡರು ಎನಿಸುತ್ತದೆ. ನಾವು ಹೆಣ್ಣಿನ ಕಡೆಯವರಾಗಿದ್ದರೆ ಅವರು ಒಪ್ಪಿಕೊಳ್ಳುವುದು ಕಷ್ಟವಾಗುತ್ತಿತ್ತೇನೊ" ಎಂದು ನಕ್ಕರು. ಅದಕ್ಕೆ ಕಾರಣವೂ ಇತ್ತು. ಇದೇ ಕೆಂಪೇಗೌಡರು ತಮ್ಮ ಮೊದಲ ಪುತ್ರಿಯ ವಿವಾಹವನ್ನು ಸರಳವಾಗಿ ಆಚರಿಸಲು ಬಯಸಿದ್ದರೂ ಹುಡುಗನ ಕಡೆಯವರು ಹಠ ಹಿಡಿದು ಅದನ್ನು 'ದೊಡ್ಡ'ದಾಗಿ ನಡೆಸಿಕೊಡುವಂತೆ ಮಾಡಿದ್ದರು.

ಮದುವೆಯ ದಿನ ನಾನು ಮಂಡ್ಯದ ರೈತಭವನಕ್ಕೆ ಹೋಗುವಷ್ಟರಲ್ಲಿ ಮೈಸೂರಿನಿಂದ ವಿಚಾರವಾದಿ ಉಗ್ರನರಸಿಂಹೇಗೌಡರೂ ಆಗಮಿಸಿದ್ದರು. ನಮ್ಮ ರಾಮದಾಸ್ ಅವರ ಒಡನಾಡಿಯಾದ ಉಗ್ರನರಸಿಂಹೇಗೌಡರು ಈಗಾಗಲೇ ನೂರಾರು ಸರಳ ಮತ್ತು ಅಂತರಜಾತಿ ವಿವಾಹಗಳನ್ನು ಸಿಂಪಲ್ ಆಗಿ ನೆರವೇರಿಸಿದ್ದಾರೆ.

ಮದುವೆ ಮನೆಯಾದ ರೈತಭವನಕ್ಕೆ ಹೋಗುತ್ತಿದ್ದಂತೆ "ಮದುವೆ ಗಂಡು ಎಲ್ಲಿ?" ಎಂದು ಕೇಳಿದೆ. ಆಗ ವಿನಯ್‌ನನ್ನು ಕೆಂಪೇಗೌಡರು ಪರಿಚಯಿಸಿದರು. ಬೂದು ಬಣ್ಣದ ಪ್ಯಾಂಟ್ ಮತ್ತು ನೀಲಿ ಶರ್ಟ್ ಧರಿಸಿದ್ದ ವಿನಯ್ ಓರ್ವ ಆರೋಗ್ಯವಂತ ದೇಹ ಮತ್ತು ಮನಸ್ಸಿನ ಯುವಕನಂತೆ ಕಂಡ. ಅವನಿಗೆ ಶಹಭಾಷ್ ಹೇಳಿದೆ. ಎಲ್ಲ ಮದುವೆಗಳಂತೆ ಅಲ್ಲಿಯೂ ವಧು ಕಡೆಯ ಹೆಣ್ಣುಮಕ್ಕಳು ಆಕೆಗೆ ಶೃಂಗಾರ ಮಾಡುತ್ತಾ ತಾವೂ ಸಿದ್ಧರಾಗುತ್ತಿದ್ದರು. ರಾಹುಕಾಲ, ಗೀಹುಕಾಲ ಎಂಬುದೆಲ್ಲ ಅಲ್ಲಿ ಅಪ್ರಸ್ತುತವಾಗಿದ್ದರಿಂದ 11 ಗಂಟೆಗೆ ನಿಗದಿಯಾಗಿದ್ದ ಮದುವೆ ಸುಮಾರು 11.30ಕ್ಕೆ ಪ್ರಾರಂಭವಾಯಿತು. ವಧು-ವರ ಮಾತ್ರವಲ್ಲದೆ, ಎರಡೂ ಕಡೆಯ ಹಿರಿಯರನ್ನು ವೇದಿಕೆ (ಅಲ್ಲಿ ಮಂಟಪ ಎಂಬುದೂ ಇರಲಿಲ್ಲ!) ಮೇಲೆ ಕರೆಯಲಾಯಿತು. ಜೊತೆಗೆ ಉಗ್ರನರಸಿಂಹೇಗೌಡರು ಮತ್ತು ನನ್ನನ್ನು ಕೂಡ.

ಒಂದು ತಟ್ಟೆಯಲ್ಲಿ ಅಕ್ಷತೆ, ತೆಂಗಿನಕಾಯಿಯ ಮೇಲೆ ಮಾಂಗಲ್ಯ ಮತ್ತು ಎರಡು ಹೂವಿನಹಾರಗಳನ್ನು ತಂದಿಡಲಾಯಿತು. ಉಗ್ರನರಸಿಂಹೇಗೌಡರು ವಿನಯ್ ಮತ್ತು ಸುಮಾಳಿಗೆ ಮಾನವಮಂಟಪ ರೂಪಿಸಿರುವ ವಿವಾಹ ಪ್ರಮಾಣ ವಚನವನ್ನು ಬೋಧಿಸಿದರು.

ಆ ಪ್ರಮಾಣ ವಚನದ ಸಾರಾಂಶ ಹೀಗಿದೆ:

"...... (ತಂದೆ ಹೆಸರು) ಮತ್ತು ..... (ತಾಯಿ ಹೆಸರು) ಅವರ ಪುತ್ರ/ಪುತ್ರಿಯಾದ ನಾನು...... (ವಧು/ವರನ ಹೆಸರು) ಈ ದಿನ .... (ವಧು/ವರನ ಹೆಸರು) ಮದುವೆ ಆಗುತ್ತಿದ್ದೇನೆ. ನಾವಿಬ್ಬರು ಪರಸ್ಪರ ಒಪ್ಪಿ, ಪ್ರೀತಿಸಿ, ಸರಳವಾಗಿ ಮದುವೆ ಆಗುತ್ತಿದ್ದೇವೆ. ಈ ಮದುವೆಗೆ ಪ್ರೀತಿ, ವಿಶ್ವಾಸಗಳೇ ಆಧಾರವೆಂಬ ತಿಳಿವಳಿಕೆಯನ್ನು ಹೊಂದಿದ್ದೇವೆ. ಈ ರೀತಿ ಮದುವೆ ಆಗುವ ಮೂಲಕ ಪತಿ-ಪತ್ನಿಯರಾಗಿ ಪರಸ್ಪರ ಸಮಾನತೆ ಮತ್ತು ವಿಶ್ವಾಸದಿಂದ ಬಾಳುತ್ತೇವೆಂದು ನಿಮ್ಮೆಲ್ಲರ ಸಮ್ಮುಖದಲ್ಲಿ ಸತ್ಯದ ಹೆಸರಿನಲ್ಲಿ ಪ್ರಮಾಣ ಮಾಡುತ್ತೇವೆ."

ಅಷ್ಟೇ! ಒಂದು ಸುಖ ದಾಂಪತ್ಯಕ್ಕೆ ಪ್ರೀತಿ, ವಿಶ್ವಾಸ, ಸಮಾನತೆ ಮತ್ತು ಹಿರಿಯರ ಆಶೀರ್ವಾದದ ಹೊರತಾಗಿ ಮತ್ತಿನ್ನೇನು ಬೇಕು? ಅದರಲ್ಲೂ, ಈ ಸರಳ ಪ್ರಮಾಣ ವಚನವನ್ನು ಹೆತ್ತವರ ಮತ್ತು ಹಿರಿಯರ ಮುಂದೆ ಸ್ವೀಕರಿಸಿದರೆ ಮುಗಿಯಿತು.

ಅವತ್ತು ನಡೆದದ್ದೂ ಅದೆ. ಈ ಪ್ರಮಾಣ ವಚನವನ್ನು ವಧು ಮತ್ತು ವರ ಸ್ವೀಕರಿಸಿದ ನಂತರ ಸುಮಾಳ ಕೊರಳಿಗೆ ವಿನಯ್ ಮಾಂಗಲ್ಯವನ್ನು ಕಟ್ಟಿದ. ಇಬ್ಬರೂ ಹೂವಿನ ಹಾರವನ್ನು ಪರಸ್ಪರ ಹಾಕಿದರು. ಹಿರಿಯರು ಬಂದು ಇಬ್ಬರಿಗೂ ಅಕ್ಷತೆ ಹಾಕಿ ಹಾರೈಸಿದರು.


ಅಧ್ಯಕ್ಷತೆ ವಹಿಸಿದ್ದ ನಾನು ಖ್ಯಾತ ಇರಾನಿ ತತ್ವಜ್ಞಾನಿ ಖಲೀಲ್ ಗಿಬ್ರಾನ್ ಸುಖಿ ದಾಂಪತ್ಯ ಹೇಗಿರಬೇಕೆಂದು ಕುರಿತು ಬರೆದಿರುವ ಕವನದ ಅನುವಾದವನ್ನು ಓದಿದೆ. ನಂತರ ಇಂತಹ ಸರಳ ಮದುವೆಗಳು ಹೆಚ್ಚಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿ ಹೊಸ ದಂಪತಿಗಳಿಗೆ ಒಳ್ಳೆಯದಾಗಲೆಂದು ಆಶೀರ್ವದಿಸಿದೆ. ಇದೆಲ್ಲ ಎಷ್ಟು ಚೆನ್ನಾಗಿ ಮತ್ತು ಅಚ್ಚುಕಟ್ಟಾಗಿ ನಡೆಯಿತೆಂದರೆ ಇಂತಹ ಮದುವೆಯನ್ನು ಮೊದಲ ಬಾರಿಗೆ ನೋಡಿದ ಡಾಕ್ಟರ್ ಒಬ್ಬರು ಇದನ್ನು ತುಂಬಾ ಮೆಚ್ಚಿದರು. ಮಾತ್ರವಲ್ಲ ಇತರೆ ಮದುವೆಗಳಿಗಿಂತ ಇದು ಅರ್ಥಪೂರ್ಣ ಎಂದೂ ಹೇಳಿದರು.

ಕೇವಲ ಅರ್ಧಗಂಟೆಯಲ್ಲಿ ಮದುವೆ ಕಾರ್ಯಕ್ರಮ ಮುಗಿದುಹೋಯಿತು. ಆನಂತರ ಎಲ್ಲರಿಗೂ ಅದೇ ರೈತ ಭವನದ ಕಾಂಪೌಂಡಿನಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು, ಅದು ಕೂಡ ಸಿಂಪಲ್ ಊಟ. ಪಲಾವ್, ಮೊಸರನ್ನ, ಜಿಲೇಬಿ ಮತ್ತು ವಡೆ. ಅಷ್ಟೇ! ಹಸಿವನ್ನು ತಣಿಸಲು ಇದಕ್ಕಿಂತ ಏನು ಬೇಕು?

ಈ ಇಡೀ ಮದುವೆಗೆ ಕೆಂಪೇಗೌಡರು ಹೆಚ್ಚೆಂದರೆ (ಬಟ್ಟೆ, ಊಟ, ರೈತ ಭವನದ ಬಾಡಿಗೆ, ಮಾಂಗಲ್ಯ ಇತ್ಯಾದಿ) 15,000 ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದರು. ಅದೇರೀತಿ ಸುಮಾಳ ತಂದೆತಾಯಿ ಕೂಡ ಅದಕ್ಕಿಂತ ಹೆಚ್ಚು ಹಣ ವೆಚ್ಚ ಮಾಡಿರಲಿಕ್ಕಿಲ್ಲ.

ಇತರೆ ಮದುವೆಗಳಷ್ಟೆ ಅಧಿಕೃತವಾಗಿದ್ದ ಈ ಮದುವೆ ಇತರೆ ಸಂಭ್ರಮಗಳಿಗಿಂತ ಎಲ್ಲ ರೀತಿಯಿಂದಲೂ ಅರ್ಥಪೂರ್ಣವಾಗಿತ್ತು.


ಇವತ್ತಿನ ಮದುವೆ ಸೀಸನ್‌ನಲ್ಲಿ ಸುತ್ತಲೂ ನಡೆಯುತ್ತಿರುವ ಆರ್ಭಟವನ್ನು ಕಂಡು ಈ ಸರಳ ಮದುವೆಯ ಬಗ್ಗೆ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿತು. ಇದನ್ನು ಓದಿಯಾದರೂ ಇತರೆ ತಂದೆ ತಾಯಂದಿರು ಮತ್ತು ಯುವಕ ಯುವತಿಯರು ಕೆಂಪೇಗೌಡ, ಸಾವಿತ್ರಮ್ಮ, ವಿನಯ್, ಸೋಮೇಗೌಡ, ಲಕ್ಷ್ಮಿ ಮತ್ತು ಸುಮಾಳಂತೆ ಸರಳ ವಿವಾಹಗಳನ್ನು ಪ್ರೋತ್ಸಾಹಿಸಲಿ ಎಂದು ಆಶಿಸುತ್ತೇನೆ...



ಮೈಸೂರು ಸಚಿವ ರಾಮದಾಸನ ಭೂಸ್ವಾಹಾ ಪುರಾಣಂ


ಮೈಸೂರು ಉಸ್ತುವಾರಿ ಸಚಿವ ರಾಮದಾಸ್ ಒಬ್ಬ ಭೂಗಳ್ಳನೆಂಬ ಸಂಗತಿಯಾಗಲಿ, ಅಕ್ರಮವಾಗಿ ಸಿಕ್ಕಾಪಟ್ಟೆ ಆಸ್ತಿ ಸಂಪಾದಿಸಿದ್ದಾನೆಂಬುದಾಗಲಿ ಹೊಸ ವಿಚಾರವೇನಲ್ಲ. ಈತನ ಬಗ್ಗೆ ಮತ್ತು ಮೈಸೂರಿನ ಭೂಗಳ್ಳರ ಬಗ್ಗೆ 'ಲಂಕೇಶ್' ನಲ್ಲೇ ಹಲವು ಬಾರಿ ವರದಿಗಳು ಬಂದಿವೆ. ಆದರೆ ಈಗ ಲಭ್ಯವಾಗಿರುವ ಹೊಸ ಮಾಹಿತಿಯು ರಾಮದಾಸನು ಇನ್ನೊಬ್ಬ ಸಚಿವ ಗಣಿ ಕಳ್ಳ ಜನಾರ್ದನ ರೆಡ್ಡಿಯ ಅಕ್ರಮ ಗಳಿಕೆಯ ಅರ್ಧ ತೂಕವಾದರೂ ಇದ್ದಾನೆ ಎಂಬುದನ್ನು ರುಜುವಾತುಪಡಿಸುತ್ತಿದೆ.

ಮಂಡ್ಯ ಮೂಲದ ಬ್ರಾಹ್ಮಣ ರಾಮದಾಸ್‌ನದ್ದು ಮೂಲತಃ ಕಡು ಬಡತನದ ಕುಟುಂಬ. ಈತ ಮೈಸೂರಿಗೆ ಬಂದಾಗ ಮೊದಲು ಹುಡುಕಿಕೊಂಡಿದ್ದು ನಾದಬ್ರಹ್ಮ ಹೆಸರಿನ (ಈಗ ಇದು ರಾಮದಾಸ್ ಮನೆಯ ಹೆಸರು) ಗಂಧದಕಡ್ಡಿ ಉಜ್ಜುವ ಕೆಲಸ. ಆನಂತರ ಈತ ಹುಣಸೂರು ರಸ್ತೆಯಲ್ಲಿರುವ ಜೈ ಎಲೆಕ್ಟ್ರಿಕಲ್ ಕಾರ್ಖಾನೆಯಲ್ಲಿ ವಾಚ್‌ಮನ್ ಆಗಿದ್ದ. ಹಾಲಿ ಕೆ.ಆರ್.ನಗರ ಶಾಸಕನಾಗಿರುವ ಭೂಮಾಫಿಯಾದ ಸಾರಾ ಮಹೇಶ್‌ನ ಶಿಷ್ಯನಾಗಿ ರಾಮದಾಸನ ದಂಧೆ ಮತ್ತು ರಾಜಕೀಯ ಶುರುವಾಯಿತು. ಸಾರಾನೇ ಈತನಿಗೆ ಬಂಗಾರಪ್ಪನ ಶಿಷ್ಯ ಸಾರಾಯಿ ದಂಧೆಯ ಗೋವಿಂದರಾಜುವನ್ನು ಪರಿಚಯ ಮಾಡಿಕೊಟ್ಟಿದ್ದು.




ಹಲವರ ಪ್ರಕಾರ ಆಗ ಗೋವಿಂದರಾಜು ಮನೆಯಲ್ಲಿ 'ಬಂ' ಹಣವಿದ್ದು, 'ಬಂ' ಕೇಂದ್ರದ ಕಾಂಗ್ರೆಸ್ ನಾಯಕರನ್ನು ಎದುರು ಹಾಕಿಕೊಂಡಿದ್ದರಿಂದ ಐಟಿ ದಾಳಿ ನಡೆಯುತ್ತೆ ಎಂಬ ವದಂತಿ ಹರಡಿತ್ತಂತೆ. ಆ ದಾಳಿಯ ಸುಳಿವು ಸಿಕ್ಕಕೂಡಲೇ ಗೋವಿಂದರಾಜು ಈ ಸಾರಾ ಮತ್ತು ರಾಮ್ ಕೈಯಲ್ಲಿ ಬಚ್ಚಿಡಲು ಚೀಲಗಟ್ಟಲೆ ಹಣ ಕೊಟ್ಟರಂತೆ. ಆಗ ಇಬ್ಬರೂ ಆ ಕಣದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಲಪಟಾಯಿಸಿದರಂತೆ. ಇದು ಗೊತ್ತಾದಾಗ ಗೋವಿಂದರಾಜು ಕುಟುಂಬ ಇವರಿಬ್ಬರಿಗೂ ಉಗಿದು ಓಡಿಸಿತಂತೆ. ಅದೇ ಹಣವನ್ನು ಇಬ್ಬರೂ ರಿಯಲ್ ಎಸ್ಟೇಟ್‌ಗೆ ಹೂಡಿದರಂತೆ. ರಿಯಲ್ ಎಸ್ಟೇಟಿನ ರುಚಿ ಕಂಡ ನಂತರ ಸರ್ಕಾರಿ ಭೂಮಿಗಳನ್ನು, ದರಖಾಸ್ತು, ಬೀಳು ಕೆರೆ ಕಟ್ಟೆಗಳ ಒತ್ತುವರಿ ಎಲ್ಲಕ್ಕೂ ನಕಲಿ ದಾಖಲೆಗಳನ್ನು ಸೃಷ್ಟಿಸಿ ಆ ಜಾಗಗಳನ್ನು ಲಪಟಾಯಿಸಿದರಂತೆ. ಈ ಅಂತೆ ಕಂತೆಗಳು ಎಷ್ಟು ನಿಜವೋ ಗೊತ್ತಿಲ್ಲ, ಆದರೆ ಆನಂತರದ ದಿನಗಳಲ್ಲಿ ಇವರಿಬ್ಬರೂ ಮೈಸೂರಿನ ಅತೀ ದೊಡ್ಡ ರಿಯಲ್ ಎಸ್ಟೇಟ್ ಡಾನ್‌ಗಳಾಗಿದ್ದಂತೂ ಸತ್ಯ!





ಈ ಮಧ್ಯೆ ರಾಜಕೀಯಕ್ಕೂ ಇವರಿಬ್ಬರು ಅಧಿಕೃತವಾಗಿ ಎಂಟ್ರಿ ಕೊಟ್ಟರು. ರಾಮದಾಸ್ ತನಗೆ ಸರಿಯಾಗಿ ಹೊಂದುವ ಬಿಜೆಪಿಯನ್ನು ಆರಿಸಿಕೊಂಡು ಶಾಸಕ, ಮಂತ್ರಿ ಆಗಿದ್ದರೆ, ಬಿಜೆಪಿಯಲ್ಲೇ ಇದ್ದ ಸಾರಾ ಕಳೆದ ಚುನಾವಣೆಯ ಹೊತ್ತಿಗೆ ಜನತಾದಳವನ್ನು ಸೇರಿ ಶಾಸಕನಾಗಿದ್ದಾನೆ.



600 ಎಕರೆ ಭೂಸ್ವಾಹಾ


ಈಗ್ಗೆ 20 ವರ್ಷಗಳ ಹಿಂದೆ ಮೈಸೂರು ತಾಲ್ಲೂಕು, ಕಸಬಾ ಹೋಬಳಿಯ ಹಿನಕಲ್, ಸಿದ್ದಲಿಂಗಪುರ, ಯರಗನಹಳ್ಳಿ, ಶ್ರೀರಾಂಪುರ ಗ್ರಾಮ ಪಂಚಾಯಿತಿಗಳ ಸುತ್ತಮುತ್ತ ರಾಮದಾಸ್‌ನ ಪಟಾಲಂ ರೈತರಿಗೆ 5-10 ಸಾವಿರ ರೂಪಾಯಿಗಳನ್ನು ಕೊಟ್ಟು ಸುಮಾರು 600 ಎಕರೆ ಭೂಮಿಗೆ ಜೆಪಿಎ ಮಾಡಿಸಿಕೊಂಡಿತ್ತು. ಇದರಲ್ಲಿ ಬಹುಪಾಲು ಆಗ ಶಾಸಕನಾಗಿದ್ದ ರಾಮ್‌ದಾಸನ ಬೇನಾಮಿ ಹೆಸರಿನಲ್ಲಿ ಮಾಡಲಾಗಿತ್ತು. ಹಿನಕಲ್ ಗ್ರಾ.ಪಂ. ವ್ಯಾಪ್ತಿಯ ಮಳಲವಾಡಿಯಲ್ಲಿ (ಈಗಿನ ವಿಜಯನಗರ) ನಗರ ಭೂಮಿತಿ ಕಾಯ್ದೆಯನ್ನು ಉಲ್ಲಂಘಿಸಿ, ಕೃಷಿ ಭೂಮಿಯನ್ನು ಅನ್ಯಕ್ರಾಂತ ಮಾಡಿಸದೆ, ಮೂಡಾ ನೋಟಿಫೈ ಮಾಡಿರುವ ಜಮೀನುಗಳನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಅನುಮತಿಯೂ ಪಡೆಯದೆ ವಿಲೇವಾರಿ ಮಾಡಿ ದ್ದಾರೆ. ಮನೆಗಳು ಇಲ್ಲದಿದ್ದರೂ ಸುತ್ತಾಮುತ್ತಾ ಮನೆಗಳಿವೆ ಎಂದು ಸುಳ್ಳು ದಾಖಲೆ ಸೃಷ್ಟಿಸಿ ನೋಂದಾಯಿಸಿದ್ದಾರೆ. ಖಾತೆ ಮಾಡಿಸಿ, ಕರ್ನಾಟಕ ಭೂ ಸುಧಾರಣೆ ಕಾಯ್ದೆಯ ಕಲಂ 79(ಎ)(ಬಿ) ಉಲ್ಲಂಘಿಸಿ, ನಗರ ಭೂಮಿತಿ ಕಾಯ್ದೆಯ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿ ಕೃಷಿ ಭೂಮಿಯನ್ನು ನಿವೇಶನಗಳನ್ನಾಗಿ ಮಾಡಿ ಮಾರಾಟ ಮಾಡಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ 62 ಕೋಟಿಗಿಂತಲೂ ಅಧಿಕ ನಷ್ಟವಾಗಿದೆ ಎಂದೂ, ಈ ಅವ್ಯವಹಾರದಲ್ಲಿ ಅಧಿಕಾರಿಗಳು ಹಾಗೂ ಗ್ರಾಪಂ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆಂದೂ ಆಗಿನ ಡಿಸಿ ತಾ.ಮ.ವಿಜಯ್ ಭಾಸ್ಕರ್ 1995ರಲ್ಲಿ ಸರ್ಕಾರಕ್ಕೆ ವರದಿ ನೀಡಿದ್ದರು. ವಿಜಯ ಭಾಸ್ಕರ್ ಒಳ್ಳೆಯ ದಕ್ಷ ಅಧಿಕಾರಿ. ವರದಿ ನೀಡುವಾಗ ವಿಶೇಷವಾಗಿ ರಾಮ್‌ದಾಸ್‌ನ ಭೂಗಳ್ಳತನವನ್ನೂ ನಮೂದಿಸಿದ್ದರು. ಮಾತ್ರವಲ್ಲ, ಇದರಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಎ.ರಾಮದಾಸ್‌ರ ಪಾತ್ರ ಮುಖ್ಯವಾಗಿದೆ ಎಂದೂ ನೇರವಾಗಿ ವರದಿಯಲ್ಲಿ ಹೇಳಿದ್ದರು.

ಇದನ್ನು ಆಧಾರವಾಗಿಟ್ಟುಕೊಂಡು, ಜೆಡಿಎಸ್‌ನ ಆಗಿನ ಪಾಲಿಕೆ ಕಾರ್ಪೊರೇಟರ್ ಎಂ.ಸಿ.ಚಿಕ್ಕಣ್ಣ ಹೈಕೋರ್ಟ್‌ನಲ್ಲಿ ಪಿಐಎಲ್ (ಕೇಸ್ ನಂ. 24374/97ರಲ್ಲಿ) ಹಾಕಿದ್ದರು. 5-10-98ರಲ್ಲಿ ಆಗಿನ ಜಿಲ್ಲಾಧಿಕಾರಿ ಪಿ.ಶ್ರೀನಿವಾಸಾಚಾರಿ ಅಫಿಡವಿಟ್ ಹಾಕಿ ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಹೈಕೋರ್ಟ್ ಅದನ್ನು ಒಪ್ಪಿ ರಿಟ್‌ನ್ನು ಖುಲಾಸೆಗೊಳಿಸಿತ್ತು. ಆದರೆ ರಾಮದಾಸ್ ಶಾಸಕನಾಗಿ ಪ್ರಭಾವಿಯಾಗಿದ್ದರಿಂದ ಮತ್ತು ಎಲ್ಲಾ ಪಕ್ಷಗಳ ಭೂಗಳ್ಳರು ಬೆಳೆದಿದ್ದರಿಂದ ಯಾರ ವಿರುದ್ಧವೂ ಜಿಲ್ಲಾಡಳಿತ ಕ್ರಮ ಕೈಗೊಳ್ಳಲಿಲ್ಲ.

ಈ ಮಧ್ಯೆ ಚಿಕ್ಕಣ್ಣನಿಗೆ ರಾಮ್‌ದಾಸ್ ಹಣ ಕೊಟ್ಟು ಆತನ ಬಾಯಿ ಮುಚ್ಚಿಸಿದ ಎಂಬ ಆರೋಪಗಳು ಇವೆ. ಇದೇ ಅವಧಿಯಲ್ಲಿ ಬರೀ ಎ.ರಾಮದಾಸ್ ಎಂದಿದ್ದ ತನ್ನ ಹೆಸರನ್ನು ಎಸ್.ಎ. ರಾಮದಾಸ್ ಎಂದು ಬದಲಿಸಿಕೊಂಡ. ಅಷ್ಟರಲ್ಲಾಗಲೇ ಲಪಟಾಯಿಸಿದ್ದ ಭೂಮಿಯನ್ನು ಸಾವಿರಾರು ನಿವೇಶನಗಳನ್ನಾಗಿ ಪರಿವರ್ತಿಸಿ, ಲಕ್ಷಾಂತರ ರೂಗಳಿಗೆ ಅವುಗಳನ್ನು ಮಾರಾಟ ಮಾಡಿ, ಕೋಟಿಗಟ್ಟಲೆ ಹಣ ಸಂಪಾದಿಸಿದ್ದೂ ಆಗಿತ್ತು.

ಮೇರೆ ಮೀರಿದ ಲೂಟಿ

ಇಷ್ಟೆಲ್ಲ ಮಾಡಿದ ಎಸ್.ಎ.ರಾಮದಾಸ್ ತನ್ನ ಹೆಸರಿನಲ್ಲಿ ಕನಿಷ್ಠ ಒಂದು ಗುಂಟೆ ಜಮೀನನ್ನೂ ಇಟ್ಟುಕೊಳ್ಳಲಿಲ್ಲ. ಬದಲಿಗೆ ತನ್ನ ತಮ್ಮ ಶ್ರೀಕಾಂತ್ ಹೆಸರಿನಲ್ಲಿ ದಂಧೆ ಮುಂದುವರೆಸಿದ. ಬಿಇ ಪದವೀಧರನಾಗಿರುವ ಶ್ರೀಕಾಂತನೂ ಭಾರೀ ಖಾಕಡಾನೇ. ಇಬ್ಬರೂ ಸೇರಿ ಈಗ







ಮೈಸೂರು ಸುತ್ತ ಮುತ್ತ ಸುಮಾರು 3,000 ಎಕರೆ ಜಮೀನನ್ನು ಹೊಂದಿದ್ದಾರೆ. ಸುಮಾರು 5,000 ಕೋಟಿ ತೂಗುವ ಇವರ ವ್ಯವಹಾರ ಮುಂಬೈ ತನಕ ಚಾಚಿದೆ. ಶ್ರೀಕಾಂತ ಈಗ ಹೆಲಿಕಾಪ್ಟರ್‌ನಲ್ಲೇ ಓಡಾಡುತ್ತಾನೆ ಎಂಬ ಸುದ್ದಿಗಳಿವೆ.

ರಾಮದಾಸನ ಅವ್ಯವಹಾರದ ಕುರಿತು ತಾ.ಮ.ವಿಜಯ ಭಾಸ್ಕರ್ ವರದಿ ನೀಡಿದಾಗ್ಯೂ ಸರ್ಕಾರಿ ಭೂಮಿಯನ್ನು ರಾಮದಾಸ್ ಹಾಗೂ ಶ್ರೀಕಾಂತ್ ಸತತವಾಗಿ ಮೇಯುತ್ತಲೇ ಇದ್ದಾರೆ. ಮೂಡಾ ನೋಟಿಫೈ ಮಾಡಿರುವ ಭೂಮಿಗಳನ್ನು ರೈತರಿಂದ ಕಡಿಮೆ ಬೆಲೆಗೆ ಪಡೆದು ಡಿನೋಟಿಫೈ ಮಾಡಿಸುವುದು, ರೈತರಿಗೆ ಕಡಿಮೆ ಬೆಲೆ ನೀಡಿ ಜಿಪಿಎ ಮಾಡಿಸಿಕೊಳ್ಳುವ ರಿಯಲ್ ಎಸ್ಟೇಟ್ ದಂಧೆಯ ದರೋಡೆಯಲ್ಲಿ ಇವರು ಪರಿಣಿತರು. ಹಿನಕಲ್ ಸುತ್ತ ಮುತ್ತಲಿನ ಯಾವ ಆಸ್ತಿಯನ್ನು ತೋರಿಸಿದರೂ ಅದು ರಾಮದಾಸ್‌ದೇ ಎಂದು ಜನ ಮಾತಾಡುತ್ತಾರೆ. ಈ ದಂಧೆ ನಡೆಸಲು ಹಿಂದೆಯಿದ್ದ ಎಸ್.ಎಸ್. ಇನ್‌ಫ್ರಾಸ್ಟ್ರಕ್ಚರ್ ಕಂಪೆನಿಯನ್ನು ಇತ್ತೀಚೆಗೆ ಇಎಸ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ಎಂದು ಬದಲಿಸಿಕೊಂಡು ಕೋಟ್ಯಾಂತರ ರೂ.ಗಳ ಅವ್ಯವಹಾರ ನಡೆಸುತ್ತಿದ್ದಾರೆ. ಅದೀಗ ಶ್ರೀಕಾಂತ್ ಹೆಸರಲ್ಲಿದೆ. ಅದೇ ರೀತಿ ಇಲವಾಲದ ಸುತ್ತ ಇವರು ಮಾಡಿರುವ ಬಡಾವಣೆಗಳಿಗೆ ನಿತ್ಯಾನಂದ ಸಾಗರ ಬಡಾವಣೆ, ಪರಮಾನಂದ ಸಾಗರ ಬಡಾವಣೆ, ಸುಖಾನಂದ ಸಾಗರ ಬಡಾವಣೆ, ಪ್ರೇಮಾನಂದ ಸಾಗರ ಬಡಾವಣೆ ಎಂದು ಹೆಸರಿಟ್ಟಿದ್ದಾರೆ. ಇವೆಲ್ಲವನ್ನೂ ಲೆಕ್ಕ ಹಾಕಿದರೆ ಎಷ್ಟು ಪ್ರಮಾಣದ ಹಣ ರಾಮದಾಸ್ ತಿಜೋರಿಗೆ ಸೇರಿರಬಹುದೆಂಬ ಲೆಕ್ಕ ಸಿಗುತ್ತದೆ.

ಈ ಹಡಬೇ ಹಣವನ್ನು ಖರ್ಚು ಮಾಡುತ್ತಲೇ ರಾಮದಾಸ್ ಜನರ ಮಧ್ಯೆ ದೊಡ್ಡ ನಾಯಕನಾಗಿದ್ದು. ಸಂಕ್ರಾಂತಿ ಪತ್ರಿಕೆಯ ಚಂದ್ರಶೇಖರ್ ಕುಕ್ಕೆಕಟ್ಟೆಯ ಮೂಲಕ ಸಮಾಜ ಸೇವಕನಂತೆ ಪೋಸು ಕೊಟ್ಟ ಈತ ಮೊದಲು ಬಿಜೆಪಿ ಸೇರಿದ. ಮೊದಮೊದಲು ದಾನ ಧರ್ಮ ಅಂತೆಲ್ಲಾ ಹಣ ಹಂಚುತ್ತಾ, ಆರ್‌ಎಸ್‌ಎಸ್ ಚೆಡ್ಡಿಗಳನ್ನು ಮತ್ತು ಬಿಜೆಪಿ ನಾಯಕರನ್ನು ಪಳಗಿಸಿದ ರಾಮದಾಸ್ ಕೆಆರ್ ಕ್ಷೇತ್ರದಿಂದ ಟಿಕೆಟ್ ಗಿಟ್ಟಿಸಿಕೊಂಡ. ಎಮ್ಮೆಲ್ಲೆಯೂ ಆಗಿಬಿಟ್ಟ. ನಂತರ ರಾಮ್‌ಶ್ರೀ (ರಾಮದಾಸ್ ಮತ್ತು ಶ್ರೀಕಾಂತ್) ಎಂಬ ಟ್ರಸ್ಟ್ ಮಾಡಿ ಕೆಆರ್ ಕ್ಷೇತ್ರದ ಜನರಿಗೆ ಡೈರಿ ವಿತರಣೆ, ಹೊಲಿಗೆ ತರಬೇತಿ ಇತ್ಯಾದಿ 'ಜನಸೇವೆ' ಎಂಬ ನಾಟಕಗಳನ್ನು ಆಡುತ್ತಾ ಬಂದಿದ್ದಾನೆ. ಕ್ಷೇತ್ರದ ಜನರ ಹೆಸರು ಮತ್ತು ಹುಟ್ಟಿದ ದಿನಾಂಕವನ್ನು ಓಟರ್ ಲಿಸ್ಟ್ ಜೊತೆಗೆ ಕಂಪ್ಯೂಟರ್‌ಗೆ ಫೀಡ್ ಮಾಡಿಕೊಂಡು, ಎಲ್ಲರ ಹುಟ್ಟಿದ ಹಬ್ಬಕ್ಕೆ ಗ್ರೀಟಿಂಗ್ ಬರೆಸುವುದು, ಕ್ಯಾಲೆಂಡರ್ ಕೊಡಿಸುವ ನಾಟಕಗಳನ್ನೂ ಆಡುತ್ತಾನೆ. ಈಗ ಅದನ್ನೂ ಮುಚ್ಚಿ ಆಸರೆ ಫೌಂಡೇಶನ್ ಹೆಸರಿನಲ್ಲಿ ಇದೇ ಡ್ರಾಮಾ ಕಂಪೆನಿಯನ್ನು ನಡೆಸುತ್ತಿದ್ದಾನೆ. ಐಟಿ ತೆರಿಗೆ ಕಟ್ಟದೆ ಬಚಾವು ಆಗಲೂ ಈ ಟ್ರಸ್ಟ್ ಅನುಕೂಲ ಮಾಡುತ್ತದೆ. ಒಬ್ಬ ಮತದಾರನಿಗೆ 200 ರೂ ಡೈರಿ, 50 ರೂ ಕ್ಯಾಲೆಂಡರ್, 30 ರೂ ಗ್ರೀಟಿಂಗ್ ಕಾರ್ಡ್‌ಗಳನ್ನು ಪ್ರತೀ ವರ್ಷ ಕಡ್ಡಾಯವಾಗಿ ಕಳಿಸುತ್ತಾನೆ. ಜೊತೆಗೆ ಮಕ್ಕಳಿಗೆ ಗೈಡು ತರಿಸಿ ಹಂಚುತ್ತಾನಂತೆ. ಈ ಎಲ್ಲಾ ಸೇವಾಕಾರ್ಯಗಳು ಕೆ.ಆರ್.ಕ್ಷೇತ್ರದ ಮತದಾರರಿಗೆ ಮಾತ್ರ. ಹೊರಗಿನವರಿಗೆ ಒಂದು ರೂಪಾಯಿಯನ್ನೂ ಖರ್ಚು ಮಾಡುವುದಿಲ್ಲ, ಎಲ್ಲದರಲ್ಲೂ ಪಕ್ಕಾ ಲೆಕ್ಕಾಚಾರ ರಾಮದಾಸ್‌ಗಿದೆ.

ಈ ಹಿಂದೆ ಮೂಡಾದ ಆಯುಕ್ತನಾಗಿದ್ದ ಜಯಣ್ಣ ಎಂಬಾತ 2008-2010ರ ಅವಧಿಯಲ್ಲಿ ಮೂಡಾ ನೋಟಿಫೈ ಮಾಡಿದ್ದ ಭೂಮಿಯಲ್ಲಿ ಸುಮಾರು 200 ಎಕರೆ ಭೂಮಿಯನ್ನು ಡಿನೋಟಿಫೈ ಮಾಡಿ ರಾಮದಾಸನ ಭೂಕಬಳಿಕೆಗೆ ನೆರವಾಗಿದ್ದ.


ವಿಜಯಭಾಸ್ಕರ್ ವರದಿ ಮತ್ತು ಹೈಕೋರ್ಟಿನ ಆದೇಶದ ನಂತರವೂ ಏನೂ ಆಗದಿದ್ದುದರಿಂದ, ಮೈಸೂರಿನ ಎಸ್.ಲೋಕೇಶ್ ಮತ್ತು ಗಂಗಾಧರ್ ಎಂಬ ಯುವ ವಕೀಲರು ಮತ್ತೆ ಹೈಕೋರ್ಟಿನಲ್ಲೇ ಪಿಐಎಲ್ ಹಾಕಿದ್ದಾರೆ (25230/2010). ರಾಮದಾಸ್ ಸರ್ಕಾರಕ್ಕೆ ವಂಚಿಸಿರುವ 62 ಕೋಟಿ ರೂಪಾಯಿಗಳನ್ನು ಕಟ್ಟಿಸಿಕೊಳ್ಳಬೇಕೆಂದೂ ಅವರು ಕೋರಿದ್ದಾರೆ. ಈಗ ರಾಮದಾಸನಿಗೆ 23-6-2011ರಂದು ಹಾಜರಾಗಲು 21-4-11ರಂದು ನ್ಯಾಯಾಲಯದ ನೋಟಿಸ್ ಜಾರಿಯಾಗಿದೆ.

ಇದುವರೆಗೆ ಅಧಿಕಾರಕ್ಕೆ ಸರ್ಕಾರಗಳು ರಾಮದಾಸ್ ಮೇಲೆ ಕ್ರಮ ಕೈಗೊಳ್ಳದಿರಲೂ ಕಾರಣವಿದೆ. ಮೈಸೂರಿನ ಭೂದಂಧೆಯಲ್ಲಿ ಎಲ್ಲಾ ಪಕ್ಷದವರ ಪಾಲಿದೆ. ಜೆಡಿಎಸ್‌ನ ಸಾರಾ ಮಹೇಶ್, ಸಂದೇಶ್ ನಾಗರಾಜು, ಅನ್ವರ್, ಕಾಂಗ್ರೆಸ್‌ನ ಹಿನಕಲ್ ಪಾಪಣ್ಣ, ಬಿಜೆಪಿ ರಾಜೀವ್, ಎಮ್ಮೆಲ್ಸಿ ಸಿದ್ದರಾಜು ಸೇರಿದಂತೆ ಬಹಳಷ್ಟು ಜನ ಈ ದಂಧೆಯಲ್ಲಿ ಇದ್ದಾರೆ. ಆದ್ದರಿಂದಲೇ ಯಾರೂ ಈ ಬಗ್ಗೆ ಮಾತನಾಡುತ್ತಿಲ್ಲ.

ಆದರೆ ಸರಿಯಾಗಿ ತನಿಖೆ ನಡೆದು ಇವರುಗಳ ಅಕ್ರಮಗಳು ಬಯಲಿಗೆ ಬಂದರೆ ನೂರಾರು ಭೂಗಳ್ಳರು ಜೈಲಿಗೆ ಹೋಗುತ್ತಾರೆ. ಸಾವಿರಾರು ಕೋಟಿ ಸರ್ಕಾರಿ ಆಸ್ತಿ ಉಳಿಯುತ್ತದೆ. ಸಾವಿರಾರು ಜನರಿಗೆ ಮೂಡಾದಿಂದ ಕಡಿಮೆ ಬೆಲೆಗೆ ನಿವೇಶನ ಸಿಗುತ್ತದೆ. ಇದು ಸಾಧ್ಯವೇ?

• ವರದಿಗಾರ

ದಕ್ಷ ಹರ್ಷ ಗುಪ್ತ ರಾಮ್‌ದಾಸ್ ವಿಚಾರದಲ್ಲಿ ಯಾಕೆ ಸುಮ್ಮನಿದ್ದಾರೆ?



ಪ್ರಾಮಾಣಿಕ, ವೆರಿ ಸ್ಟ್ರಿಕ್ ಆಫೀಸರ್ ಎಂಬ ಬಿರುದು ಪಡೆದು ಮೂಡಾ ಮನೆಗಳಲ್ಲಿ ವಾಸವಿದ್ದ ಬಡವರನ್ನು ಅಕ್ರಮ ವಾಸಿಗಳೆಂದು ಬೀದಿಗೆ ತಳ್ಳಲೂ ಹಿಂದೆಮುಂದೆ ನೋಡದವರು ಡಿಸಿ ಹರ್ಷ ಗುಪ್ತ

ಆದರೆ ಸರ್ಕಾರಿ ಗೋಮಾಳ, ದರಖಾಸ್ತು ಭೂಮಿ, ಕಂದಾಯ ಭೂಮಿ ಸೇರಿದಂತೆ ಮೈಸೂರು ಸುತ್ತಾಮುತ್ತ ಹತ್ತಾರು ಸಾವಿರ ಎಕರೆ ಭೂಮಿ ಒತ್ತುವರಿ ಮಾಡಿಕೊಂಡಿರುವ, ರಾಜರ ಕಾಲದಲ್ಲಿ ಇದನ್ನೆಲ್ಲ ತಮಗೆ ನೀಡಿದ್ದಾರೆಂದು ಸುಳ್ಳು ದಾಖಲೆ ಸೃಷ್ಟಿಸಿರುವ ಹಗರಣಗಳಲ್ಲಿ ಎಲ್ಲಾ ಪಕ್ಷದವರ ಪಾತ್ರ ಇದೆ. ಆದರೆ ಅದರಲ್ಲಿ ಸಾರಾ ಮಹೇಶ್ ಮತ್ತು ರಾಮ್‌ದಾಸ್ ಹಾಗು ಆತನ ತಮ್ಮ ಶ್ರೀಕಾಂತ್‌ನ ಪಾಲು ಅತಿ ದೊಡ್ಡದು. ಆದರೂ ಇವರ್‍ಯಾರ ವಿರುದ್ಧವೂ ಯಾವ ಕ್ರಮವೂ ಜಾರಿಯಾಗಿಲ್ಲ. ಹಿಂದೆಯಿದ್ದ ಡಿಸಿ ಮಣಿವಣ್ಣನ್ ಸಹ ನಾಟಕ ಮಾಡಿಯೇ ಸುಮ್ಮನಾಗಿಬಿಟ್ಟರು. ಹರ್ಷ ಗುಪ್ತರೂ ಅದೇ ಹಾದಿ ಹಿಡಿದಂತಿದೆ. ಯಾಕೆ?

ಯೂತ್ ಕಾಂಗ್ರೆಸ್ ಕಿರೀಟಕ್ಕಾಗಿ ಕಸರತ್ತು!

ಗಾಂಧಿಯ 'ಹೊಸ ಪದ್ಧತಿ' ಕಟ್ಟುನಿಟ್ಟಾಗಿ ಜಾರಿಯಾದರೆ ನಿಜ ನಾಯಕನೊಬ್ಬ ಯುವ ಕಾಂಗ್ರೆಸ್‌ನಲ್ಲಿ ಅವತರಿಸಲಿದ್ದಾನೆ. ಹಿಂಬಾಗಿಲ ಮೂಲಕ ಅಧಿಕಾರ ಹಿಡಿದ-ಹೈಕಮಾಂಡ್‌ನ ಭಟ್ಟಂಗಿತನ ಮಾಡಿ ಪ್ರವರ್ಧಮಾನಕ್ಕೆ ಬಂದ ಕಾಂಗ್ರೆಸ್ ಮುದಿ ಲೀಡರ್‌ಗಳು ಮುಂಬಾಗಿಲಲ್ಲಿ ವಂಶೋದ್ಧಾರಕರನ್ನು 'ನೇತಾ' ಮಾಡಲು ನಾಚ್ ಮಾಡುತ್ತಿರುವುದು ಮೋಜಾಗಿದೆ!!

ಕರ್ನಾಟಕ ಕಾಂಗ್ರೆಸ್‌ನ ರಗಳೆ-ರಾದ್ಧಾಂತ ಸದ್ಯಕ್ಕೆ ಮುಗಿಯುವ ಹಾಗೆ ಕಾಣಿಸುತ್ತಿಲ್ಲ. ಪ್ರದೇಶ ಕಾಂಗ್ರೆಸ್‌ನ ...ರೆಂಟ್ ಬಾಡಿಗೆ ದಂಡ-ಪಿಂಡಗಳನ್ನು ...ಂಡಿ-ದಂಡಿಯಾಗಿ ತುಂಬಿರುವ ಬಗ್ಗೆ ...ಂದಲ-ಗಲಾಟೆ ಮುಗಿವ ...ದಲೇ ಮಕ್ಕಳ ಕಾಂಗ್ರೆಸ್ (ಯುವ ...ಂಗ್ರೆಸ್) ಕಿರೀಟಕ್ಕಾಗಿ ...ರಾಮತ್ತುಗಳು ಶುರುವಾಗಿಬಿಟ್ಟದೆ! ... ಯುವ ಕಾಂಗ್ರೆಸ್‌ನಲ್ಲಿ ...ಮ್ಮಪೊಕ್ಕು ಪುತ್ರರತ್ನರನ್ನೋ ಅಥವಾ ...ಮರಸ್ ಮಾನಸ ಪುತ್ರಿಯರನ್ನೋ ...ಟ್ಟಾಭಿಷೇಕ ಮಾಡಿ ಒಣಪ್ರತಿಷ್ಠೆ ...ರ್ದರ್ಶಿಸಲು ಒಂದಿಷ್ಟು ಮುದಿ ...ದ್ದು ಪುಢಾರಿಗಳು ತಿಪ್ಪರಲಾಗ ...ಕುತ್ತಿರುವುದು ಕುತೂಹಲಕರವಾಗಿದೆ!




... ಯುವ ಕಾಂಗ್ರೆಸ್‌ನ ಹಾಲಿ ಅಧ್ಯಕ್ಷ ಕೃಷ್ಣ ಭೈರೇಗೌಡ ...ಬ ಸುಶಿಕ್ಷಿತ-ಸುಸಂಸ್ಕೃತ ತರುಣ ಅಸಹಾಯಕತೆಯಿಂದ ...ಲ ಕಳೆದರೆ ವಿನಃ ಯುವ ಶಕ್ತಿ ...ಂಬುವ ಕೆಲಸ ಆತನಿಂದ ಆಗಲೇ ...ಲ್ಲ. ಜುಲೈ ತಿಂಗಳಲ್ಲಿ ಕೃಷ್ಣ ಭೈರೇಗೌಡರ ...ತ್ತರಾಧಿಕಾರಿ ಆಯ್ಕೆ ನಡೆಸುವ ಪ್ರಕ್ರಿಯೆ ...ಗಲೇ ಆರಂಭವಾಗಿದೆ. ಆದರೆ ಈ ...ರಿ ಮೊದಲಿನಂತೆ ದಿಲ್ಲಿ ಪವರ್ ...ರೋಕರ್‌ಗಳ ಭಟ್ಟಂಗಿಗಳ ನೇಮಕಾತಿ ...ಗುತ್ತಿಲ್ಲ. ಬದಲಿಗೆ ಬೂತ್ ಮಟ್ಟದಲ್ಲಿ ...ದ್ದು ಬರುವ ನಿಜ ನಾಯಕನೊಬ್ಬ ನೇರ ...ನಾವಣೆಯಲ್ಲಿ ಆಯ್ಕೆ ಆಗಬೇಕಾಗಿದೆ. ...ದು ಯುವ ಕಾಂಗ್ರೆಸ್ ಹೊಣೆ ...ತ್ತಿರುವ ಕಾಂಗ್ರೆಸ್‌ನ ಯುವರಾಜ ...ಹುಲ್ ಗಾಂಧಿ ರೂಪಿಸಿರುವ ಇಲೆಕ್ಷನ್ ...ಡ್ ಅಂಡ್ ಕಂಡಕ್ಟ್.




... ಕೆಳಮಟ್ಟದ ಯುವ ಕಾರ್ಯಕರ್ತರ ...ರುಮಟ್ಟದ ಸಂಪರ್ಕ ಇಲ್ಲದ ...ಕುಬಳುಕಿನ ಹೇತ್ಲಾಂಡಿ ಹುಡುಗನನ್ನು ...ಲ್ಲಿಯಿಂದ ರಾಜ್ಯ ಯುವ ಕಾಂಗ್ರೆಸ್ ...ಗ್ ಎಂದು ನಾಮಕರಣ ಮಾಡುವ ...ದ್ಧತಿಯನ್ನು ರಾಹುಲ್ ಗಾಂಧಿ ಈಗ ...ದ್ದು ಮಾಡಿದ್ದಾರೆ; ಸಮರ್ಥನೊಬ್ಬ ...ರ ಚುನಾವಣೆ ಮೂಲಕ ಆಯಾ ...ದೇಶ ಕಾಂಗ್ರೆಸ್ ಅಧ್ಯಕ್ಷನಾಗುವ ...ಂತಿಕಾರಿ ವ್ಯವಸ್ಥೆ ಜಾರಿಗೊಳಿಸಿದ್ದಾರೆ. ...ಷ್ಟ 2 ಲಕ್ಷ ಯುವ ಕಾಂಗ್ರೆಸ್ ...ದಸ್ಯರನ್ನು ನೋಂದಣಿ ಮಾಡಿಸಿ ...ರೋಬ್ಬರಿ 10 ಸಾವಿರ ಬೂತ್‌ಗಳಲ್ಲಿ ...ಡಿತ ಹೊಂದಿರುವಾತ ಮಾತ್ರ ರಾಜ್ಯ ...ಧ್ಯಕ್ಷ ಪದವಿಗೆ ಸ್ಪರ್ಧಿಸಬಹುದು. ...ಜ್ಯದಲ್ಲಿ ಸುಮಾರು 45 ಸಾವಿರ ...ಯೂತ್ ಕಾಂಗ್ರೆಸ್ ಬೂತ್‌ಗಳಿವೆ.



... ಇಂಥದೊಂದು ಹೊಸ ಚುನಾವಣಾ ...ದ್ಧತಿ ರಾಜ್ಯ ಯುವ ಕಾಂಗ್ರೆಸ್‌ನಲ್ಲಿ ...ಷ್ಟೇ ಅಲ್ಲ, ಮುದಿ ಕಾಂಗ್ರೆಸ್‌ನಲ್ಲೂ ...ಚಿತ್ರ ಸಂಚಲನ ಮೂಡಿಸಿಬಿಟ್ಟಿದೆ. ...ರು ಹೆಚ್ಚು ಯುವ ಕಾಂಗ್ರೆಸ್‌ಗೆ ...ಂಬರ್‌ಗಳನ್ನು ನೋಂದಾಯಿಸಿ ...ಳ್ಳುತ್ತಾನೋ ಆತ ಗೆಲ್ಲುವ ಛಾನ್ಸ್ ...ಸ್ತಿ. ಹೀಗಾಗಿ ಕಾಂಗ್ರೆಸ್‌ನ ಮುದಿ ...ಬಂಧರನೇಕರು ಹೆಗಲ ಮೇಲಿನ





ಟವಲು ಕೊಡವಿ 'ಕಣ'ಕ್ಕೆ ಇಳಿದಿದ್ದಾರೆ. ತಮ್ಮ ಕುಲಪುತ್ರನನ್ನು ಹೇಗಾದರೂ ಮಾಡಿ ರಾಜ್ಯ ಯುವ ಕಾಂಗ್ರೆಸ್ ಪೀಠದಲ್ಲಿ ಪ್ರತಿಷ್ಠಾಪಿಸಿ ಕಾಂಗ್ರೆಸ್‌ನ ಪ್ರಶ್ನಾತೀತ ಯುವ ಧುರೀಣ ರಾಹುಲ್‌ಜೀ ಕೃಪೆಗೆ ಪಾತ್ರರಾಗಲು ಹವಣಿಸುತ್ತಿದ್ದಾರೆ. ತನ್ಮೂಲಕ ತಮ್ಮ ವಂಶೋದ್ಧಾರಕನ ರಾಜಕೀಯ ಕರಿಯರ್ ಉಜ್ವಲಗೊಳಿಸಲು ಸ್ಕೆಚ್ ಹಾಕಿಕೊಂಡಿದ್ದಾರೆ.

ರಾಜ್ಯ ಕಾಂಗ್ರೆಸ್‌ನ ಡಲ್ ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆಗೆ ತನ್ನ ಹ್ಯಾಪ ಮಗ ಪ್ರಿಯಾಂಕನಿಗೆ ಪಟ್ಟ ಕಟ್ಟುವ ಅವಸರವಾದರೆ, ಅತ್ತ ದೂರದ ಉತ್ತರಾಖಂಡದ ರಾಜ್ಯಪಾಲೆ ಯಾಗಿರುವ ಮ್ಯಾಗಿ ಯಾನೆ ಮಾರ್ಗರೆಟ್ ಆಳ್ವರಿಗೆ ತನ್ನ ಪೆದ್ದು ಪುತ್ರರತ್ನ ನಿವೇದಿತ್‌ನನ್ನು ರಾಜ್ಯ ಯುವ ಕಾಂಗ್ರೆಸ್ ಕ್ಯಾಪ್ಟನ್ ಮಾಡುವ ತವಕ. ಇನ್ನೊಂದೆಡೆ ಮಾಜಿ ಮಂತ್ರಿ ಕೆ.ಜೆ. ಜಾರ್ಜ್ ತನ್ನ ಕುಲಕಂಠೀರವ ರಾಣಾನ ಯುವ ಕಾಂಗ್ರೆಸ್ ಪೀಠದಲ್ಲಿ ಪ್ರತಿಷ್ಠಾಪಿಸುವ ಹಠಕ್ಕೆ ಬಿದ್ದಿದ್ದಾರೆ. ಮಾಜಿ ಕೇಂದ್ರ ಮಂತ್ರಿ-ಹಿರಿಯ ಕಾಂಗ್ರೆಸ್ಸಿಗ ಜಾಫರ್ ಷರೀಫ್ ಸಾಹೇಬರು ಮೊಮ್ಮಗ ರೆಹಮಾನ್ ಷರೀಫ್‌ಗಾಗಿ ತನ್ನೆಲ್ಲ ಶಕ್ತಿ-ಯುಕ್ತಿ ಬಳಸುತ್ತಿದ್ದಾರೆ. ಈ ವಯೋವೃದ್ಧ-ನಾಯಕಾ ಗ್ರೇಸರ ಮಗ-ಮೊಮ್ಮಗ ವ್ಯಾಮೋಹಕ್ಕಿಂತ 'ರಂಗೀಲಾ ರಾಜ' ಡಿ.ಕೆ. ಶಿವಕುಮಾರ್ ಸಿನಿ ನಟಿ ರಮ್ಯಾಗೆ ಯೂತ್ ಕಾಂಗ್ರೆಸ್ ಕಿರೀಟ ಕಟ್ಟಲು ಕಟಿಪಿಟಿ ಮಾಡುತ್ತಿರುವುದು ಮಸ್ತ್ ಮಜಾದಾಯಕ ವಾಗಿದೆ.

ಮೊನ್ನೆ ರಾಹುಲ್ ಗಾಂಧಿ ಬೆಂಗಳೂರಿಗೆ ಭೇಟಿ ನೀಡಿದ ಮುಹೂರ್ತವನ್ನೇ ರಮ್ಯಾ ಯುವ ಕಾಂಗ್ರೆಸ್ ಮೆಂಬರಿಕೆ ಪಡೆದುಕೊಳ್ಳಲು ಆಯ್ಕೆ ಮಾಡಿದ್ದೇಕೆಂಬ ಗುಮ್ಮ ಈಗ ರಟ್ಟಾಗಿ ಹೋಗಿದೆ. ರಾಹುಲ್ ಕಾಣಲು ರಮ್ಯಾ ಬಂದಿದ್ದು ಡಿಕೆಶಿ ಜೊತೆ. ಈ ಡಿಕೆಶಿ ರಾಜ್ಯ ಯುವಕಾಂಗ್ರೆಸ್ ಗದ್ದುಗೆಗೆ ರಮ್ಯಾಳನ್ನು ಏರಿಸುವ ಸ್ಟ್ರಾಟಜಿ ಹೆಣೆದೇ ಆಕೆ ಕಾಂಗ್ರೆಸ್ ಎಂಟ್ರಿ ಪಡೆಯುವಂತೆ ಮಾಡಿದ್ದಾರೆ. ಹೀಗೆ ಗ್ಲಾಮರ್ ಹೆಣ್ಣುಗಳನ್ನು ಜನನಾಯಕಿಯರಾಗಿ ಸುವ ಡಿಕೆಶಿ ಐಲು ಹೊಸದೇನೂ ಅಲ್ಲ. ಹಿಂದೆ ಇದೇ ಡಿಕೆಶಿ ಕೂಗುಮಾರಿ ತೇಜಸ್ವಿನಿ ಶ್ರೀರಮೇಶ್ ಎಂಬಾಕೆಯನ್ನು ದೇವೇ ಗೌಡರೆ ದುರು ಗೆಲ್ಲಿಸಿ ಎಂಪಿ ಮಾಡಿಸಿ ಕೈ ಸುಟ್ಟು ಕೊಂಡಿದ್ದು ಎಲ್ಲರಿಗೂ ಗೊತ್ತಿರುವ ದುರಂತ ಗಾಥೆಯೇ!

ಈಗ ಸಿನಿಮಾ ತಾರೆ ರಮ್ಯಾಳನ್ನು 'ರಾಣಿ' ಮಾಡುವ ಮಳ್ಳಾಟಕ್ಕೆ ಡಿಕೆಶಿ ಬಿದ್ದಿದ್ದಾರೆ. ತನ್ನ ಬಂಟರನ್ನು ಬಿಟ್ಟು ರಮ್ಯಾ ಪರ ಯೂತ್ ಕಾಂಗ್ರೆಸ್ ಮೆಂಬರ್‌ಗಳನ್ನು ರಾಶಿ-ರಾಶಿ ಮಾಡಿ ಸುತ್ತಿದ್ದಾರೆ. ತಾನು ಕೇಂದ್ರ ಮಂತ್ರಿ ಎಸ್.ಎಂ. ಕೃಷ್ಣರ ವಂಶದವಳೆಂದು ಪೋಸು ಕೊಡುವ ರಮ್ಯಾಗೆ ದಿಲ್ಲಿ ದಿಕ್ಕಿನಿಂದಲೂ ಸಂಪನ್ಮೂಲ ಮತ್ತು ಸಪೋರ್ಟ್ ಹರಿದು ಬರುತ್ತಿದೆಯಂತೆ. ಡಿಕೆಶಿಯೇ ಎಸ್ಸೆಂಕೆ ಕೃಪಾಶೀರ್ವಾದ ರಮ್ಯಾಗೆ ಕೊಡಿಸಿದ್ದಾರೆಂಬ ಗುಲ್ಲು ಆಕೆಯ ಪ್ರತಿಸ್ಪರ್ಧಿಗಳ ಬಿಡಾರದಿಂದ ಹೊರಬರುತ್ತಿದೆ.


ಡಿಕೆಶಿ ಬೆಂಬಲ-ಒಕ್ಕಲಿಗ ಲಾಬಿ ರಮ್ಯಾಳ ಸದಸ್ಯತ್ವ ಅಭಿಯಾನವನ್ನು ಬಿರುಸಾಗಿಸಿ ಬಿಟ್ಟಿದೆ. ರಮ್ಯಾಳ ಬೆಂಗಳೂರು-ಹಳೆ ಮೈಸೂರು ಕೇಂದ್ರಿತ ಆರ್ಭಟ ಕಂಡು ಖರ್ಗೆ ಮಗ ಪ್ರಿಯಾಂಕ, ಮ್ಯಾಗಿ ಮಗ ನಿವೇದಿತ್, ಜಾರ್ಜ್ ಮಗ ರಾಣಾ ಮತ್ತು ಜಾಫರ್ ಷರೀಫ್ ಮೊಮ್ಮಗ ರೆಹಮಾನ್ ಕಂಗಾಲಾಗಿದ್ದಾರೆ. ಹಾಗಂತ ಅವರೇನೂ ಸುಮ್ಮನೆ ಕುಳಿತಿಲ್ಲ. ಹೈದರಾಬಾದ್ ಕರ್ನಾಟಕದಲ್ಲಿ ಅಪ್ಪನಿಗಿರುವ ಪ್ರಭಾವ ಬಳಸಿ ಪ್ರಿಯಾಂಕ ಸದಸ್ಯತ್ವ ನೋಂದಣಿಗೆ ಫೀಲ್ಡಿಗೆ ಇಳಿದಿದ್ದಾನೆ. ಅಪ್ಪ ತೆರವು ಮಾಡಿಕೊಟ್ಟ ಗುರುಮಿಟಕಲ್‌ನಲ್ಲೇ ಶಾಸಕನಾಗದ ಈ ಮೊದ್ದಣಿ ಯುವ ಕಾಂಗ್ರೆಸ್ ನಾಯಕತ್ವದ ನೇರ ಚುನಾವಣೆಯಲ್ಲಿ ಗೆಲ್ಲುತ್ತಾನಾ? ಹಾಗಂತ ಖರ್ಗೆ ಠಕ್ಕರೇ ಅನುಮಾನಿಸುತ್ತಾರೆ.




ಮ್ಯಾಗಿ ಮಗ ನಿವೇದಿತ್ ಆಳ್ವನ ಕತೆ ಮತ್ತೂ ಚಿಂತಾಜನಕವಾಗಿದೆ. ಟಿವಿ ಚಾನೆಲ್ ಗಳಿಗೆ ಡಾಕ್ಯುಮೆಂಟರಿ-ಧಾರಾವಾಹಿ ತಯಾರಿಸಿ ಕೊಡುವ ಈ ನಿವೇದಿತ್‌ನಲ್ಲಿ ರಾಜಕೀಯ ಕ್ಯಾಲಿಬರ್ ಇಲ್ಲವೇ ಇಲ್ಲ. ಅಮ್ಮ ಉತ್ತರ ಕನ್ನಡ ಎಂಪಿಯಾಗಿದ್ದಾಗ ಒಂದಿಷ್ಟು ಮೋಸ್ಟ್‌ವಾಂಟೆಡ್‌ಗಳ ಕಟ್ಟಿಕೊಂಡು ಈತ ಜಿಲ್ಲೆಯಲ್ಲಿ ಓಡಾಡಿದ್ದ. ಜನರಿಂದ ತಿರಸ್ಕೃತರಾದ ರವಿ ನಾಯ್ಕ್, ದೀಪಕ್ ಹೊನ್ನಾವರ, ರಾಮಾ ಮೊಗೇರ್, ಅಶೋಕ್ ನಾಯ್ಕ್ ವಗೈರೆ ಸಂಶಯಾಸ್ಪದ ಆಸಾಮಿಗಳೇ ಇವತ್ತಿಗೂ ಈತನಿಗೆ, ಈತನಮ್ಮನಿಗೆ ಸಲಹೆಗಾರರು. ಅರ್ಥಾತ್ ಚಾಡಿಕೋರರು. ಇವರ ಮಾತು ಕೇಳಿಯೇ ಮ್ಯಾಗಿ ಉತ್ತರ ಕನ್ನಡದಿಂದ ಗಂಟುಮೂಟೆ ಕಟ್ಟಿಕೊಂಡು ದೂರದ ಉತ್ತರಾಖಂಡದ ನಾನ್ ಪಾಲಿಟಿ ಕಲ್ ಪೀಠ ಬಲವಂತವಾಗಿ ಏರುವಂತಾಗಿದೆ.



ಒಂಥರಾ ಎಡವಟ್ಟನಂತಿರುವ ನಿವೇದಿತ್‌ನನ್ನು ಉತ್ತರ ಕನ್ನಡದಿಂದ ಎಂಪಿ ಮಾಡಬೇಕೆಂಬ ಕನಸು ಆತನ ಹಡೆದವ್ವ ಮ್ಯಾಗಿ ಬಹಳ ದಿನದಿಂದ ಕಾಣುತ್ತಿದ್ದಾರೆ, ಪಾಪ! ಆದರೆ ಆಕೆಯ ಹಿತಶತ್ರು ದೇಶಪಾಂಡೆ ತನ್ನ ಮಗ-ಕೇಂದ್ರ ಮಂತ್ರಿ (ಎನ್‌ಸಿಪಿ) ಪ್ರಫುಲ್ ಪಟೇಲರ ಅಳಿಮಯ್ಯ ಪ್ರಶಾಂತನನ್ನೇ ಉತ್ತರ ಕನ್ನಡದಿಂದ ಎಂಪಿ ಮಾಡುವ ಹಠಕ್ಕೆ ಬಿದ್ದಿದ್ದಾರೆ. ಈ ಪ್ರಶಾಂತ-ನಿವೇದಿತ್‌ಗೆ ಜನರ ಸಂಪರ್ಕವೇ ಇಲ್ಲ. ಗಾಂವಠಿ ಕಲ್ಚರಲ್-ಕ್ರೀಡಾ ಕಾರ್ಯಕ್ರಮಕ್ಕೆ ಒಂದಷ್ಟು ಪಾಪದ ಹಣ ಡೊನೇಟ್ ಮಾಡುವುದೇ ರಾಜಕಾರಣಕ್ಕೆ ಸೋಪಾನ ಎಂದುಕೊಂಡಿರುವ ಸೋಗಲಾಡಿ ಗಳಿವರು. ಈ ಪ್ರಶಾಂತ-ನಿವೇದಿತ್‌ರ ರಾಜಕಾರಣ-ಜನ ಸೇವೆಯೆಂದರೆ, ಅಪ್ಪ-ಅಮ್ಮ ಇಲೆಕ್ಷನ್‌ಗೆ ನಿಂತಾಗ ಪ್ರಚಾರ ಮಾಡಿದ್ದಷ್ಟೇ! ಪ್ರಶಾಂತನ ಮ್ಯಾನೇಜರಿಕೆಯಲ್ಲಿ ದೇಶಪಾಂಡೆ ಹಳಿಯಾಳದಲ್ಲಿ ಸೋತರೆ, ಮ್ಯಾಗಿ ಉತ್ತರ ಕನ್ನಡದಲ್ಲಿ ಹೀನಾಯವಾಗಿ ಸೋಲಲು ಆಕೆಯ ಮಗ ನಿವೇದಿತ್‌ನ ನಾಲಾಯಕ್ ಉಸ್ತುವಾರಿಕೆಯೇ ಕಾರಣ. ನಿವೇದಿತ್‌ನ ಅಧಿಕಪ್ರಸಂಗದಿಂದಾಗಿ ಮ್ಯಾಗಿಗೆ ಖಾನಾಪುರದಲ್ಲಿ ಓಟೇ ಸಿಕ್ಕಿರಲಿಲ್ಲ.







ಜನರ ಕಷ್ಟ-ಸುಖಕ್ಕೆ ಸ್ಪಂದಿಸದ, ಬರೀ ಕುರ್ಚಿ ಕನಸನ್ನೇ ಕಾಣುವ ನಿವೇದಿತ್ ಆಳ್ವ ರಾಜ್ಯ ಯೂತ್ ಕಾಂಗ್ರೆಸ್ ಅಧ್ಯಕ್ಷತೆಯ ರೇಸ್‌ಗೆ ಇಳಿದಿರುವುದು ವಿಚಿತ್ರವಾದರೂ ಸತ್ಯ! ಅಮ್ಮನ ನಾಮಬಲ ಬಿಟ್ಟರೆ ಸ್ವಂತಿಕೆ ಎಂಬುದೇ ಈ ಚಾಕಲೇಟ್ ಬಾಯ್‌ಗೆ ಇಲ್ಲ. ಪಕ್ಷಕ್ಕೆ ಮೂರು ಬಿಲ್ಲಿ ಕೆಲಸ ಮಾಡದಿದ್ದರೂ ಮೊನ್ನೆ ಘೋಷಣೆಯಾದ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿಯಲ್ಲಿ ಈ ನಿವೇದಿತ್‌ಗೆ ಕಾರ್ಯದರ್ಶಿ ಹುದ್ದೆ ಸಿಕ್ಕಿದೆ! ಅದರಲ್ಲೂ ತನ್ನ ಕಾರ್ಯದರ್ಶಿತ್ವಕ್ಕೆ ಉತ್ತರ ಕನ್ನಡದ ಉಸ್ತುವಾರಿಯೇ ಬೇಕೆಂದು ಈತ ಮತ್ತೀತನ ಅಮ್ಮ ತಕರಾರು ಬೇರೆ ತೆಗೆದಿದ್ದಾರಂತೆ. ಡೆವಿಲ್ ದೇಶಪಾಂಡೆ ತನ್ನ ಪಾಳೆಪಟ್ಟದಲ್ಲಿ ನಿವೇದಿತ್‌ನ ಬಿಟ್ಟುಕೊಂಡಾನಾ?

ಅದಿರಲಿ, ಈಗ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷನಾಗಲು ನಿವೇದಿತ್ ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸದಸ್ಯತ್ವ ಅಭಿಯಾನ ಆರಂಭಿಸಿದ್ದಾನೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಕನಿಷ್ಠ ಎರಡು ಲಕ್ಷ ಮೆಂಬರ್‌ಗಳನ್ನು ಮಾಡಬೇಕು. ಇದು ಉತ್ತರ ಕನ್ನಡದ ಉದ್ದಗಲವೂ ಸರಿಯಾಗಿ ಗೊತ್ತಿಲ್ಲದ, ಬೆಂಗಳೂರು-ದಿಲ್ಲಿಗಳಲ್ಲಿ ಕ್ಯಾಮೆರಾ ಹೊತ್ತುಕೊಂಡು ಓಡಾಡುವ ನಿವೇದಿತ್‌ನಿಂದ ಸಾಧ್ಯವಾ? ಹಾಗಂತ ಆತನ ಎದುರಾಳಿಗಳು ಕಿಚಾಯಿಸುತ್ತಿದ್ದಾರೆ. ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ನಿವೇದಿತ್ ಅಮ್ಮನ ನಾಮದ ಹಂಗು, ಕಾಸಿನ ಬಲ ಎರಡನ್ನೇ ನಂಬಿಕೊಂಡು ಅಖಾಡಕ್ಕೆ ಇಳಿದಿದ್ದಾನೆ.

ಜಾಫರ್ ಷರೀಫ್ ಮೊಮ್ಮಗನಿಗೂ ಅಜ್ಜನ ಪ್ರಭಾವವೇ ಸರ್ವಸ್ವ. ಈ ರೆಹಮಾನ್ ಷರೀಫ್ ಮುಸ್ಲಿಮ್ ಯುವಕರನ್ನೇ ಟಾರ್ಗೆಟ್ ಮಾಡಿಕೊಂಡು ಸದಸ್ಯತ್ವ ಕಾರ್ಯಾಚರಣೆಗೆ ಇಳಿದಿದ್ದಾನೆ. ಈ ಗಾಡ್‌ಫಾದರ್-ಗಾಡ್‌ಮದರ್ ಹೊಂದಿರುವ ಕ್ಯಾಂಡಿಡೇಟ್‌ಗಳ ನಡುವೆ ಪ್ರದೀಪ್‌ಕುಮಾರ್, ಶ್ರೀನಿವಾಸ್ ಮತ್ತು ಯೋಗೀಶ್ ಎಂಬ ತರುಣರೂ ರಾಜ್ಯ ಯೂತ್ ಕಾಂಗ್ರೆಸ್ ಕುಸ್ತಿಗಿಳಿದಿದ್ದಾರೆ. ಒಟ್ಟಿನಲ್ಲಿ ಮೇ ಎರಡರ ತನಕ ಸದಸ್ಯತ್ವ-ನೋಂದಣಿ ನಡೆಯಲಿದೆ; ಜುಲೈ ಮೊದಲ ವಾರದ ಹೊತ್ತಿಗೆ ನೇರಾನೇರ ಫೈಟಿಂಗ್! ದಿಲ್ಲಿ ಅಥವಾ ಬೆಂಗಳೂರಿನ ಹೈಕಮಾಂಡ್ ಆಶ್ರಯದಲ್ಲಿರುವ ಪವರ್ ದಲ್ಲಾಳಿಗಳ ಆಟ ಇಲ್ಲಿ ನಡೆಯದು. ರಾಹುಲ್ ಗಾಂಧಿಯ 'ಹೊಸ ಪದ್ಧತಿ' ಕಟ್ಟುನಿಟ್ಟಾಗಿ ಜಾರಿಯಾದರೆ ನಿಜ ನಾಯಕನೊಬ್ಬ ಯುವ ಕಾಂಗ್ರೆಸ್‌ನಲ್ಲಿ ಅವತರಿಸಲಿದ್ದಾನೆ. ಹಿಂಬಾಗಿಲ ಮೂಲಕ ಅಧಿಕಾರ ಹಿಡಿದ-ಹೈಕಮಾಂಡ್‌ನ ಭಟ್ಟಂಗಿತನ ಮಾಡಿ ಪ್ರವರ್ಧಮಾನಕ್ಕೆ ಬಂದ ಕಾಂಗ್ರೆಸ್ ಮುದಿ ಲೀಡರ್‌ಗಳು ಮುಂಬಾಗಿಲಲ್ಲಿ ವಂಶೋದ್ಧಾರಕರನ್ನು 'ನೇತಾ' ಮಾಡಲು ನಾಚ್ ಮಾಡುತ್ತಿರುವುದು ಮೋಜಾಗಿದೆ!!


• ನಹುಶ

ವಿಹಿಂಪ ಹೆಸರಲ್ಲಿ 125 ಕೋಟಿಯ ಸರ್ಕಾರಿ ಆಸ್ತಿ ಲೂಟಿ
ಸಿಂಘಾಲನ ಬಂಟರ ಭೂ ಡಕಾಯಿತಿ



ರಾಜಕಾಲುವೆ ಮೇಲೆ ರೋಹನ್ ಅಪಾರ್ಟ್‌ಮೆಂಟ್

ಒಂದಲ್ಲ ಎರಡಲ್ಲ ಅದು 21.35 ಎಕರೆ ವಿಸ್ತಾರದ ಸರ್ಕಾರಿ ಸೊತ್ತು, ತಲಾ ಎಕರೆಗೆ ಕನಿಷ್ಠ 6 ಕೋಟಿಯೆಂದರೂ ಅದರ ಸದ್ಯದ ಮಾರುಕಟ್ಟೆ ರೇಟೇ 125 ಕೋಟಿಯಷ್ಟಾಗುತ್ತದೆ. ಕೋರ್ಟು ಇದು ಸರ್ಕಾರದ ಆಸ್ತಿಯೆಂದೇ ತೀರ್ಪಿತ್ತಿದೆ. ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿ ರಾಮೇಗೌಡರು ಕೂಲಂಕಷ ತನಿಖೆ ನಡೆಸಿಯೇ ಇದನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳುವಂತೆ ಆದೇಶಿಸಿ ಯಾವುದೋ ಕಾಲವಾಗಿದೆ. ಹಾಗಿದ್ದೂ ಭೂಕಂಟಕರಿಂದ ಈ ಸೊತ್ತನ್ನು ಸರ್ಕಾರ ವಶಪಡಿಸಿಕೊಳ್ಳುತ್ತಿಲ್ಲ, ಜನ ಮನವಿಗಳ ಮೇಲೆ ಮನವಿ ಕೊಟ್ಟರೂ, ವಿಧಾನ ಪರಿಷತ್ತಿನಲ್ಲೇ ಎಮ್ಮೆಲ್ಸಿ ನಾಡಗೌಡರು ಬೊಬ್ಬೆಯಿಟ್ಟರೂ, ಖುದ್ದು ಮುಖ್ಯಮಂತ್ರಿಯೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆಂದು ಭರವಸೆಯಿತ್ತರೂ ನೆಲಗಳ್ಳರು ಮಾತ್ರ ಯಾರಿಗೂ ಜಗ್ಗುತ್ತಿಲ್ಲ!



ವಿಜಯ್‌ಕುಮಾರ್

ಏಕೆಂದರೆ ಅದರ ಮಾರುಕಟ್ಟೆ ರೇಟೇ 125 ಕೋಟಿ ಮತ್ತು ಅದನ್ನು ನುಂಗಲು ಹೊಂಟವನು ಆರೆಸ್ಸೆಸ್ ನಾಯಕ!

ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್. ಪುರ ಹೋಬಳಿ ಚಿನ್ನಪ್ಪನ ಹಳ್ಳಿಯ ಸರ್ವೆ ನಂ. 20 ರಲ್ಲಿರುವ 21 ಎಕರೆ 35 ಗುಂಟೆ ಸರ್ಕಾರಿ ಸೊತ್ತನ್ನು ನೆಲಕಂಟಕ ಆರೆಸ್ಸೆಸ್ ಕ್ರಿಮಿಗಳ ಬಾಯಿಗಿಕ್ಕುವಲ್ಲಿ ಮುಖ್ಯಮಂತ್ರಿ, ಕಂದಾಯ ಮಂತ್ರಿ, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆ ಮತ್ತು ಬಿಬಿಎಂಪಿ ಇತ್ಯಾದಿ ಪ್ರತಿ ಸರ್ಕಾರಿ ಅಧಿಕಾರಸ್ಥರೂ ಮಾನಗೆಟ್ಟು ಹೆಣಗಾಡುತ್ತಿರುವುದಕ್ಕೂ ಕಾರಣವಿದೆ.


ಇಲ್ಲಿ ಕಬಳಿಸ ಹೊಂಟವನು ವಿಶ್ವ ಹಿಂದೂ ಪರಿಷತ್‌ನ ಅಧಿಪತಿ ಅಶೋಕ್ ಸಿಂಘಾಲನ ಬಲಗೈ ಬಂಟ.

ತಿಪ್ಪಾರೆಡ್ಡಿ

ಆತನ ಹೆಸರು ಎಚ್. ತಿಪ್ಪಾರೆಡ್ಡಿ. ಎಚ್.ಎ.ಎಲ್. ಮಾರತಹಳ್ಳಿಯ ಹಳೇ ಏರ್‌ಪೋರ್ಟ್ ಪಕ್ಕದಲ್ಲೇ ಇರುವ ಚಿನ್ನಪ್ಪನಹಳ್ಳಿಯ ಗತಕಾಲದ ಪಾಳೇಗಾರ ತಿಪ್ಪಾರೆಡ್ಡಿಯ ಬೆನ್ನಿಗೆ ವಿಹಿಂಪ ನಾಯಕ ಅಶೋಕ್ ಸಿಂಘಾಲ್ ಇಲ್ಲದೇ ಹೋಗಿದ್ದರೆ ಬಹುಶಃ ಈ ನೂರಿಪ್ಪತ್ತೈದು ಕೋಟಿಯ ಸರ್ಕಾರಿ ಸೊತ್ತು ಯಾವತ್ತೋ ಸರ್ಕಾರದ ವಶವಾಗುತ್ತಿತ್ತು. ಯಡ್ಡಿಯ ಬಿಜೆಪಿ ಸರ್ಕಾರ ಬಡವರ ಗುಡಿಸಲಿಗೆ ಬುಲ್ಡೋಜರ್ ನುಗ್ಗಿಸುತ್ತದೆ. ಹಕ್ಕುಪತ್ರವಿದ್ದರೂ ನಿರ್ಗತಿಕ ಗುಲ್ಬರ್ಗಾ-ರಾಯಚೂರಿನ ಬಡ ಕನ್ನಡಿಗರ ವಿರುದ್ಧ ಪೊಲೀಸರನ್ನು ಛೂಬಿಟ್ಟು ಖಾಲಿ ಮಾಡಿಸುತ್ತದೆ. ಬಡವರನ್ನು ಬೀದಿಗೆ ಹಾಕಿ ಸರ್ಕಾರಿ ಜಮೀನು ವಶಪಡಿಸಿಕೊಳ್ಳುವ ಬಿಜೆಪಿ ಸರ್ಕಾರದ ಕಾಳಜಿ ವಿಶ್ವ ಹಿಂದೂ ಪರಿಷತ್ ನಾಯಕನ ವಿಷಯದಲ್ಲಿ ಮಾತ್ರ ಉಲ್ಟಾಪಲ್ಟಾ!

ಹಳೇ ಏರ್‌ಪೋರ್ಟ್ ಪಕ್ಕದ ಚಿನ್ನಪ್ಪನಹಳ್ಳಿಯ ಸನಂ. 20 ರ 21.35 ಎಕರೆ ಸರ್ಕಾರಿ ಸೊತ್ತಿಗೆ ತಿಪ್ಪಾರೆಡ್ಡಿಗಿಂತಲೂ ಆತನ ಮಗ ವಿಜಯ್‌ಕುಮಾರ್ ರೆಡ್ಡಿಯ ಹಾವಳಿಯೇ ವಿಪರೀತ. ಈ ವಿಜಯ್‌ಕುಮಾರ್‌ರೆಡ್ಡಿ ಸದ್ಯ ವಿಶ್ವ ಹಿಂದೂ ಪರಿಷತ್ತಿನ ಬೆಂಗಳೂರು ಮಹಾನಗರ ಘಟಕದ ಅಧ್ಯಕ್ಷ. ಈತನ ಅಣ್ಣ ಉಮಾಶಂಕ್ರ ಕೂಡ ಈ ಭಾಗದ ನಟೋರಿಯಸ್ ಲ್ಯಾಂಡ್ ಡೀಲರ್. ತಿಪ್ಪಾರೆಡ್ಡಿಯ ತಮ್ಮ ಸತ್ಯನಾರಾಯಣರೆಡ್ಡಿ ಆತನ ಮಕ್ಕಳಾದ ಎಸ್. ನರೇಂದ್ರಬಾಬು, ಎಸ್. ರವಿಕುಮಾರ್, ತಿಪ್ಪಾರೆಡ್ಡಿಯ ಮತ್ತೊಬ್ಬ ತಮ್ಮ ಮತ್ತು ಮಹದೇವಪುರದ ಮಾಜಿ ಕೌನ್ಸಿಲರ್ ವೆಂಕಟೇಶ್ ರೆಡ್ಡಿ, ಆತನ ಮಗ ಅರವಿಂದ್, ತಿಪ್ಪಾರೆಡ್ಡಿಯ ಮಗದೊಬ್ಬ ತಮ್ಮ ಅನಂತ ರಾಮರೆಡ್ಡಿ ಇತ್ಯಾದಿ ನೆಲಕಂಟಕ ರೆಡ್ಡಿಗಳೆಲ್ಲ ಸದ್ಯ ಮಹದೇವಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಕ್ರಿಮಿಗಳು ಮತ್ತು ಮಾಜಿ ಮಂತ್ರಿ ಲಿಂಬಾವಳಿಯ ಪರಮಾಪ್ತರು.

ಈ ಪೈಕಿ ದೊಡ್ಡಣ್ಣನಂತಿರುವ ತಿಪ್ಪಾರೆಡ್ಡಿಗೆ ಅದ್ಹೇಗೆ ವಿಶ್ವ ಹಿಂದೂ ಪರಿಷತ್ ನಾಯಕ ಸಿಂಘಾಲನ ದೋಸ್ತಿಯಾಯಿತೋ. ಬೆಂಗಳೂರಿಗೆ ಬಂದಾಗೆಲ್ಲ ಸಿಂಘಾಲ್ ಈ ತಿಪ್ಪಾರೆಡ್ಡಿಯ ಮನೆಯಲ್ಲೇ ಠಿಕಾಣಿ ಹಾಕುತ್ತಾನೆ. ತಿಪ್ಪಾರೆಡ್ಡಿಯ ಮಗ ವಿನಯ್‌ಕುಮಾರ್ ರೆಡ್ಡಿ, ವಿಹಿಂಪದ ಬೆಂಗಳೂರು ಅಡ್ಡೆಯಂತಿರುವ ಶಂಕರಪುರದ 'ಧರ್ಮಶ್ರೀ'ಯನ್ನೇ ತನ್ನ ಕರ್ಮಸ್ಥಾನವನ್ನಾಗಿಸಿಕೊಂಡಿದ್ದಾನೆ. ಹೆಸರಿಗಷ್ಟೇ ಧರ್ಮಕಾರ್ಯ. ವಿಜಯ್‌ಕುಮಾರ್ ರೆಡ್ಡಿ ಹಳೇ ಏರ್‌ಪೋರ್ಟ್ ಭಾಗದ ಪಕ್ಕಾ ಕಿಡಿಗೇಡಿ ಮತ್ತು ಖತರ್‌ನಾಕ್ ಲ್ಯಾಂಡ್ ಗ್ರ್ಯಾಬರ್. ಸಂಜೆಯಾದರೆ ಮಾರತಹಳ್ಳಿ ರೈಲ್ವೇ ಗೇಟ್ ಪಕ್ಕದ ತಿಪ್ಪಾರೆಡ್ಡಿಯ ಅಡ್ಡೆಯಲ್ಲಿ ವಿಜಯ್ ಕುಮಾರ್ ರೆಡ್ಡಿ ತನ್ನ ಗ್ಯಾಂಗ್ ಸಮೇತ ಕುಡಿಯಲು ಕುಂತನೆಂದರೆ ಆವತ್ತು ಯಾರಾದರೂ ಒಬ್ಬನ ಮೂಳೆ ಮುರಿಯಿತೆಂದೇ ಅರ್ಥ.



ಅಶೋಕ್ ಸಿಂಘಾಲ್

ಸ.ನಂ. 20......!

ಇಂಥ ಬಲಾಢ್ಯ ನೆಲಕಂಟಕ ಗ್ಯಾಂಗ್ ಈಗ ವಿಶ್ವ ಹಿಂದೂ ಪರಿಷತ್ ಸೋಗಿನಲ್ಲಿ ಚಿನ್ನಪ್ಪನಹಳ್ಳಿಯ 125 ಕೋಟಿಯ ಸರ್ಕಾರಿ ಸೊತ್ತಿಗೆ ಕೈಹಾಕಿದೆ. ಹಳೇ ಏರ್‌ಪೋರ್ಟ್ ಪಕ್ಕದ ಚಿನ್ನಪ್ಪನ ಹಳ್ಳಿಯ ಮೇಲೆ ರಿಂಗ್‌ರೋಡ್ ಹಾದು ಹೋಗಿದ್ದೇ ತಡ, ಈ ಭಾಗದ ಭೂಮಿಗೆ ಬಂಗಾರದ ಬೆಲೆ ಬಂದಿದೆ. ಒಂದಾನೊಂದು ಕಾಲಕ್ಕೆ ಎಕರೆಗೆ ಮುನ್ನೂರೋ, ಐನೂರೋ ಇದ್ದದ್ದು ಏಕಾಏಕಿ 6 ಕೋಟಿಗೇರಿದರೆ ಏನಾಗಬೇಡ?

ಮಾರತಹಳ್ಳಿ ರಿಂಗ್‌ರಸ್ತೆಯ ಮಹತ್ವ ಮತ್ತು ರಿಯಲ್ ಎಸ್ಟೇಟ್ ಆರ್ಭಟಕ್ಕೆ ತಕ್ಕಂತೆ ಚಿನ್ನಪ್ಪನ ಹಳ್ಳಿ ಸುತ್ತಮುತ್ತಲ ರಾಜಕಾಲುವೆ, ಮರುವೆ ಕಾಲುವೆ, ಹಳ್ಳ, ಕಾಲುದಾರಿಗಳೆಲ್ಲವನ್ನೂ ಇದೇ ತಿಪ್ಪಾರೆಡ್ಡಿ ಮಗ ವಿಜಯಕುಮಾರ್ ರೆಡ್ಡಿ ಗ್ಯಾಂಗ್ ಆಕ್ರಮಿಸಿ ಮಾರುತಿ ಲೇಔಟ್ ಎಂಬ ಅಕ್ರಮ ಲೇಔಟೊಂದನ್ನು ಶುರು ಹಚ್ಚಿಕೊಂಡಿತು. ಈ ಪೈಕಿ ರಾಜಕಾಲುವೆಯನ್ನೇ ಮುಚ್ಚಿ ಅಲ್ಲಿ ಪುಣೆಯ ಲ್ಯಾಂಡ್ ಡೆವಲಪರ್ ಸುಹಾಸ್ ಲಂಕಡ್‌ನ ರೋಹನ್ ಅಪಾರ್ಟ್‌ಮೆಂಟ್ ತಲೆಎತ್ತಿತ್ತು, ಅಕ್ಕಪಕ್ಕದಲ್ಲೇ ಮಹಾವೀರ್ ಅಪಾರ್ಟ್‌ಮೆಂಟ್, ರೋಹಿನ್ ಮಿಹಿರಾ, ಪೂರ್ವಂಕರ, ಮಂತ್ರಿ ಇತ್ಯಾದಿ 30 ಕ್ಕೂ ಅಧಿಕ ಅಪಾರ್ಟ್‌ಮೆಂಟುಗಳು ತಲೆ ಎತ್ತುತ್ತಿದ್ದಂತೆ ಅಪ್ಪಾ ತಿಪ್ಪಾರೆಡ್ಡಿ ಮತ್ತು ಮಗ ವಿಜಯ್‌ಕುಮಾರ್ ರೆಡ್ಡಿಯ ಕಣ್ಣು ಚಿನ್ನಪ್ಪನಹಳ್ಳಿಯ ಸನಂ.20ರ ಮೇಲೆ ಬಿತ್ತು.

ಒಂದಾನೊಂದು ಕಾಲಕ್ಕೆ ಬಂಡೆಗಳಿಂದ ತುಂಬಿದ್ದ ಈ 21.35 ಎಕರೆ ಭೂಮಿಯನ್ನು 1959 ರಲ್ಲಿ ಇನಾಮ್ ರದ್ಧತಿಯಾದ ನಂತರ ಸರ್ಕಾರ ತನ್ನ ವಶಕ್ಕೆ ಪಡೆದಾಗಿತ್ತು, 2008 ರ ಜನವರಿ 28 ರಂದು ಸ್ಪೆಷಲ್ ಡಿಸಿಯಾಗಿದ್ದ ರಾಮೇಗೌಡರು ಈ ಸಂಬಂಧ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಇಡೀ ಆಸ್ತಿಯನ್ನು ಮತ್ತೊಮ್ಮೆ ಸರ್ಕಾರಿ ಸೊತ್ತೆಂದು ಘೋಷಿಸಿ ಇದನ್ನು ಜೋಪಾನ ಮಾಡುವಂತೆ ಕೆ.ಆರ್. ಪುರದ ಬೆಂಗಳೂರು ಪೂರ್ವ ತಹಶೀಲ್ದಾರ್‌ಗೆ ಆದೇಶ ಕೊಟ್ಟರು. ವಿಶೇಷ ಜಿಲ್ಲಾಧಿಕಾರಿಯ ಈ ಆದೇಶದ ವಿರುದ್ಧ ತಿಪ್ಪಾರೆಡ್ಡಿ ಹೈಕೋರ್ಟಿಗೆ ಹೋದನಾದರೂ ಹೈಕೋರ್ಟ್ ಮತ್ತೆ ಇದು ಸರ್ಕಾರಿ ಸೊತ್ತೆಂದೇ ತೀರ್ಪಿತ್ತಿತು.



ತಿಪ್ಪಾರೆಡ್ಡಿ

ತಹಶೀಲ್ದಾರ್ ವೆಂಕಟೇಶ್

ಖದೀಮ ತಿಪ್ಪಾರೆಡ್ಡಿ ಇದಕ್ಕೂ ಜಗ್ಗದೇ ಮತ್ತೆ ಹೈಕೋರ್ಟ್ ದ್ವಿಸದಸ್ಯ ಪೀಠಕ್ಕೆ ಅರ್ಜಿ ಹಾಕಿ 2010 ರ ಸೆಪ್ಟೆಂಬರ್ 9 ರಂದು ಏಕಪೀಠದ ಆದೇಶಕ್ಕೆ ತಡೆ ತಂದುಬಿಟ್ಟ. ಅದು ತಾತ್ಕಾಲಿಕ ತಡೆ. ಯಥಾಸ್ಥಿತಿ ಪಾಲಿಸುವಂತೆ ಹೈಕೋರ್ಟ್ ಡಬಲ್ ಬೆಂಚ್ ಷರತ್ತು ವಿಧಿಸಿತ್ತು, ಈ ತಡೆಯಾಜ್ಞೆಯನ್ನು ತೆರವುಗೊಳಿಸಿ ನೆಲಕಂಟಕರ ವಿರುದ್ಧ ಹೋರಾಡಬೇಕಾಗಿದ್ದು ಕಂದಾಯ ಇಲಾಖೆ. ಈ ಹೊತ್ತಿಗಾಗಲೇ ಯಡ್ಡಿ ಸರ್ಕಾರ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವನ್ನು ಹುಟ್ಟುಹಾಕಿತ್ತು, ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆ ಎಂಬ ಪ್ರತ್ಯೇಕ ಪೊಲೀಸ್ ಘಟಕವೇ ಚಾಲ್ತಿಯಲ್ಲಿತ್ತು, ಆಗ ಬೆಂಗಳೂರು ಪೂರ್ವ ತಾಲ್ಲೂಕು ಅಸಿಸ್ಟೆಂಟ್ ಕಮೀಷನರ್ ಆಗಿದ್ದ ಬಿ.ಆರ್. ಕೃಷ್ಣನ್ ಎಂಬಾತ ನೇರಾನೇರ ತಿಪ್ಪಾರೆಡ್ಡಿ ಜೊತೆಗೇ ಕೈಜೋಡಿಸಿಬಿಟ್ಟ. ಸಾರ್ವಜನಿಕ ಜಮೀನುಗಳ ನಿಗಮದ ಮುಖ್ಯಸ್ಥ ಬಾಲಸುಬ್ರಹ್ಮಣ್ಯಂ ಎಂಬ ಐಎಎಸ್ ಅಧಿಕಾರಿ ಕೂಡ ಹೈಕೋರ್ಟ್ ತಡೆಯಾಜ್ಞೆ ತೆರವುಗೊಳಿಸುವಲ್ಲಿ ನಿಷ್ಕ್ರಿಯನಾಗಿಬಿಟ್ಟ.

ಅಲ್ಲಿಗೆ ಸರ್ಕಾರವೇ ತನ್ನ ಸೊತ್ತನ್ನು ನೆಲಗಳ್ಳರ ಬಾಯಿಗೆ ಹಾಕಲು ಕಳ್ಳಾಟ ಆರಂಭಿಸಿದ್ದು ನಿಚ್ಚಳವಾಗಿತ್ತು, ಸ್ಪೆಷಲ್ ಡಿಸಿ ರಾಮೇಗೌಡರ ಆದೇಶದ ಪ್ರಕಾರ ಆಗ ಕೆ.ಆರ್. ಪುರಕ್ಕೆ ತಹಶೀಲ್ದಾರ್ ಆಗಿದ್ದ ವೆಂಕಟೇಶ್ ಇಡೀ ಸೊತ್ತನ್ನು ವಶಪಡಿಸಿಕೊಳ್ಳಬೇಕಿತ್ತು, ಸ್ಪೆಷಲ್ ತಹಶೀಲ್ದಾರ್ ಕೃಷ್ಣ ಎಂಬಾತನೂ ನೆಲಗಳ್ಳ ರೆಡ್ಡಿಗಳ ಜೊತೆ ಚಕ್ಕಂದಕ್ಕಿಳಿದ. ವೆಂಕಟೇಶ್‌ನ ನಂತರ ಆಶಾ ಪರ್ವೀನ್ ತಹಶೀಲ್ದಾರ್ ಆಗಿ ಬಂದಳಾದರೂ ಆಕೆಯನ್ನು ಎಮ್ಮೆಲ್ಲೇ ನಂದೀಶ್ ರೆಡ್ಡಿ ಇರಗೊಡಲಿಲ್ಲ, ಈಗ ಶಿವಕುಮಾರ್ ಕೆ.ಆರ್. ಪುರಕ್ಕೆ ತಹಶೀಲ್ದಾರ್ ಆಗಿದ್ದಾನಾದರೂ ಈತ ಪ್ರತಿ ಸಂಜೆ ತಿಪ್ಪಾರೆಡ್ಡಿಯ ಅಡ್ಡೆಯಲ್ಲೇ ತಿಂಡಿತೀರ್ಥ ಮುಗಿಸಿ ಹೋಗುತ್ತಾನೆ.

ಹೀಗೆ ಕಂದಾಯ ಇಲಾಖೆಯ ಡಿಸಿಯಿಂದ ಹಿಡಿದ[...] ತಹಶೀಲ್ದಾರ್ ತನಕ ಯಾರೊಬ್ಬರೂ ಹೈಕೋರ್ಟ್ ತಡೆಯಾ[...] ತೆರವಿಗೆ ಯತ್ನಿಸುತ್ತಿಲ್ಲ, ಎಲ್ಲಕ್ಕೂ ಮಿಗಿಲಾಗಿ ಸಾರ್ವಜನಿ[...] ಜಮೀನುಗಳ ನಿಗಮದ ಮುಖ್ಯಸ್ಥ ಬಾಲಸುಬ್ರಹ್ಮಣ್ಯಂ[...] ಈ ಬಗ್ಗೆ ಕಾಳಜಿಯಿರಬೇಕಿತ್ತು, ಆದರೆ ನಿಗಮದ ಜಾರಿದಳ[...] ವಿಶೇಷ ಜಿಲ್ಲಾಧಿಕಾರಿಯಾಗಿರುವವನ[...] ಖದೀಮ ಕೆಎಎಸ್ ಬಸಪ್ಪ ಈತ ಹೇಳಿಕೇ[...] ನೆಲಕಂಟಕ ತಿಪ್ಪಾರೆಡ್ಡಿಯ ಹಿತೈಷಿ. ಈತ[...] ಜೊತೆ ನಿಗಮದ ವಿಶೇಷಾಧಿಕಾರಿಯಾಗಿ[...] ಜಿ.ಎಸ್. ನಾಯಕ್, ಬಿಬಿಎಂಪಿಯ ಮ[...] ದೇವಪುರ ವಲಯಕ್ಕೆ ಜಂಟಿ ಕಮೀಷನ[...] ಆಗಿದ್ದ ಹೀರಾನಾಯಕ್, ಬೆಂಗಳೂರ[...] ಪೂರ್ವದ ಸರ್ವೆ ಸೂಪರ್‌ವೈಸರ್ ರಫೀಕ[...] ಅಹ್ಮದ್; ಹೀಗೆ ಪ್ರತಿಯೊಬ್ಬ ಅಧಿಕಾರಿಯೂ ನೆಲಗ[...] ತಿಪ್ಪಾರೆಡ್ಡಿ ಮತ್ತು ಮಗ ವಿಜಯ್‌ಕುಮಾರ್ ರೆಡ್ಡಿಯ[...] ಜೊತೆ ಕೈಜೋಡಿಸಿದ್ದಾರೆ.

ಎಮ್ಮೆಲ್ಸಿ ನಾಡಗೌಡ

ಹೈಕೋರ್ಟ್ ತಡೆ ಕೊಟ್ಟು ಏಳು ತಿಂಗಳುಗಳ[...] ಕಳೆದಿವೆ. ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂಬ ಕೋರ್ಟ್[...] ಆದೇಶವನ್ನೂ ಧಿಕ್ಕರಿಸಿದ ತಿಪ್ಪಾರೆಡ್ಡಿ ಗ್ಯಾಂಗ್ ಸದ್ಯ ಇಡಿ[...] ಭೂಮಿಯನ್ನು ಬುಲ್ಡೋಜರ್ ನುಗ್ಗಿಸಿ ಮಟ್ಟ ಮಾಡುತ್ತಿ[...] ಪಕ್ಕದಲ್ಲೇ ಇಟ್ಟಿಗೆ ಫ್ಯಾಕ್ಟರಿಯನ್ನು ಆರಂಭಿಸಿದೆ. ಇದು ಸನಂ. 20 ರ ಕತೆಯಾದರೆ ಇದರ ಪಕ್ಕದಲ್ಲೇ ಸನಂ. 1 ರಿಂ[...] 14 ರವರೆಗಿನ ಜಮೀನಿನಲ್ಲಿ ತಿಪ್ಪಾರೆಡ್ಡಿಯ ಖಾಸ[...] ಲೇಔಟಾದ ಮಾರುತಿ ಲೇಔಟ್ ತಲೆ ಎತ್ತಿದೆ. 10 ಎಕ[...] ವಿಸ್ತೀರ್ಣದ 120 ಸೈಟುಗಳ ಈ ಲೇಔಟ್‌ನಲ್ಲಿ ರಾಜ[...] ಕಾಲುವೆ, ಮರುವೆ ಕಾಲುವೆ, ಹಳ್ಳ ಸೇರಿದಂತೆ 3 ಎಕರೆಗ[...] ಮಿಕ್ಕ ಸರ್ಕಾರಿ ಜಮೀನಿದೆ. ಈ ಮೂರೂ ಎಕರೆ ಸರ್ಕಾ[...] ಭೂಮಿಯನ್ನು ತಿಪ್ಪಾರೆಡ್ಡಿ ಗ್ಯಾಂಗ್ ಕೇವಲ ಮಾರು[...] ಲೇಔಟಿಗಾಗಷ್ಟೇ ಅಲ್ಲ ಪುಣೆಯ ಕುಖ್ಯಾತ ಬಿಲ್ಡರ್ ಸುಹಾ[...] ಲಂಕಡ್ ಎಂಬಾತನ ರೋಹಿನ್ ಮಿಹಿರಾ ಎಂ[...] ಅಪಾರ್ಟ್‌ಮೆಂಟಗೂ ನಕಲಿ ದಾಖಲೆ ಸೃಷ್ಟಿಸಿ ಮಾರಿದ[...]

ಅಷ್ಟಕ್ಕೂ ಪುಣೆಯ ಬಿಲ್ಡರ್ ಸುಹಾಸ್ ಲಂಕಡ್‌ನನ[...] ತಿಪ್ಪಾರೆಡ್ಡಿಗೆ ಪರಿಚಯಿಸಿದ್ದೇ ವಿಹಿಂಪ ನಾಯಕ ಅಶೋ[...] ಸಿಂಘಾಲ್. ರಾಜಾ ಕಾಲುವೆಯ ಮೇಲೇ ತಲೆಎತ್ತಿ[...] ರೋಹನ್ ಅಪಾರ್ಟ್‌ಮೆಂಟ್ ಮತ್ತು ಮಾರುತಿ ಲೇಔಟ[...] ವಿರುದ್ಧ 2010 ರಲ್ಲಿ ಎಮ್ಮೆಲ್ಸಿ ನಾಡಗೌಡರೇ ವಿಧಾನಪರಿಷ[...] ನಲ್ಲಿ ಬೊಬ್ಬೆಯಿಟ್ಟರು. ಆವತ್ತು ಮುಖ್ಯಮಂತ್ರಿ ಯಡ್ಡಿಯ[...] ಸರ್ವೆಕಾರ್ಯ ನಡೆಯುತ್ತಿದೆಯೆಂದೂ, ಸರ್ವೆ ಮುಗಿ[...] ನಂತರ ಅಷ್ಟೂ ಜಮೀನನ್ನು ತೆರವುಗೊಳಿಸುತ್ತೇವೆಂದ[...] ಪರಿಷತ್ತಿನಲ್ಲಿ ಭರವಸೆ ಕೊಟ್ಟರು. ಆದರೆ ಈತನಕ ಸರ್ವೆಯ[...] ನಡೆಸಿಲ್ಲ, ಸರ್ವೆ ನಡೆಸಲು ಕೇವಲ ಒಂದು ದಿನ ಸಾಕ[...]

ಅಷ್ಟಕ್ಕೂ ಸರ್ಕಾರಿ ಭೂಮಿ ವಶಪಡಿಸಿಕೊಳ್ಳಲು ಸರ್[...] ಆಗಲೇಬೇಕೆಂದಿಲ್ಲ, ಹಿಂದಿದ್ದ ಸ್ಪೆಷಲ್ ಡಿಸಿ ರಾಮೇಗೌಡ[...] ಸರ್ವೆ ಮಾಡಿ ಇದು ಸರ್ಕಾರದ ಸೊತ್ತೆಂದು ಆದೇ[...] ಕೊಟ್ಟ ಮೇಲೆ ಈಗ ಮತ್ತೆ ಯಡ್ಡಿ ಸರ್ಕಾರ ಏಕೆ ಸರ್ವೆಯ[...] ನೆಪವೊಡ್ಡುತ್ತಿದೆ?

ಮಾರುತಿ ಲೇಔಟ್ ಲೂಟಿ

ಮಹದೇವಪುರದ ಹಾಲಿ ಶಾಸಕ ಮತ್ತು ಮಾಜಿ ಮಂತ್ರಿ ಲಿಂಬಾವಳಿಗೆ ಅದೇನು ದೌರ್ಬಲ್ಯವೋ ಗೊತ್ತಿಲ್ಲ, ಸನಂ. 20 ರ 21.35 ಎಕರೆ ಸರ್ಕಾರಿ ಸೊತ್ತನ್ನು ಈ ಭಾಗದ ಜನರ ಭವಿಷ್ಯಕ್ಕಾಗಿಯಾದರೂ ರಕ್ಷಿಸಿಕೊಳ್ಳುವಂತೆ ಈ ಭಾಗದ ಅನೇಕ ಪ್ರಜ್ಞಾವಂತರು ಬೇಕಾಬಿಟ್ಟಿ ಮನವಿ ಕೊಟ್ಟು ಸುಸ್ತಾದರೆ ಹೊರತು ನಯಾಪೈಸೆಯ ಪ್ರಯೋಜನವಾಗಿಲ್ಲ.


ತಿಪ್ಪಾರೆಡ್ಡಿಯ ತಮ್ಮ ಸತ್ಯನಾರಾಯಣ ರೆಡ್ಡಿಯ ಮಕ್ಕಳಾದ ನರೇಂದ್ರಬಾಬು ಮತ್ತು ರವಿಕುಮಾರ್, ವಿಹಿಂಪ ನಾಯಕ ವಿಜಿ ಮತ್ತವನ ಅಣ್ಣ ಉಮಾಶಂಕ್ರ (ತಿಪ್ಪಾರೆಡ್ಡಿ ಮಕ್ಕಳು) ಈ ಭಾಗದ ರಾಜಾಕಾಲುವೆ, ಕಾಲುದಾರಿ, ಮೋರಿ, ಗೋಮಾಳ ಯಾವುದನ್ನೂ ಬಿಟ್ಟಿಲ್ಲ. ಸಾರ್ವಜನಿಕರ ಪೈಕಿ ಯಾರೇ ಈ ಸರ್ಕಾರಿ ಆಸ್ತಿಯನ್ನು ಸ್ಮಶಾನಕ್ಕೋ, ಶಾಲೆಗೋ ಮೀಸಲಿಡಿ ಎಂದು ಮನವಿ ಕೊಟ್ಟರೂ ವಿಜಯ ಗ್ಯಾಂಗ್ ಅಂಥವರನ್ನು ಪತ್ತೆಹಚ್ಚಿಕೊಂಡು ಬಂದು ಹಿಂಸಿಸುತ್ತದೆ. ಚಿನ್ನಪ್ಪನ ಹಳ್ಳಿಯ ಸನಂ. 5/1, 6,5/2,7 ಗಳಲ್ಲಿ ತಲೆಎತ್ತಿದ್ದ ಮಾರುತಿ ಲೇಔಟ್‌ನಲ್ಲಿ ತಮಗೂ ಪಾಲು ಬೇಕೆಂದು ತಿಪ್ಪಾರೆಡ್ಡಿಯ ಅಕ್ಕ ಜಯಮ್ಮ ಮತ್ತು ತಂಗಿ ವನಮಾಲ ಇಲ್ಲಿಗೆ ಮೂರು ವರ್ಷ[...] ಹಿಂದೆ ಕೇಸು ಹಾಕಿದ್ದಾರೆ.



ಮಾರುತಿ ಲೇಔಟಿನಲ್ಲಿ ಬೇನಾಮಿ ಸೈಟು

ಮಾರುತಿ ಬಡಾವಣೆಯ ಹತ್ತಿರದಲ್ಲಿ ಈಗಾಗಲೇ 120 ಸೈಟು ವಿಂಗಡಿಸಿ[...] ತಿಪ್ಪಾರೆಡ್ಡಿ ಪ್ರತಿ ಸೈಟನ್ನೂ ಎಂಟೋ ಹತ್ತೋ ಲಕ್ಷಕ್ಕೇ ಮಾರಿಕೊಂಡಿದ್ದ. ಈ ಪೈ[...] 3 ಎಕರೆಗೆ ಕೋರ್ಟು ಜಯಮ್ಮ ಮತ್ತು ವನಮಾಲರ ಪರವಾಗಿ ಇಲ್ಲಿಗೆ ವರ್ಷ[...] ಹಿಂದೆ ತಡೆಯಾಜ್ಞೆ ನೀಡಿತ್ತು. ಇದನ್ನೇ ನೆಪ ಮಾಡಿಕೊಂಡ ತಿಪ್ಪಾರೆಡ್ಡಿ ಇಡಿ[...] ಮಾರುತಿ ಲೇಔಟಿನ ಹತ್ತಿರಕ್ಕೂ ಕೋರ್ಟ್ ತಡೆ ನೀಡಿದೆಯೆಂದು ಸುಳ್ಳುಸುಳ್ಳೆ[...] ಬೋರ್ಡು ಬರೆಸಿ ಹಾಕಿದ. ಈ ಹೊತ್ತಿಗಾಗಲೇ ಸೈಟು ಖರೀದಿಸಿದವರೆಲ್ಲ ಕಂಗಾಲಾ[...] ವಿಚಾರಿಸಲು ಬಂದರೆ ತಿಪ್ಪಾರೆಡ್ಡಿ "ನೋಡಿ ಇಡೀ ಲೇಔಟಿಗೇ ಸ್ಟೇ ತಂದಿದ್ದಾ[...] ಆವತ್ತು ನೀವು ಎಷ್ಟು ಕೊಟ್ಟಿದ್ದೋ ಅಷ್ಟು ದುಡ್ಡನ್ನು ವಾಪಸ್ಸು ಕೊಡ್ತೀನಿ. ಬೇಡ ಅಂದ್ರೆ ನಿಮ್ಮ ಕರ್ಮ......!" ಎಂದು ಸೈಟುದಾರರನ್ನು ಹೆದರಿಸುತ್ತಾನೆ.

ಇವರಾಗ ಸದ್ಯ ಮೂವತ್ತೋ ನಲವತ್ತೋ ಲಕ್ಷ ಬೆಲೆಬಾಳುವ ಸೈಟನ್ನು ಆರೋ ಎಂಟೋ ಲಕ್ಷಕ್ಕೆ ಲಪಟಾಯಿ[...] ಮತ್ತೆ ಅದನ್ನು ಮೂವತ್ತೋ ನಲವತ್ತೋ ಲಕ್ಷಕ್ಕೆ ಮಾರಿಕೊಳ್ಳುವುದು. ಹೇಗಿದೆ ನೆಲಗಳ್ಳನ ತಂತ್ರ?


...254 ಜನವರಿ 2010
ಮುಖ್ಯಮಂತ್ರಿ

...ರಾಜಾಕಾಲುವೆ ಮೇಲೆ ರೋಹನ್ ಅಪಾರ್ಟ್‌ಮೆಂಟ್ ...ಟ್ಟಿದ ಪುಣೆಯ ಬಿಲ್ಡರ್ ಸುಹಾಸ್ ಲಂಕಡ್ ವಿಹಿಂಪ ...ಯಕ ಅಶೋಕ್ ಸಿಂಘಾಲನ ನಂಬಿಕಸ್ತ ಬಂಟ. ...ನ್ನಪ್ಪನಹಳ್ಳಿಯ ಭೂಮಾಲೀಕ ತಿಪ್ಪಾರೆಡ್ಡಿ ಕೂಡ ಸಿಂಘಾಲ ...ಪರಮಾಪ್ತ. ತಿಪ್ಪಾರೆಡ್ಡಿಯ ಮಗ ವಿಜಯ್‌ಕುಮಾರ್ ...ವಿಹಿಂಪದ ಬೆಂಗಳೂರು ಅಧ್ಯಕ್ಷ. ವಿಧಾನ ಪರಿಷತ್ತಿನಲ್ಲಿ ...ಡಗೌಡರೇ ಸರ್ಕಾರಿ ಜಮೀನು ರಕ್ಷಿಸುವಂತೆ ಮೊರೆ ...ಟ್ಟರೂ ಸಾಕ್ಷಾತ್ ಮುಖ್ಯಮಂತ್ರಿಯೇ ಭರವಸೆ ...ಟ್ಟರೂ ರಾಜಾಕಾಲುವೆ ತೆರವುಗೊಳಿಸುವಲ್ಲಿ ಯಾವೊಬ್ಬ ...ಕಾರಿಗೂ ಆಸಕ್ತಿಯಿಲ್ಲ.

ಅಷ್ಟೇ ಏಕೆ; 21.35 ಎಕರೆ ಸರ್ಕಾರಿ ಭೂಮಿಯನ್ನು ...ಳಿಸಿಕೊಳ್ಳುವತ್ತ ಸಾರ್ವಜನಿಕ ಜಮೀನುಗಳ ನಿಗಮದ ...ಧ್ಯಕ್ಷ ಬಾಲಸುಬ್ರಹ್ಮಣ್ಯಂ ಆಗಲಿ, ವಿಶೇಷ ಜಿಲ್ಲಾಧಿಕಾರಿ ...ಪ್ಪನಾಗಲಿ ಕಾಟಾಚಾರಕ್ಕೂ ಆಸಕ್ತಿ ತೋರುತ್ತಿಲ್ಲ. ಇನ್ನು ...ಬಿಎಂಪಿಯ ಜಂಟಿ ಆಯುಕ್ತ ಹೀರಾನಾಯಕ್ ಯಾರೇ ...ರ್ವಜನಿಕರು ಈ ಬಗ್ಗೆ ದೂರು ಕೊಟ್ಟರೆಂದರೆ ಅಂಥವರ ...ತಾನೇ ತಿಪ್ಪಾರೆಡ್ಡಿಗೆ ಫೋನ್ ಮಾಡಿ ಮಾಹಿತಿ ...ಡುತ್ತಾನೆ. ಮುಖ್ಯಮಂತ್ರಿ ಆಸಕ್ತಿ ವಹಿಸದೆ ಈ ಪಾಟ ...ರ್ಕಾರಿ ಸೊತ್ತೊಂದನ್ನು ನೆಲಗಳ್ಳರು ಕಬಳಿಸಲು ಹೇಗೆ ...ನೇ ಸಾಧ್ಯ?

ಏರ್‌ಪೋರ್ಟ್ ಸುತ್ತಮುತ್ತಲ ಮಾರುತಹಳ್ಳಿ, ಚಿನ್ನಪ್ಪನ ...ಳ್ಳಿ ಮುನ್ನೇಕೊಳಾಲು, ದೊಡ್ಡನೆಕ್ಕುಂದಿ, ಬೆಳ್ಳಂದೂರು, ...ಯಮ್ಮನ ಅಗ್ರಹಾರ ಇತ್ಯಾದಿ ಏರಿಯಾಗಳಲ್ಲಿ ಸದ್ಯ ...ಹೂಳುವುದಕ್ಕೂ ಸರ್ಕಾರಿ ಜಮೀನಿಲ್ಲ. ಇನ್ನು ಬಸ್ ...ಲ್ದಾಣ, ಪಾರ್ಕುಗಳು, ಆಸ್ಪತ್ರೆ, ಆಟದ ಮೈದಾನಕ್ಕೆ ಅಂತ ...ದಿಂಚು ಜಮೀನು ಕೂಡ ಉಳಿದಿಲ್ಲ. ಇಂಥಾ ಸ್ಥಿತಿಯಲ್ಲಿ ...ರುವ 21.35 ಎಕರೆ ಸರ್ಕಾರಿ ಸೊತ್ತನ್ನೂ ಸರ್ಕಾರಿ ...ಳಿಸಿಕೊಳ್ಳುತ್ತಿಲ್ಲ ಅಂದರೆ ಮುಂದೊಮ್ಮೆ ಈ ಭಾಗದ ...ರ ಬವಣೆ ಏನಾಗಬೇಡ? ಸರ್ಕಾರವೇ ನಿಂತು ಈ ಪಾಟ ...ತ್ತಿಯನ್ನು ನೆಲಗಳ್ಳರ ಬಾಯಿಗೆ ಹಾಕುತ್ತಿದೆಯೆಂದರೆ, ...ರ್ಕಾರಿ ಭೂಮಿಯನ್ನು ರಕ್ಷಿಸುತ್ತೇನೆಂಬ ಮುಖ್ಯಮಂತ್ರಿಯ ...ಮಾತಿಗೆ ಏನು ಅರ್ಥವಿದೆ? ಯಾವ ಮುಖ ಹೊತ್ತು ...ಜೆಪಿ ಸರ್ಕಾರ ಬಡಬಗ್ಗರ ಗುಡಿಸಲು ... ಹಾಕಿಸಿ ...ರ್ಕಾರಿ ಭೂಮಿ ರಕ್ಷಿಸುತ್ತದೆ?

...ಯಡ್ಡಿ ಸರ್ಕಾರದ ಭೂಹಗರಣಗಳ ಪಟ್ಟಿಗೆ ಈ ...ಮೂಲಕ ವಿಶ್ವಹಿಂದೂ ಪರಿಷತ್ ಕೂಡ ಕೈಜೋಡಿಸಿ ...ಂತಾಯ್ತು.

• ...ರಾ. ಸೋಮನಾಥ್

ಹೆಮ್ಮಿಗನೂರ ಕೋಣನ ಮುಂದೆ!

ಸಾಣೆಹಳ್ಳಿಯ ಶಿವಸಂಚಾರ ಬಹಳ ಒಳ್ಳೆಯ ನಾಟಕಗಳನ್ನು ತೆಗೆದುಕೊಂಡು ಸಂಚಾರ ಹೊರಟಿದೆ ಎಂದು ತಿಳಿಯಿತು. ಶಿವಮೊಗ್ಗಕ್ಕೆ ತರಿಸಿ ನೋಡಿ ಎಂದು ಸಂಚಾರದ ಉಸ್ತುವಾರಿಯ ಬಿ. ರಾಜು ಫೋನ್ ಮಾಡಿದರು. ಮೂರು ನಾಟಕ ಪ್ರದರ್ಶನಕ್ಕೆ 20 ಸಾವಿರ ಕೊಡಬೇಕು, ಪಾತ್ರಧಾರಿಗಳ ಊಟ ವಸತಿ, ಕುವೆಂಪು ರಂಗಮಂದಿರದ ಬಾಡಿಗೆ ಇತ್ಯಾದಿಗಳನ್ನು ಲೆಕ್ಕ ಹಾಕಿ, ಟಿಕೆಟ್ ಮಾರಿ ಪ್ರದರ್ಶನ ಕೊಟ್ಟರೆ ಹೇಗೆ ಎಂದು ಚಿಂತಿಸಲಾಯ್ತು. ಆದರೆ ಜನ ಈಚೆಗೆ ಎಷ್ಟು ಸಿನಿಕರಾಗಿದ್ದಾರೆಂದರೆ ಕನಿಷ್ಠ 20 ರೂ ಟಿಕೆಟ್ ಇಟ್ಟರೂ ಬರುವುದಿಲ್ಲ. ಬಿಟ್ಟಿ ತೋರಿಸುತ್ತೇವೆಂದರೂ ತಾತ್ಸಾರ ಮಾಡುತ್ತಾರೆ. ಅದರಲ್ಲೂ ಶಿವಮೊಗ್ಗದ ಶರಣರು ಪ್ರಸಾದವಿದೆ ಎಂದರೆ ಮಾತ್ರ ಬರುವಂತಹವರು. ಇದನ್ನೆಲ್ಲಾ ಯೋಚಿಸಿ ಶಿವಸಂಚಾರ ನಾಟಕ ತರಿಸಲು ನಾವು ಅಸಮರ್ಥರಾಗಿದ್ದೇವೆ ಎಂದು ಹೇಳಿದೆ. ಆದರೆ ನಾಟಕ ನೋಡುವ ಕುತೂಹಲವಿದ್ದ ಕಾರಣಕ್ಕೆ ಹೊಳಲ್ಕೆರೆ ತಾಲ್ಲೂಕಿನ ಹೆಮ್ಮಿಗನೂರಿಗೆ ಹೋದೆ.


ಈ ಹೆಮ್ಮಿಗನೂರು ಗೆಳೆಯರಾದ ಡಾ. ಡಿ.ಸಿ. ರಾಜಪ್ಪನವರ ಊರು. ಅಲ್ಲಿ ಊರ ಹಬ್ಬವಿದ್ದುದರಿಂದ ಸುತ್ತಲ ಹಳ್ಳಿಗಳ ಜನ ಸೇರುವ ಕಾರಣಕ್ಕೆ ಶಿವಸಂಚಾರ ನಾಟಕ ನೋಡಿ ಹೋಗಲೆಂಬ ವ್ಯವಸ್ಥೆಯಾಗಿತ್ತು.

ಮೊದಲ ದಿನ ಚಂದ್ರಶೇಖರ ಕಂಬಾರರ 'ಚಕೋರಿ' ನಾಟಕವಿತ್ತು. ಇದರ ನಿರ್ದೇಶಕ ಮಹಾದೇವ ಹಡಪದ. ಕೆಲಸಕ್ಕೆ ಬಾರದ ಹುಡುಗನಂತೆ ಕಾಣುವ ಹಡಪದರಲ್ಲಿ ಎಂತಹ ನಿರ್ದೇಶಕನಿದ್ದಾನೆಂದರೆ, ಸತ್ತಂತಿರುವ ನಾಟಕಕ್ಕೂ ಜೀವ ಕೊಡುವ ಶಕ್ತಿಯಿದೆ. ನಾನು ದೊಡ್ಡವರಿಗೆಂದು ಬರೆದ ನಾಟಕವೊಂದನ್ನು ಮಕ್ಕಳಿಗೆ ಆಡಿಸಿ ನನ್ನ ನಾಟಕ ಎಲ್ಲಿ ಹೋಯ್ತು ಎನ್ನುವಂತೆ ಮಾಡಿದ್ದರು. ಇಂತವರಿಗೆ 'ಚಕೋರಿ' ಸಿಕ್ಕರೆ ಬಿಡುತ್ತಾರೆಯೇ?! ಕಂಬಾರರ ಘಾಟಕ ದೃಶ್ಯಕಾವ್ಯವೂ ಆಗಿರುತ್ತದೆ. ಅದಕ್ಕೆ ಚ್ಯುತಿಬಾರದಂತೆ ಮಹದೇವ ಹಡಪದ ರಂಗದ ಮೇಲೆ ತಂದಿದ್ದಾರೆ. ಮಹದೇವ ಹಡಪದ ಜನಪದ ವ್ಯಕ್ತಿ, ಕಂಬಾರರು ಜನಪದ ಕವಿ. ಆ ಕಾರಣಕ್ಕೆ 'ಚಕೋರಿ' ಜಾನಪದ ಸೊಗಡಿನಲ್ಲಿ ಮೇಳೈಸಿ ಮೂಡಿಬಂದಿದೆ.

ಪ್ರಕಾಶ್ ಗರುಡ ನಿರ್ದೇಶನದ ಎರಡನೆ ನಾಟಕ 'ಸತ್ಯ ಹರಿಶ್ಚಂದ್ರ'. ನಮ್ಮ ತಲೆಯಲ್ಲಿ ಹರಿಶ್ಚಂದ್ರ ಎಂದ ಕೂಡಲೇ ಮೂಡಿಬರುವ ಚಿತ್ರ ಅಣ್ಣನವರದ್ದು, ಹಾಗೆಯೇ ವಿಶ್ವಾಮಿತ್ರ, ನಕ್ಷತ್ರಿಕನಾಗಿ ಉದಯಕುಮಾರ್, ನರಸಿಂಹರಾಜು ಹೊರತು ಬೇರೆಯವರನ್ನು ಕಲ್ಪಿಸಿಕೊಳ್ಳ ಲಾಗುವುದಿಲ್ಲ. ಏಕೆಂದರೆ 'ಸತ್ಯ ಹರಿಶ್ಚಂದ್ರ' ಚಿತ್ರವನ್ನು ಅದೆಷ್ಟು ಬಾರಿ ನೋಡಿದ್ದೇನೊ ಗೊತ್ತಿಲ್ಲ. ಈಗಲೂ ಹಲವು ದೃಶ್ಯಗಳ ಮಾತು, ಹಾಡುಗಳೆಲ್ಲಾ ತಲೆಯಲ್ಲಿವೆ. ಆದರೂ ಶಿವಸಂಚಾರದ ಹರಿಶ್ಚಂದ್ರ ನಮಗೆ ಸತ್ಯದ ಇನ್ನೊಂದು ಮಗ್ಗುಲನ್ನು ತೋರಿಸುತ್ತದೆ.

ವರುಣದೇವನ ಕೃಪೆಯಿಂದ ರೋಹಿತಾಶ್ವನನ್ನು ಪಡೆದ ಹರಿಶ್ಚಂದ್ರ, ಮಾತಿನಂತೆ ಮಗನನ್ನು ಬಲಿಕೊಡುವ ಬದಲು, ಬಡಬ್ರಾಹ್ಮಣನ ಮಗನಾದ ಶುನಶ್ಶೇಫನನ್ನು ಬಲಿಕೊಡಲು ತಯಾರಾಗುವುದು, ದೇವತೆಗಳೆಲ್ಲಾ ಸೇರಿ ಅದನ್ನು ತಪ್ಪಿಸುವುದು, ಕಡೆಗೆ ಅನ್ಯರ ಮಗನನ್ನು ಬಲಿಕೊಡಲು ತಯಾರಾಗಿದ್ದ ಸತ್ಯ ಹರಿಶ್ಚಂದ್ರ ತನ್ನ ಮಗನನ್ನೆ ಸ್ಮಶಾನದಲ್ಲಿ ಹೆಣವಾಗಿ ನೋಡುವುದು, ಇಲ್ಲೆಲ್ಲಾ ನಾವು ನೋಡಿದ್ದ ಸಿನಿಮಾ ಮರೆಯಾಗಿ ಬೇರೊಂದು ನಾಟಕವೇ ತೆರೆದುಕೊಳ್ಳುತ್ತದೆ. ಇನ್ನೂ ಒಂದು ವಿಶೇಷವೆಂದರೆ, ಈ ನಾಟಕದಲ್ಲಿ ನಮ್ಮ ಸೀಮೆಯ ಹಲವು ಪ್ರಾಂತ್ಯಗಳ ಭಾಷೆ ಬಳಸಿರುವುದು. ಲಂಬಾಣಿ ಭಾಷೆ ಕೂಡ ನಾಟಕದಲ್ಲಿ ಮಿಳಿತವಾಗಿದೆ.

ಸತ್ಯಹರಿಶ್ಚಂದ್ರ ನಾಟಕ ಕುರುಕ್ಷೇತ್ರ ಕತೆಯಂತೆ ಗೊತ್ತಿದ್ದರೂ ನೋಡುವ ನಾಟಕಗಳಲ್ಲೊಂದು. ಒಂದು ಕಾಲದಲ್ಲಿ ಕಂಪನಿಗಳನ್ನು ಸಾಕಿರುವ ನಾಟಕ. ಆದ್ದರಿಂದ ಈ ನಾಟಕವನ್ನು ಪೌರಾಣಿಕವಾಗಿ, ಜಾನಪದವಾಗಿ ಮತ್ತು ಐತಿಹಾಸಿಕ ನಾಟಕ ರೂಪದಲ್ಲೂ ನೋಡಬಹುದು. ಇದರಲ್ಲಿ



ನಕ್ಷತ್ರಿಕ ಇರುವುದರಿಂದ ಹಾಸ್ಯಕ್ಕೆ ಕೊರತೆಯಿಲ್ಲ. ಎಲ್ಲಾ ಪಾತ್ರದಾರಿಗಳೂ ಬಹಳ ಚೆನ್ನಾಗಿ ನಟಿಸಿದ್ದಾರೆ. ಲೋಹಿತಾಶ್ವನ ಪಾತ್ರದಾರಿ ಪುಟ್ಟಿ. ತರೀಕೆರೆ ಪ್ರಾಂತ್ಯದ ಈ ತಬ್ಬಲಿ ಮಗು ಮನಸ್ಸಿನಲ್ಲುಳಿಯುತ್ತದೆ. ಹರಿಶ್ಚಂದ್ರ ಪಾತ್ರಧಾರಿ (ಅನಿಲ ದೇವಪೂರ) ಯಾವಾಗಲು ಘಟಸರ್ಪವನ್ನು ನೋಡಿದಂತೆ ಕಣ್ಣುಬಿಡುವುದನ್ನು ಕಡಿಮೆ ಮಾಡುವುದೊಳ್ಳೆಯದು.

ಮೂರನೆ ನಾಟಕ 'ಅಲ್ಲಮನ ಬಯಲಾಟ' ಇದು ಅಷ್ಟು ಸುಲಭಕ್ಕೆ ಪ್ರೇಕ್ಷಕರಿಗೆ ತಲುಪುವಂತಹ ನಾಟಕವಲ್ಲ. ಅಂತಾದ್ದರಲ್ಲಿ, ಬಸವಲಿಂಗಯ್ಯನವರ ಕೈಗೆ ಸಿಕ್ಕಿದರಂತೂ ರಂಗದ ಮೇಲೆಯೇ ಉಳಿದುಬಿಡುತ್ತದೆ. ಅಲ್ಲಮನ ಬಗ್ಗೆ ತಿಳಿದವರು ಮಾತ್ರ ನಾಟಕದೊಳಕ್ಕೆ ಹೋಗಿ ಕೈಗೆ ಸಿಗದ ಅಲ್ಲಮನ ಬಗ್ಗೆ ಮಾತನಾಡುತ್ತ ಎದ್ದು ಬರಬಹುದೆ ಹೊರತು ಸಾಮಾನ್ಯ ಜನಸಮೂಹದಿಂದ ದೂರ ಉಳಿಯುವ ನಾಟಕವಿದು.

ಸಾಣೆಹಳ್ಳಿಯ ಸ್ವಾಮಿ ಪಂಡಿತಾರಾಧ್ಯರಿಗೆ ಒಳ್ಳೆ ನಾಟಕ ಕಳಿಸಿಕೊಟ್ಟಿದ್ದೇವೆ ಎಂಬ ತೃಪ್ತಿ; ಬಸವಲಿಂಗಯ್ಯನವರಿಗೆ ಸಮರ್ಥ ನಿರ್ದೇಶನದ ಸಮಾಧಾನ ಕೊಟ್ಟಿರಬಹುದಾದ ಈ ನಾಟಕ ನೋಡಲು ಹೆಮ್ಮಿಗನೂರಿನಲ್ಲಿ ಬೆರಳೆಣಿಕೆಯಷ್ಟು ಜನ ಬಂದಿದ್ದರು.

ನಾಟಕದ ಸ್ಟೇಜಿನ ಮುಂದುಗಡೆ ಹತ್ತಿನೈದು ಮಕ್ಕಳು, ಹಿಂದುಗಡೆ ಎಂಟತ್ತು ಜನ ಗಂಡಸರು, ಉಳಿದಂತೆ ಕೆಲವು ಮಹಿಳೆಯರು, ಇಷ್ಟೇ ಜನ ಮೂರೂ ನಾಟಕದ ಪ್ರೇಕ್ಷಕರಾಗಿದ್ದರು. ಅಕಸ್ಮಾತ್ ಪಂಡಿತಾರಾಧ್ಯ ಸ್ವಾಮಿಗಳು ಬಂದರೆ ಅವರ ಕಣ್ಣಿಗೆ ಬಿದ್ದು ಪಾಪ್ಪ ಕೂಡ ಒಳ್ಳೆ ನಾಟಕದ ಅಭಿರುಚಿ ಬೆಳೆಸಿಕೊಂಡಿರುವ ಜನ ಎಂಬಂತೆ ತೋರಿಸಿಕೊಳ್ಳುವುದಿದೆಯಂತೆ. ಅದರೆ ಅವರಿಲ್ಲದಾಗ ಈ ಜನಕ್ಕೆ ನಾಟಕ ಅಷ್ಟಾಗಿ ಹಿಡಿಸುವುದಿಲ್ಲವಂತೆ. ಆದರೆ ಹಬ್ಬದ ಪ್ರಯುಕ್ತ ತರಿಸಿದ್ದ ಸಾಗರದ ಮಹಿಳೆಯರು ಬಾರಿಸುವ ಡೊಳ್ಳು ನೋಡಲು ಜನ ಮುಗಿಬಿದ್ದಿದ್ದರು.

ನಿಜಕ್ಕೂ ಡೊಳ್ಳು ಪೌರುಷದ ಕಲೆ. ಡೊಳ್ಳಿನ ಎಡ ಭಾಗಕ್ಕೆ ಆಡಿನ ಚರ್ಮ ಬಿಗಿದಿರುತ್ತಾರೆ. ಬಲಭಾಗಕ್ಕೆ ಹೋತನ ಚರ್ಮ. ಎಡಗಡೆ ಕೈಯಿಂದ ಬಾರಿಸುತ್ತ ಬಲಗೈ ಕೋಲಿಗೆ ಬಲವನ್ನೆಲ್ಲಾ ಬಿಟ್ಟು ಬಾರಿಸಿದಾಗ ಎದೆಗೆ ಹೊಡೆದಂತಾಗುತ್ತದೆ. ಬಾರಿಸುವಾತನ ವೇಷ ಕೂಡ ಕಂಬಳಿ, ಬೇವಿನಸೊಪ್ಪು, ದಂಡೆ, ವಿಭೂತಿಯಿಂದ ಕಂಗೊಳಿಸುತ್ತದೆ. ನಿಜವಾದ ಜಾನಪದ ಕಲೆಯ ಪ್ರದರ್ಶನ ದಂತಿರುತ್ತದೆ. ಆದರೆ ಈ ಸಾಗರದ ಮಹಿಳೆಯರು ಅಂತಹ ಕಲೆಯನ್ನು ಆಡಿಕೊಳ್ಳುತ್ತಿದ್ದಾರೊ ಏನೊ ಎಂದು ಅನುಮಾನ ಹುಟ್ಟಿಸುವಂತೆ ಪ್ಲಾಸ್ಟಿಕ್ ಹೊದಿಕೆಯ ಡೊಳ್ಳನ್ನು ಪಾತ್ರೆ ಬಡಿದಂತೆ ಬಡಿಯುತ್ತಾರೆ! ಈ ಹೆಣ್ಣುಮಕ್ಕಳ ಸಾಹಸವನ್ನು ಮೆಚ್ಚಬಹುದೇ ಹೊರತು, ಡೊಳ್ಳು ಇವರಿಗೆ ಹೇಳಿಸಿದ್ದಲ್ಲ, ಇದೊಂದು ರೀತಿ ಹೆಣ್ಣುಮಕ್ಕಳು ಕ್ರಿಕೆಟ್ ಆಡಿದಂತೆ ಅನ್ನಿಸಿತು. ಹೆಮ್ಮಿಗನೂರ ಜನ ಕೂಡ ಈ ಅದ್ಭುತ ಕಲೆಯ ಕಡೆ ಕಿವಿಗೊಡುವುದರ ಬದಲು ಕೃತಕ ವಿಭೂತಿ ಯಿಂದ ಕಂಗೊಳಿಸುವ ಮಹಿಳೆಯರ ಹಾವಭಾವ ನೋಡುವುದರಲ್ಲೇ ಮೈ ಮರೆತಿದ್ದರು!

ಡೊಳ್ಳು ನೋಡುತ್ತ ನಿಂತ ಅರ್ಧ ಜನ ಬಂದಿದ್ದರೂ ಸಾಕಿತ್ತು ಸಾಣೆಹಳ್ಳಿ ಶಿವಸಂಚಾರದ ನಾಟಕಗಳಿಗೆ ಕನಿಷ್ಠ ಗೌರವ ಕೊಟ್ಟಂತಾಗುತ್ತಿತ್ತು. ಸ್ವಾಮಿಗಳು ಬಂದಾಗ ಮಾತ್ರ ಜನ ಬರುತ್ತಾರೆಂದರೆ ಬಾವಿ ತೆಗೆದು ಅದಕ್ಕೆ ಹೊರಗಿನಿಂದ ನೀರು ತುಂಬಿಸಿದಂತೆ. ಅದಕ್ಕೆ ಬದಲು ಬಾವಿಯಲ್ಲೇ ಜಪವುಕ್ಕುವಂತೆ, ಈ ಜನರಲ್ಲಿ ಕಲಾಪ್ರದರ್ಶನ ನೋಡುವ ಜಲಕಣ್ಣು ಗೋಚರಿಸುವುದು ಯಾವಾಗ ಎಂದು ಬೇಸರದಿಂದ ಹೊರಟಾಗ ಒಂದು ಸಂತೋಷದ ಸುದ್ದಿ ಕಿವಿಗೆ ಬಿತ್ತು.


ಈಚೆಗೆ ಅದಾವುದೋ ಮೂಲೆ ಮನೆಯಲ್ಲಿ ಮಿಲಿಟರಿ ಹೋಟೆಲ್ ಪ್ರಾರಂಭವಾಗಿದೆಯಂತೆ. ಅಲ್ಲಿಗೆ ಬಂದು ಬಿರಿಯಾನಿ ತಿನ್ನಲಾರದ ಮಡಿವಂತ ಶರಣರು ಮನೆಗೇ ಪಾರ್ಸೆಲ್ ತರಿಸಿಕೊಳ್ಳುತ್ತಾರಂತೆ. ಹೊಸದಾಗಿ ತಿನ್ನುವುದನ್ನು ಕಲಿತವರಿಗೆ ಮಾಂಸದ ಪ್ರಭೇದಗಳು ಅರಿವಾಗುವುದಿಲ್ಲ. ಆದ್ದರಿಂದ ಸರ್ವಜ್ಞನ ವಚನದಂತೆ 'ಬಾಡ ತಿಂಬಾ ತಂಗೆ ಆಡೇನು, ಆವೇನು ಕಾಡಬಡನರಿಯೇನು, ಮನೆಯ ನಾಯೇನು ಸರ್ವಜ್ಞ' ಎಂಬಂತಾಗುತ್ತದೆ. ನಾಟಕದ ಅಭಿರುಚಿ ಅಂತಿರಲಿ ಈ ಜಿಹ್ವಾ ಚಾಪಲ್ಯದ ಕಾರಣಕ್ಕಾದರೂ ಶರಣಸಮೂಹ ಸಮಾನತೆಯತ್ತ ಬರುತ್ತಿರುವುದು ಶುಭ ಸೂಚನೆ!

• ಬಿ. ಚಂದ್ರೇಗೌಡ

ಮಂಡ್ಯದ | ಮಂದಮತಿ | ಸಾಯಿತಿಗಳು!

ಇತ್ತೀಚೆಗೆ ಸಾಹಿತ್ಯ ಸಮ್ಮೇಳನಗಳು ಹೋಬಳಿ, ...ತಾಲ್ಲೂಕು ಮಟ್ಟದಲ್ಲೂ ಜರುಗುತ್ತಿವೆ. ಅವುಗಳನ್ನು ಸೂಕ್ಷ್ಮ...ವಾಗಿ ನೋಡಿದರೆ ಬಿಜೆಪಿ ಸರ್ಕಾರದ ಅಂಗಚೇಷ್ಟೆಯಂತೆ ...ಕಾಣುತ್ತವೆ. ಆ ಮೆರವಣಿಗೆ, ಸಭಾ ಕಾರ್ಯಕ್ರಮ, ...ಗೋಷ್ಠಿಗಳು, ಊಟಕ್ಕಾಗಿ ನಡೆಯುವ ಹೊಡೆದಾಟ, ...ನಂತರ ಸಮ್ಮೇಳನ ಮಾಡಿದವರ ಪಾನಗೋಷ್ಠಿ ಇವೆಲ್ಲವೂ ...ಸಿಂಬಾ ಮನರಂಜನೆಯಿಂದ ಕೂಡಿರುತ್ತವೆ. ಇಂಥ ...ಸಮ್ಮೇಳನಗಳಲ್ಲಿ ನಿರೂಪಕನಾಗಿ ಸಿಗುವ ಅವಕಾಶಕ್ಕೆ ಮತ್ತು ...ವಂದನಾರ್ಪಣೆಗೆ ಆಯ್ಕೆಯಾದುದಕ್ಕೆ ಸಾಹಿತ್ಯೋತ್ಸಾ...ಹಿಗಳು ಪಡುವ ಸಂಭ್ರಮ ನೋಡಿದರೆ ಅಚ್ಚರಿ...ಯಾಗುತ್ತದೆ.

ಇಂಥದೊಂದು ಹಬ್ಬ ಏ. 29ರಂದು ಮಂಡ್ಯದ ...ಲ್ಲಿರುವ ಕೃಷ್ಣರಾಜ ಒಡೆಯರ ಕಲಾಮಂದಿರದಲ್ಲಿ ನಡೆಯ...ತು. 10ನೇ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ...ಆಯ್ಕೆಯಾಗಿರುವ ಹುಲಿವಾನ ನರಸಿಂಹಸ್ವಾಮಿ ಹತ್ತ...ನೈದು ಸಣ್ಣಕತೆಗಳು, ಐದಾರು ಕಾದಂಬರಿ ಬರೆದು ...ಟ್ಟಿದ್ದಾರೆ. ಎಚ್.ಎಸ್. ನರಸಿಂಹಚಾರ್ ಮತ್ತು ಶಾರದಮ್ಮ ...ದಂಪತಿಗಳ ಸುಪುತ್ರರಾಗಿ ಜನಿಸಿರುವ ನರಸಿಂಹಸ್ವಾಮಿ, ...ಎಂ.ಎ. ಪದವಿ ಪಡೆದು, ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ...ಆದರೂ ಸದರಿ ವಿದ್ವಾಂಸರಿಗೆ ವಾಕ್ಯ ರಚನೆ, ಕಾಗುಣಿತದ ...ಸಮಸ್ಯೆಯಿದೆ. ಇವರ ಪುಸ್ತಕಗಳನ್ನು ಓದುತ್ತಿದ್ದರೆ ಬುದ್ಧಿ...ರಿ ಇಲ್ಲದವನೊಬ್ಬ ಮನಸ್ಸಿಗೆ ಅನ್ನಿಸಿದ್ದನ್ನೆಲ್ಲಾ ಬರೆದಂತೆ ...ಕಾಣುತ್ತದೆ. ದುರಂತವೆಂದರೆ ಯಾವನೋ ಅಡ್ಡಕಸುಬಿಯೊಬ್ಬ ...ಅವನ್ನೆಲ್ಲಾ ಪ್ರಿಂಟ್ ಹಾಕಿ ಅಮೂಲ್ಯ ಕಾಗದವನ್ನೆ ಹಾಳು ...ಮಾಡಿಬಿಟ್ಟಿದ್ದಾನೆ. ಅವನಿಗೆ ಫೋನ್ ಮಾಡಿ "ಕಾದಂಬರಿ ...ಸಂಪೂರ್ಣ ಕತೆಯನ್ನೊ ಬರೆದುಕೊಟ್ಟಂತೆ ಪ್ರಿಂಟ್ ಹಾಕುತ್ತೀಯಲ್ಲ, ವಾಕ್ಯ ಮತ್ತು ಕಾಗುಣಿತ ತಿದ್ದಬೇಕೆಂಬ ಜವಾಬ್ದಾರಿ ಬೇಡವೆ?" ಎಂದು ಕೇಳಿದರೆ "ಬರೆದವನಿಗೇ ಫೋನ್ ಮಾಡಿ" ಎಂದ! ಬರೆದವನು ಈಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ. ಆತನನ್ನು ಮಾತನಾಡಿಸಲಾಗುತ್ತಿಲ್ಲ, ಜೊತೆಗೆ "ವಿಮರ್ಶಕರ ಅಭಿಪ್ರಾಯಗಳು ಏನೇ ಇರಲಿ, ಅದನ್ನ ಕಟ್ಟಿಕೊಂಡು ನನಗೇನಾಗಬೇಕು" ಎನ್ನುವ ಧೋರಣೆ ಅವನದ್ದು.



ಈತನನ್ನು ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡುತ್ತ ಕೃಷ್ಣರಾಜ ಒಡೆಯರ ಕಲಾಮಂದಿರಕ್ಕೆ ಕರೆತರುವ ಜನ ಎಂಥವರಿರಬೇಕು ಮತ್ತು ಅವರು ಓದಿಕೊಳ್ಳುತ್ತಿರುವ ಸಾಹಿತ್ಯ ಎಂಥದ್ದಿರಬೇಕೆಂದು ಯೋಚಿಸಿದರೆ, ದಿಗಿಲಾಗುತ್ತದೆ. ಸೂಕ್ಷ್ಮವಾಗಿ ನೋಡಿದರೆ ನಮ್ಮ ಸಾಹಿತ್ಯ ಲೋಕದ ಪರಂಪರೆಯೇ ಒಂದೆಡೆಗಿದ್ದರೆ, ಈ ನರಸಿಂಹಸ್ವಾಮಿಯಂಥವರನ್ನು ಹೊತ್ತುಕೊಂಡು ಮೆರವಣಿಗೆ ಹೊರಟವರು ಇನ್ನೊಂದೆಡೆ ಇದ್ದಾರೆ. ಇವರುಗಳ ಬೇರನ್ನು ಹುಡುಕಿದರೆ ಶಿವರಾಮೇಗೌಡ, ರೇಣುಕಾಚಾರಿ, ಎಡೂರಪ್ಪ ಈಶ್ವರಪ್ಪ, ಸುತ್ತೂರು ಸ್ವಾಮಿ, ಕೊಳದಮಠದ ಸ್ವಾಮಿ.... ಈ ಥರದ ಒಂದು ಹೊಸ ವರಸೆಯೇ ಕಾಣುತ್ತದೆ. ಅಷ್ಟಕ್ಕೂ ಈ ಪಾಪದ ನರಸಿಂಹಸ್ವಾಮಿಯನ್ನು ಅಧ್ಯಕ್ಷನನ್ನಾಗಿ ಆರಿಸಿದ ಸ್ವಾಗತಸಮಿತಿಯ ಎಂ.ಜಿ. ಚಿಕ್ಕಣ್ಣ, ಸಾಹಿತ್ಯ ಪರಿಷತ್ ಅಧ್ಯಕ್ಷ ಕೃಷ್ಣಸ್ವಾಮಿಸಂದ್ರ ಇವರನ್ನೆಲ್ಲಾ ಕಣ್ಣಾರೆ ಕಂಡು ನಗಬೇಕೆನಿಸಿದೆ. ಈ ಮೇಲಿನ ಟಿಪ್ಪಣಿಗೆ ಸಾಕ್ಷಿಯಾಗಿ ಹುಲಿವಾನ ನರಸಿಂಹಸ್ವಾಮಿ ಬರೆದಿರುವ ಕಾದಂಬರಿಯೊಂದರ ಮೊದಲ ಪುಟ ಕೊಡುತ್ತೇವೆ. ಓದಿ ನೀವೇ ಒಂದು ತೀರ್ಮಾನಕ್ಕೆ ಬರಬಹುದು.


ನಿಸ್ತಂತು ಕಾದಂಬರಿಯ ಮೊದಲ ಪುಟ

ಒಂದು ಸಣ್ಣಹಳ್ಳಿ ಕೊಪ್ಪಲು ಅಂದರೂ ಹೌದು ಅಥವಾ ದೊಡ್ಡಿ ಎಂದರೂ ತಪ್ಪೇನಿಲ್ಲ ಬಿಡಿ ಅದಕ್ಕೊಂದು ಹೆಸರುಂಟು ಅಲ್ಲವಾ... ಇದ್ದರೂ ಇರಬಹುದು ನಮಗೆ ಮುಖ್ಯವಾಗಿರುವುದು ಈ ಹಳ್ಳಿಯ ಹೆಸರಲ್ಲಿ ಅದಕ್ಯಾಕೆ ಕೊಸರಿನಿಂದ ಕೊಂಕಾಡಿಸಬೇಕು ನಮಗೆ ಬಹುಮುಖ್ಯವಾಗಿರುವ ಆ ಊರಿನಲ್ಲಿ ವಯಸ್ಸಾದ ಮುದುಕ. ಅವನ ದೇಹ ಮುಪ್ಪಾಗಿರಬಹುದು ಆದರೆ ಅವನ ಮನಸ್ಸಿಗಲ್ಲ. ಮಾನಸಿಕವಾಗಿ ಆತನೊಬ್ಬ ವಿಶ್ರಾಂತಿ ಯುವಕ ತನ್ನ ಇಳಿವಯಸ್ಸಿನ ಜೊತೆಗೆ ಆರಂಭವನ್ನು ಮಾಡಿಕೊಂಡು ಬದುಕನ್ನು ಮಾಡಿಕೊಂಡು ಬಂದವನು. ಅಲ್ಲ ಭೀಮಾಪುರದಲ್ಲಿ ಮೂರು ತೆಂಗಿನ ಬದ್ದಾಪು ಅಷ್ಟೇನೂ ಸುದ್ದಿಯಾಗಲಿಲ್ಲ ಪಾರಿಗೆಯವರೆಲ್ಲರೂ ನೊಂದುಕೊಂಡರು.

ಅವನ ತೀಟೆ ತಕರಾರು ಗೊತ್ತಿದ್ದವರಂತೂ ಕುಟಕಿ ಯಾಡಿದರ ಹೊರತು ತಿಂಚಿತ್ತು ಎದೆಯಲ್ಲಿ ನೋವನ್ನು ಇಟ್ಟುಕೊಂಡವರಲ್ಲ. ಆದರೆ ಈ ಕೊಪ್ಪಲಿನ ಭೀಮಯ್ಯನಿಗೆ ಎಪ್ಪತ್ತಾಲ್ಕು ವಯಸ್ಸಾಗಿತ್ತು. ಕಾಯಿಲೆ ಕಸಾಲೆ ಏನೂ ಇರಲಿಲ್ಲ. ಆದರೆ ಒಂದು ಮಾತಂತೂ ದಿಟವಾಗಿತ್ತು, ನೂರು ರೈತರು ಸತ್ತರೂ ಸದ್ದಾಗದ ಈ ಭೀಮಯ್ಯ ಸಾಧನೆ ಊರೆಲ್ಲಾ ಏನೂ ಇಡೀ ಭೂಮಂಡಲವ ಇವನ ಸಾಧನೆ ಎದೆಯಲ್ಲಿ ಇಟ್ಟುಕೊಂಡಿತು. ಅಲ್ಲಾ ಅಂತಿನಿ ಅಂತಮಿ ಏನು ಕೇಮಿ ಮಾಡಿದ ಅಂತ ಕಾಣು. ಅವನು ಅಂತಿಂತ ರೈತ ಅಲ್ಲ ಅಂತಿನಿ ಭೂಮಿ ತಾಯಿಯ ಸೇವೆ ಯಾದ ಆರಂಭವನ್ನು ಮಾಡಿದ ಕಾಂತಿಪುರುಸ ಅಂತಿಮಿ ಅಂತ ವನನ್ನು ಮಹಾಪುರುಸ ಅಂದನೆ ಇನ್ನೇನೂ ಅಂತಿಯಾ.....


ಮೇಲಿನಂತೆ ಇಡೀ ಕಾದಂಬರಿ ಬರೆದಿರುವ ನರಸಿಂಹಸ್ವಾಮಿ ಮಕ್ಕಳಿಗೆ ಪಾಠ ಹೇಳುವ ಮೇಷ್ಟ್ರು. ಜೊತೆಗೆ ಸಾಹಿತಿ. ಬಹುಶಃ ಡಿಟಿಪಿ ಕಲಿಯುತ್ತಿರುವ ಹುಡುಗರಿಗೆ ಕೊಟ್ಟು ಅದನ್ನು ಪ್ರೂಫ್ ನೋಡದೆ ಪ್ರಿಂಟಾಕಿರಬಹುದು. ಅದೇನೇ ಆದರೂ ಈ ಮೇಧಾವಿಯನ್ನು ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷನನ್ನಾಗಿ ಮಾಡಿ, ಮೆರವಣಿಗೆ ತಂದು ಕೂರಿಸಿ, ನಮಸ್ಕಾರ ಹಾಕಿದರಲ್ಲಾ ಇವರೆಲ್ಲಾ ಶುದ್ಧ ಮತಿಗೇಡಿಗಳು. ಇದನ್ನೆಲ್ಲ ಯೋಚಿಸುವಾಗ ಮಂಡ್ಯದ ಜನರಿಗೆ ಏನಾಗಿದೆ ಅನ್ನಿಸುತ್ತೆ. ಈ ನರಸಿಂಹಸ್ವಾಮಿ ಕಾದಂಬರಿಯಲ್ಲಿ ಹೆಣ್ಣುಗಂಡು ಕೂಡುವುದಕ್ಕೆ, ಆತನ ಬಳಿ ಬೇರೆ ಪದವಿಲ್ಲದ್ದರಿಂದ 'ಜಂಗೀಕುಸ್ತಿ' ಎಂದು ನಮೂದಿಸುತ್ತಾರೆ. ಬಹುಶಃ ಮಂಡ್ಯದಲ್ಲಿ ಈತನನ್ನು ಮೆರೆಸುತ್ತಿರುವವರಿಗೆ ಇಂತಹ ಪದಗಳು ಇಷ್ಟವಾಗಿರಬಹುದು!

• ವರದಿಗಾರ



ಮುಖ್ಯಮಂತ್ರಿ V/s ಗೃಹಮಂತ್ರಿ

ಅಶೋಕ್ ಎಂಬ ಸೆರಗಿನ ಕೆಂಡ




ಅಶೋಕ್

• ಮುಖ್ಯಮಂತ್ರಿಗೀಗ ಗೃಹಮಂತ್ರಿಯೇ ಸೆರಗಿನ ಕೆಂಡ. ಅಶೋಕ್ ಮುಖ ನೋಡಿದ್ದೇ ತಡ ಯಡ್ಡಿ ಹಾವು ಕಂಡಂತೆ ಬುಸುಗುಡುತ್ತಾರೆ. ಅಶೋಕ್ ವಿರುದ್ಧ ಬಹಿರಂಗವಾಗಿ ತೊಡೆ ತಟ್ಟಲೆಂದೇ ಯಲಹಂಕ ಶಾಸಕ ವಿಶ್ವನಾಥ್‌ನನ್ನು ಸಿಎಂ ಯಡ್ಡಿ ಛೂಬಿಟ್ಟಿದ್ದಾರೆ. ಅಶೋಕ್‌ರ ಬೆಂಗಳೂರು ಸಾಮ್ರಾಜ್ಯವನ್ನು ನೆಲಸಮಗೊಳಿಸುತ್ತೇನೆಂದ ರಾಜರಾಜೇಶ್ವರಿ ನಗರದ ವಯೋವೃದ್ಧ ಬಿಜೆಪಿ ಶಾಸಕ ಎಂ. ಶ್ರೀನಿವಾಸ್‌ಗೆ ಮಂತ್ರಿಗಿರಿಯನ್ನು ಮುಖ್ಯಮಂತ್ರಿ ಪ್ರಾಮಿಸ್ ಮಾಡಿದ್ದಾರೆ.

ಕೊಲೆ ಆರೋಪಿಯೊಬ್ಬನ ಜೊತೆ ಗೃಹಮಂತ್ರಿಯೇ ಕೂತು ದುಬೈನಲ್ಲಿ ಪಾರ್ಟಿ ನಡೆಸುವುದು, ಇತ್ತ ಕೆಂಪೇಗೌಡ ದಿನಾಚರಣೆಗೆ ಚಕ್ಕರ್ ಹಾಕಿದ ಗೃಹಮಂತ್ರಿಯನ್ನು ಮುಖ್ಯಮಂತ್ರಿ ಫೋನೆತ್ತಿಕೊಂಡು ವಾಚಾಮಗೋಚರ ಬಯ್ಯುವುದು, ಬಹಿರಂಗ ಸಭೆಯಲ್ಲಿ ಮುಖ್ಯಮಂತ್ರಿ ಸಾರಿಗೆ ಮಂತ್ರಿಯನ್ನು ಗೇಲಿ ಮಾಡುವುದು, ತನ್ನ ಮನೆಯಲ್ಲೇ ಮು.ಮಂ. ಕರೆದ ಸಭೆಗೆ ಗೃಹಮಂತ್ರಿ ಗೈರುಹಾಜರಾಗಿದ್ದು ಮತ್ತು ಬೆಂಗಳೂರಿನ ಮೂವರು ಶಾಸಕರ ಹೊರತಾಗಿ ಬೇರೆ ಎಲ್ಲರೂ ಮುಖ್ಯಮಂತ್ರಿ ಕರೆದ ಸಭೆಯನ್ನು ಧಿಕ್ಕರಿಸಿದ್ದು......

ಇದು ಮುಖ್ಯಮಂತ್ರಿ ಯಡ್ಡಿ ಮತ್ತು ಗೃಹಮಂತ್ರಿ ಅಶೋಕ್ ನಡುವಿನ ತೆರೆಮರೆ ಕಾಳಗದ ಕೆಲ ಸ್ಯಾಂಪಲ್ಲುಗಳಷ್ಟೆ!



ಸೋಮಣ್ಣ


ಮುಖ್ಯಮಂತ್ರಿಗೀಗ ಗೃಹಮಂತ್ರಿಯೇ ಸೆರಗಿನ ಕೆಂಡ. ಅಶೋಕ್ ಮುಖ ನೋಡಿದ್ದೇ ತಡ ಯಡ್ಡಿ ಹಾವು ಕಂಡಂತೆ ಬುಸುಗುಡುತ್ತಾರೆ. ಅಶೋಕ್ ವಿರುದ್ಧ ಬಹಿರಂಗವಾಗಿ ತೊಡೆ ತಟ್ಟಲೆಂದೇ ಯಲಹಂಕ ಶಾಸಕ ವಿಶ್ವನಾಥ್‌ನನ್ನು ಸಿಎಂ ಯಡ್ಡಿ ಛೂಬಿಟ್ಟಿದ್ದಾರೆ. ಅಶೋಕ್‌ರ ಬೆಂಗಳೂರು ಸಾಮ್ರಾಜ್ಯವನ್ನು ನೆಲಸಮಗೊಳಿಸುತ್ತೇನೆಂದ ರಾಜರಾಜೇಶ್ವರಿ ನಗರದ ವಯೋವೃದ್ಧ ಬಿಜೆಪಿ ಶಾಸಕ ಎಂ. ಶ್ರೀನಿವಾಸ್‌ಗೆ ಮಂತ್ರಿಗಿರಿಯನ್ನು ಮುಖ್ಯಮಂತ್ರಿ ಪ್ರಾಮಿಸ್ ಮಾಡಿದ್ದಾರೆ. ಜೊತೆಗೆ ಯಲಹಂಕ ಶಾಸಕ ವಿಶ್ವನಾಥ್‌ನನ್ನೂ ಮಂತ್ರಿ ಮಾಡಿ ಅಶೋಕ್‌ರನ್ನು ಮಟ್ಟಹಾಕುತ್ತೇನೆಂದು ಹೊರಟ ಮುಖ್ಯಮಂತ್ರಿಯ ಫಜೀತಿಗೆ ಮತ್ತೊಬ್ಬ ಮಂತ್ರಿ ಸೋಮಣ್ಣ ಮೃದಡವಿ ಸಂತೈಸಿದರೂ ಹೋಮ್‌ಮಿನಿಸ್ಟರ್ ಮತ್ತು ಸಿಎಂ ನಡುವಿನ ಕೋಲ್ಡ್‌ವಾರ್ ತಹಬಂದಿಗೆ ಬರುತ್ತಿಲ್ಲ.

ಗಣಿ ರೆಡ್ಡಿಗಳು ಬಂಡೆದ್ದು ಸಿಎಂ ವಿರುದ್ಧ ಕಿತಾಪತಿ ಗಳಿದಾಗ ಅದರ ವಿರುದ್ಧ ಮುಖ್ಯಮಂತ್ರಿ ಗುರಾಣಿಯಂತೆ ಬಳಸಿದ್ದು ಅಶೋಕ್‌ರನ್ನು. ಕಳೆದ ಸಂಪುಟ ವಿಸ್ತರಣೆಯಲ್ಲಿ ಮಿಕ್ಕೆಲ್ಲ ಮಂತ್ರಿಗಳಿಗಿಂತಲೂ ಹೆಚ್ಚು ಪ್ರಾಬಲ್ಯ-ಪ್ರಾಶಸ್ತ್ಯ ಗಳಿಸಿದ್ದು ಅಶೋಕ್.

ಸಾರಿಗೆ ಖಾತೆಯ ಜೊತೆ ಆಚಾರ್ಯರಿಗೆ ಕೊಕ್ ಕೊಟ್ಟು ಗೃಹಖಾತೆಯನ್ನೂ ಕಿತ್ತು ಕೊಟ್ಟರು. ಮುಖ್ಯಮಂತ್ರಿ ಬಿಟ್ಟರೆ ಅಶೋಕ್ ಅತ್ಯಂತ ಪ್ರಭಾವಿ ಮತ್ತು ಬಲಶಾಲಿ ಮಂತ್ರಿ ಎನಿಸಿಕೊಂಡರು. ಇದರಿಂದ ಗಣಿ ರೆಡ್ಡಿಗಳ ವಿರುದ್ಧ ತನ್ನ ಹೋರಾಟಕ್ಕೆ ಅಶೋಕ್ ಕೈಜೋಡಿಸುತ್ತಾರೆಂದೇ ಮುಖ್ಯಮಂತ್ರಿ ಭಾವಿಸಿದ್ದರು. ಇಷ್ಟೆಲ್ಲಾ ಅಧಿಕಾರ ಕೊಟ್ಟು ಉಪಕರಿಸಿದ ತನ್ನನ್ನು ಅಶೋಕ್ ಖಂಡಿತಾ ಬೆಂಬಲಿಸುತ್ತಾರೆಂದೇ ಯಡ್ಡಿ ನಂಬಿದ್ದರು. ಅಶೋಕ್‌ರಂಥ ಲೋಕಲ್ ಒಕ್ಕಲಿಗರ ದೊಡ್ಡ ನಾಯಕನೋರ್ವ ತನ್ನ ಬೆನ್ನಿಗಿದ್ದಾನೆಂದರೆ ಗಣಿರೆಡ್ಡಿಗಳಷ್ಟೇ ಅಲ್ಲ, ಅನಂತಕುಮಾರ್, ಶೆಟ್ಟರ್, ಈಶ್ವರಪ್ಪ ಕೂಡ ಬಾಲ ಮುದುರಿಕೊಳ್ಳುತ್ತಾರೆಂದೇ ಯಡ್ಡಿ ಹಾಕಿದ ಲೆಕ್ಕ ಉಲ್ಟಾ ಹೊಡೆದದ್ದು ಮೊನ್ನೆ-

ಅತ್ತ ದೆಹಲಿಯಲ್ಲಿ ಈಶ್ವರಪ್ಪ ತನ್ನ ವಿರುದ್ಧ ಶಾಸಕರ ಬಹಿರಂಗ ಪೆರೇಡು ನಡೆಸುತ್ತೇನೆಂದು ಹಾಕಿದ ಗುಟುರಿಗೆ ಇದಿರಾಗಿ ಮುಖ್ಯಮಂತ್ರಿ ತನ್ನ ಮನೆಯಲ್ಲಿ ಕರೆದ ಶಾಸಕರ ಸಭೆಗೆ ಗೃಹಮಂತ್ರಿಯೇ ಚಕ್ಕರ್ ಹಾಕಿದ್ದ!

ಬಹುಶಃ ಒಬ್ಬ ಅಶೋಕ್ ಬರದೇ ಹೋಗಿದ್ದರೆ ಮುಖ್ಯಮಂತ್ರಿಗೆ ಅಷ್ಟಾಟಿ ನೋವಾಗುತ್ತಿರಲಿಲ್ಲ. ಅಶೋಕ್ ಜೊತೆ ಜಯನಗರದ ಶಾಸಕ ವಿಜಯ್ ಕುಮಾರ್, ಮಲ್ಲೇಶ್ವರಂ ಶಾಸಕ ಅಶ್ವತ್ಥನಾರಾಯಣ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ದಾಸರಹಳ್ಳಿ ಎಮ್ಮೆಲ್ಲೆ ಮುನಿರಾಜು, ಬೆಂಗಳೂರು ದಕ್ಷಿಣದ ಕೃಷ್ಣಪ್ಪ, ಮಹದೇವಪುರದ ಲಿಂಬಾವಳಿ, ಸರ್ ಸಿ.ವಿ. ರಾಮನ್‌ನಗರದ ರಘು, ಚಿಕ್ಕಪೇಟೆಯ ಹೇಮಚಂದ್ರ ಸಾಗರ್, ಬಸವನಗುಡಿಯ ರವಿ ಸುಬ್ರಹ್ಮಣ್ಯ, ಎಮ್ಮೆಲ್ಸಿ ಅಶ್ವತ್ಥನಾರಾಯಣ, ವಿಧಾನ ಪರಿಷತ್ ಸಭಾಪತಿ ವಿಮಲಾಗೌಡ, ಆನೇಕಲ್ ನಾರಾಯಣಸ್ವಾಮಿ, ರಾಮದಾಸ್; ಹೀಗೆ ಒಂದು ಡಜನ್ ಬಿಜೆಪಿ ಶಾಸಕರು ಮುಖ್ಯಮಂತ್ರಿ ಕರೆದ ಬಲಾಬಲದ ಸಭೆಗೆ ಬರಲೇ ಇಲ್ಲ.



ಎಂ. ಶ್ರೀನಿವಾಸ್



ಯಲಹಂಕದ ವಿಶ್ವನಾಥ್

ಯಲಹಂಕದ ವಿಶ್ವನಾಥ್, ಕೆ.ಆರ್. ಪುರಂನ ನಂದೀಶ್ ರೆಡ್ಡಿ ಮತ್ತು ಅಶೋಕ್‌ನ ಕಡುವೈರಿ ಎಂ. ಶ್ರೀನಿವಾಸ್ ಬಿಟ್ಟರೆ ಬೆಂಗಳೂರಿನ ಮತ್ತೊಬ್ಬನೇ ಒಬ್ಬ ಬಿಜೆಪಿ ಶಾಸಕ ಮುಖ್ಯಮಂತ್ರಿಯ ಬೆನ್ನಿಗೆ ನಿಲ್ಲಲಿಲ್ಲ. ಅದು ಅನಂತ್‌ಕುಮಾರ್ ತಾಕತ್ತು ಮತ್ತು ಮಸಲತ್ತು!

ಮುಖಭಂಗವಾಗಿ ಕುದ್ದುಹೋದ ಯಡ್ಡಿ ಆವತ್ತೇ ಅಶೋಕ್‌ಗೆ ಫೋನೆತ್ತಿ "ಅಲ್ಲಯ್ಯಾ.... ನೀನೊಬ್ಬ ದೊಡ್ಡ ಮನುಷ್ಯಾ ಅಂತ ಒಂದಲ್ಲ ಎರಡು ಪೋರ್ಟ್‌ಫೋಲಿಯೋ ಕೊಟ್ಟೆ. ನೀನು ಕೇಳಿದ್ದಕ್ಕೆಲ್ಲಾ 'ಎಸ್' ಅಂದೆ. ಇಷ್ಟೆಲ್ಲಾ ಮಾಡಿದ ಮೇಲೂ ನಿಯತ್ತು ಬೇಡ್ವಾ? ನೀವೆಲ್ಲಾ ನಾಗರ ಹಾವಿದ್ದಂಗೆ. ಜೊತೆಗಿದ್ದೇ ಚೂರಿ ಹಾಕ್ತೀರ....!" ಎಂದು ನಂಜು ಕಾರಿದರಂತೆ.

ಮುಖ್ಯಮಂತ್ರಿ ಮತ್ತು ಗೃಹಮಂತ್ರಿ ಸಂಬಂಧ ಬಹುಶಃ ಅವತ್ತಿಗೇ ಮುಗಿದು ಹೋಗಿದೆ. ಇದಾಗಿ ವಾರಕ್ಕೇ ಕೆಂಗಲ್ ಹನುಮಂತಯ್ಯ ರಸ್ತೆಯ ಸಾರಿಗೆ ಭವನದಲ್ಲಿ ನಿಷ್ಠಾತ ಬಸ್ ಚಾಲಕರಿಗೆ ಪದಕ ವಿತರಣೆ ಸಮಾರಂಭದಲ್ಲಿ ಮತ್ತೆ ಸಿಎಂ ಮತ್ತು ಹೋಮು ಮುಖಾಮುಖಿಯಾಗಿದ್ದಾರೆ. ಯಡ್ಡಿಗೆ ಅದೇನು ಸಿಟ್ಟಿತ್ತೋ ಕೆಎಸ್ಸಾರ್ಟಿಸಿಯ ನಿಷ್ಠಾವಂತ ಚಾಲಕರಿಗೆ ಪದಕ ವಿತರಣೆ ಮುಗಿಸಿದ್ದೇ ತಡ 'ನೋಡಿ ನಮ್ಮ ಸಾರಿಗೆ ಮಂತ್ರಿ ಅಶೋಕ್ ಇದ್ದಾರಲ್ಲ, ಇಷ್ಟೆಲ್ಲಾ ಸರ್ಕಸ್ ಮಾಡಿ ಸಾರಿಗೆ ಸಂಸ್ಥೆಯನ್ನು ಉದ್ಧಾರ ಮಾಡಿದ್ರೂ ಅಲ್ಲದೇ ಇನ್ನೂ ಏನೇನೋ ದುಸ್ಸಾಹಸಕ್ಕೆ ಕೈಹಾಕುತ್ತಿದ್ದಾರೆ. ಇಷ್ಟರಲ್ಲೇ ಅವರಿಗೂ ಒಂದು ಪ್ರಶಸ್ತಿ-ಸನ್ಮಾನ ಕೊಟ್ಟು ದೊಡ್ಡದೊಂದು ನಮಸ್ಕಾರ ಹಾಕೋ ಕಾರ್ಯಕ್ರಮವನ್ನೂ ಇಟ್ಟುಕೊಳ್ಳಬೇಕಾಗಿದೆ...." ಎಂದುಬಿಟ್ಟರು.

ಮುಖ್ಯಮಂತ್ರಿ ಈ ರೀತಿ ಪರೋಕ್ಷವಾಗಿ ಕುಟುಕಿದ್ದನ್ನು ಕಂಡೇ ಅಶೋಕ್ ಮುಖ ಕಪ್ಪಿಟ್ಟರು. ಕೈಕೈ ಹಿಸುಕುತ್ತಿದ್ದರು. ಆವತ್ತು ಸಮಾರಂಭಕ್ಕೆ ಬಂದಿದ್ದ ಪತ್ರಕರ್ತರಿಗೆಲ್ಲ ಇದು ಕ್ಷಚಿತ್ತಾದ ಅಚ್ಚರಿ. ಅಲ್ಲಿಗೆ ಸಿಎಂ ಮತ್ತು ಹೋಮ್‌ಮಿನಿಸ್ಟರ್ ಸಂಬಂಧ ಸಂಪೂರ್ಣವಾಗಿ ಹಳಸಿದ್ದು ಬಯಲಾಗಿ ಹೋಗಿತ್ತು. ಒಬ್ಬ ಮುಖ್ಯಮಂತ್ರಿ ಒಂದೇ ವೇದಿಕೆಯಲ್ಲಿದ್ದ ಗೃಹಮಂತ್ರಿಯನ್ನು ಕಿಚಾಯಿಸಿದ್ದು ಬಹುಶಃ ಇದೇ ಮೊದಲಿರಬೇಕು.

ಇದು ತಾರಕಕ್ಕೇರಿದ್ದು ಕೆಂಪೇಗೌಡ ಜಯಂತಿಯಲ್ಲಿ. ನಾಡಪ್ರಭು ಕೆಂಪೇಗೌಡರ ಐನೂರನೇ ಜಯಂತಿಯನ್ನು ಇನ್ನಿಲ್ಲದಂತೆ ಆಚರಿಸಲು ಬಿಬಿಎಂಪಿ ಮತ್ತು ಸರ್ಕಾರ ಜಂಟಿಯಾಗೇ ಹಮ್ಮಿಕೊಂಡಿದ್ದ ಯಾವೊಂದು ಕಾರ್ಯಕ್ರಮಕ್ಕೂ ಅಶೋಕ್ ತಲೆ ಹಾಕಲಿಲ್ಲ. ತನ್ನ ಒಕ್ಕಲಿಗ ಇಮೇಜಿಗಾದರೂ ಅಶೋಕ್ ಕೆಂಪೇಗೌಡ ದಿನಾಚರಣೆಯನ್ನು ಬಳಸಿಕೊಳ್ಳಬೇಕಿತ್ತು. ಆದರೆ ಪಾಲಿಕೆಯ ಗಾಜಿನ ಮನೆಯಲ್ಲಿ ನಡೆದ ಕೆಂಪೇಗೌಡ ಪುರಸ್ಕಾರ ಸಮಾರಂಭದಲ್ಲಿ ಅಶೋಕ್ ನಾಪತ್ತೆ. ಸಮಾರಂಭದ ಜಾಹೀರಾತು, ಆಹ್ವಾನ ಪತ್ರಿಕೆ, ವಿಷಯ ಸೂಚಿ; ಇತ್ಯಾದಿ ಯಾವುದರಲ್ಲೂ ಅಶೋಕ್ ಹೆಸರಿರಲಿಲ್ಲ. ಬಹುಶಃ ಕೆಂಪೇಗೌಡ ದಿನಾಚರಣೆಯಿಂದ ತನ್ನ ಹೊರಗಿಡುವ ಮುಖ್ಯಮಂತ್ರಿಗಳ ಹುನ್ನಾರ ಅಶೋಕ್‌ಗೆ ಮೊದಲೇ ಗೊತ್ತಿತ್ತೇನೋ. ಅದಕ್ಕೆಂದೇ ದುಬೈನಲ್ಲಿ ನಕಲಿ ಸಮಾರಂಭವೊಂದನ್ನು ವಿಷ... ...ದಿದ್ದರು.

ಅದು ಮಂಡ್ಯದ ಜಪ್ರುಲ್ಲಾಖಾನ್ ಎಂಬ ದುಬೈ ಗಿರಾಕಿಯೊಬ್ಬ ಹಮ್ಮಿಕೊಂಡಿದ್ದ ನೆಪ ಮಾತ್ರದ ಸನ್ಮಾನ ಸಮಾರಂಭ. ದುಬೈ ಕನ್ನಡ ಸಂಘಗಳ ಒಕ್ಕೂಟದ ಹೆಸರಲ್ಲಿ ಸಾರಿಗೆ ಸಂಸ್ಥೆಯನ್ನು ಉದ್ಧಾರ ಮಾಡಿದ ಅಶೋಕ್‌ಗೆ ದುಬೈನಲ್ಲೇ ಸನ್ಮಾನ ಮಾಡುವ ಕಾರ್ಯಕ್ರಮಕ್ಕೂ, ಇತ್ತ ಕೆಂಪೇಗೌಡ ದಿನಾಚರಣೆಯಿಂದ ಅಶೋಕ್‌ರನ್ನು ಹೊರಗಿಟ್ಟದ್ದಕ್ಕೂ ಇದ್ದ ಸಂಬಂಧ ಗುಟ್ಟಾಗುಳಿದಿರಲಿಲ್ಲ. ಮುಖಭಂಗದಿಂದ ಪಾರಾಗಲೆಂದೇ ದುಬೈ ಕಾರ್ಯಕ್ರಮದ ನೆಪವೊಡ್ಡಿದ ಅಶೋಕ್ ಎಂಥಾ ಫಜೀತಿ ಮಾಡಿಕೊಂಡರೆಂದರೆ; ತಾನೊಬ್ಬ

ರಬ್ಬರ್‌ಸ್ಟ್ಯಾಂಪ್ ಶಾರದಮ್ಮನೇ ಮೇಯರ್

ಶೆಟ್ಟಿಹಳ್ಳಿ ವಾರ್ಡಿನ ಬಿಜೆಪಿ ಕೌನ್ಸಿಲರ್ ಶಾರದಮ್ಮನಿಗೆ ಹೋಲಿಸಿದರೆ ಬಳೇಕಳ್ಳಿಯ ರೂಪಾರಮೇಶ್ ಮತ್ತು ನಾಯಂಡಹಳ್ಳಿಯ ರಾಜೇಶ್ವರಿ ಸಾವಿರ ಪಾಲು ಮೇಲು. ಜಾತಿಯಲ್ಲಿ ದಲಿತರಾದರೂ ವಿದ್ಯಾವಂತರು ಮತ್ತು ಹೋರಾಟದ ಹಿನ್ನೆಲೆಯಿಂದ ಬಂದವರು. ಇವರಿಬ್ಬರ ಪೈಕಿ ಯಾರೇ ಮೇಯರ್ ಆಗಿದ್ದರೂ ಆಸ್ಥಾನಕ್ಕೆ ಚೂರುಪಾರಾದರೂ ಮರ್ಯಾದೆ ಇರುತ್ತಿತ್ತು. ಆದರೆ ಅಶೋಕ್‌ಗೆ ಬೇಕಿರುವುದು ಶೆಟ್ಟಿಹಳ್ಳಿ ಶಾರದಮ್ಮನಂಥ ಹೆಬ್ಬೆಟ್ಟು ಗಿರಾಕಿ. ಅಶೋಕ್ ಶಿಷ್ಯ ಮತ್ತು ದಾಸರಹಳ್ಳಿ ಶಾಸಕ ಮುನಿರಾಜುಗೂ ಶಾರದಮ್ಮನಂಥ ರಬ್ಬರ್ ಸ್ಟಾಂಪೇ ಮೇಯರ್ ಆಗಬೇಕು.



ಏಕೆಂದರೆ ದಾಸರಹಳ್ಳಿಯಲ್ಲಿ ಈಗಾಗಲೇ ಬೋಗಸ್ ಬಿಲ್ ಮಾಡಿ 400 ಕೋಟಿಗೂ ಅಧಿಕ ಮೊತ್ತದ ಪಾಲಿಕೆ ದುಡ್ಡು ದೋಚಿರುವ ಎಮ್ಮೆಲ್ಲೆ ಮುನಿರಾಜು ಹಿಂದಿರುವುದು once again ಅಶೋಕ್. ನಾಲ್ಕೂವರೆ ಸಾವಿರ ಕೋಟಿಯ ವರ್ಕ್ ಕೋಡ್ ಕರ್ಮಕಾಂಡದಲ್ಲಿ ದೊಡ್ಡ ಪಾಲು ಅಶೋಕ್ ಕೈಸೇರಿದೆ. ವರ್ಕ್ ಕೋಡ್ ದರೋಡೆ ಮತ್ತು ದಾಸರಹಳ್ಳಿಯ ಬೋಗಸ್ ಬಿಲ್ ರಾಬರಿಯನ್ನು ಮುಚ್ಚಿಹಾಕಬೇಕೆಂದರೆ ಅಶೋಕ್‌ಗೆ ಶಾರದಮ್ಮನಂಥ ಬಾಯಿಲ್ಲದ ಮೇಯರ್‌ಬೇಕು. ಜೊತೆಗೆ 150 ಕೋಟಿಯ ಮೇಯರ್ ಫಂಡ್‌ಗೂ ಒಂದು ಗತಿ ಕಾಣಿಸಬಹುದು. ಶಾರದಮ್ಮನ ಗಂಡ ರಾಮಾಂಜಿನಪ್ಪ ಹೇಳಿಕೇಳಿ ಪಕ್ಕಾ ಕುಡುಕ ಮತ್ತು ಮಂತ್ರಿ ಅಶೋಕ್ ಪಾಲಿಗೆ ಪಕ್ಕಾ ಜೀತಗಾರ.

ಹಿಂದೆ ಭೂಮಾಲೀಕರು ಜೀತಗಾರರನ್ನು ಇಟ್ಟು ಫಸಲು ದೋಚುವುದಕ್ಕೂ, ಈಗ ಅಶೋಕ್ ಶಾರದಮ್ಮನನ್ನು ಮೇಯರ್ ...ಿ ಬೆಂಗಳೂರನ್ನು ಲೂಟಿಮಾಡುವುದಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ. ತಮ್ಮ ಕಡೆಯವಳೊಬ್ಬಳನ್ನು ಮೇಯರ್ ಮಾಡಲಾಗದ ಸೋಮಣ್ಣನ ಫಜೀತಿಗೆ ಯಡ್ಡಿ-ಕರಂದ್ಲಾಜೆ ಅದೇನೆಂದು ಸಾಂತ್ವನ ಹೇಳಿದರೋ...?

ಎಂ.ಶ್ರೀನಿವಾಸ್ ಮತ್ತು ಅಮೃತ ಘಳಿಗೆ

ಒಂದಾನೊಂದು ಕಾಲಕ್ಕೆ ಎಂ.ಶ್ರೀನಿವಾಸ್ ಮನೆಬಾಗಿಲು ಕಾಯುತ್ತಿದ್ದ ಅಶೋಕ್ ಈಗ ಬೆಂಗಳೂರಿಗೇ ಅಧಿಪತಿಯಾದರೆ ಶ್ರೀನಿವಾಸ್ ಪಾಡು ಏನಾಗಬೇಡ?

ಕಳೆದ ಚುನಾವಣೆಯಲ್ಲಿ ಶ್ರೀನಿವಾಸ್ ತಮ್ಮ ಕೃಷ್ಣಪ್ಪನನ್ನೇ ಎಮ್ಮೆಲ್ಲೆಯಾಗಿಸುವ ಮೂಲಕ ಅಶೋಕ್ ಎರಡನೇ ಪೆಟ್ಟುಕೊಟ್ಟರು. ತಮ್ಮ ಕೃಷ್ಣಪ್ಪನಿಗೆ ಬೆಂಗಳೂರು ದಕ್ಷಿಣದ ಬಿಜೆಪಿ ಟಿಕೆಟ್ ಸಿಕ್ಕಿ ಶ್ರೀನಿವಾಸ್‌ಗೆ ಚೊಂಬೇ ಗ್ಯಾರಂಟಿ ಎಂಬ ಸ್ಥಿತಿಯಲ್ಲಿ ರೊಚ್ಚಿಗೆದ್ದ ಶ್ರೀನಿವಾಸ್ ಅಶೋಕ್ ಮನೆಗೆ ಬೆಂಬಲಿಗರನ್ನು ನುಗ್ಗಿಸಿ ದಾಂಧಲೆ ಎಬ್ಬಿಸಿದರು. ನಾನಾ ಸರ್ಕಸ್ ಮಾಡಿ ರಾಜರಾಜೇಶ್ವರಿನಗರಕ್ಕೆ ಟಿಕೆಟ್ ಗಿಟ್ಟಿಸಿದರೂ ಗೆಲ್ಲಲು ಮತ್ತೆ ಅಶೋಕ್‌ರನ್ನೇ ಶ್ರೀನಿವಾಸ್ ಗೋಗರೆಯುವಂತಾಯ್ತು. ಪಾಲಿಕೆ ಚುನಾವಣೆಯಲ್ಲಿ ತನ್ನ ಮಗ ವೆಂಕಟೇಶ್ ಬಾಬುಗೆ ಟಿಕೆಟ್ ಕೊಡಿಸುವಷ್ಟರಲ್ಲೇ ಶ್ರೀನಿವಾಸ್ ಹೈರಾಣಾದರೇ ಹೊರತು ಉಳಿಕೆ ಎಲ್ಲಾ ವಾರ್ಡುಗಳೂ ಅಶೋಕ್ ಶಿಷ್ಯರ ಪಾಲಾಯಿತು.

ತನ್ನ ಮನೆಬಾಗಿಲು ಕಾಯುತ್ತಿದ್ದ ಅಶೋಕ್ ತನ್ನನ್ನು ಮೀರಿಸಿ ರಾಜ್ಯಮಟ್ಟದಲ್ಲಿ ಬೆಳೆದು ನಿಂತಿದ್ದು ಶ್ರೀನಿವಾಸ್ ಪಾಲಿಗೆ ಜೀರ್ಣವಾಗದ ನೈವೇದ್ಯ. ಮಗ ವೆಂಕಟೇಶ್‌ಬಾಬು ಬೇರೆ "ಅಲ್ಲಪ್ಪಾ... ನಿನ್ನ ಮನೆಬಾಗಿಲು ಕಾಯುತ್ತಿದ್ದೋನು ಇವತ್ತು ಮಂತ್ರಿ. ಇಷ್ಟು ವರ್ಷ ರಾಜಕೀಯ ಮಾಡಿದ್ದು ಇಂಥ ಫಜೀತಿ ತಂದುಕೊಳ್ಳೋದಕ್ಕಾ?" ಎಂದು ಎಲ್ಲೆಂದರಲ್ಲಿ ಚುಚ್ಚಿಕೆಣಕುತ್ತಾನಂತೆ. ಅದಕ್ಕೆ ಶ್ರೀನಿವಾಸ್ ಯಡ್ಡಿ ಕಾಲಿಗೆ ಬಿದ್ದು "ಇನ್ನೆಷ್ಟು ದಿವ್ಸ ಬದುಕಿರ್‍ತೀನೋ. ಕನಿಷ್ಠ ಒಂದು ದಿನದ ಮಟ್ಟಿಗಾದ್ರೂ ನನ್ನನ್ನ ಮಂತ್ರಿ ಮಾಡಿ ದೇವ್ರೂ...." ಎಂದು ಗೋಗರೆಯುತ್ತಿದ್ದಾರಂತೆ.

ಆ ಅಮೃತ ಘಳಿಗೆ ಅದ್ಯಾವತ್ತು ಕೂಡಿ ಬರುತ್ತೋ?

ಮಂತ್ರಿ ಮತ್ತು ತನ್ನನ್ನು ಮಟ್ಟೆನಲ್ಲಿ ಸನ್ಮಾನಿಸುವಾತ ರ್ ಕೊಲೆ ಆರೋಪಿ ಎಂಬುದನ್ನೇ ಮರೆತುಬಿಟ್ಟಿದ್ದರು. ಸದ್ಯ ದುಬೈ ವಾಸಿ ಜಫ್ರುಲ್ಲಾಖಾನ್ ಮೂಲತಃ ಂಡ್ಯದವನು. ವರ್ಷಕ್ಕೊಮ್ಮೆ ಮಂಡ್ಯಕ್ಕೆ ಬಂದು ಡಕಂಡವರಿಗೆಲ್ಲಾ ದುಡ್ಡು ಹಂಚುತ್ತಾನೆ. ಇವತ್ತಲ್ಲಾ ನಾಳೆ ಂಡ್ಯಕ್ಕೆ ಎಮ್ಮೆಲ್ಲೆಯಾಗಬೇಕೆಂದು ಬಾಡೂಟವನ್ನೇ ತನ್ನ ಯಕವನ್ನಾಗಿಸಿಕೊಂಡ ಜಫ್ರುಲ್ಲಾಖಾನ್ ಸದ್ಯ ಅಕ್ಕಿ ಗಡಿ ರಫೀಕ್ ಎಂಬ ಪುಡಿ ರೌಡಿಯ ಕೊಲೆ ಆರೋಪಿ. 10 ರಲ್ಲಿ ಮಂಡ್ಯದ ನಡುರಸ್ತೆಯಲ್ಲಿ ಕೊಲೆಯಾದ ೀಕನ ಹತ್ಯಾ ಪ್ರಕರಣದಲ್ಲಿ ಜಫ್ರುಲ್ಲಾಖಾನ್ ಮೊದಲ ರೋಪಿ.

ಇಂಥವನು ಕರೆದು ಸನ್ಮಾನಿಸುತ್ತಾನೆಂದ ಮಾತ್ರಕ್ಕೆ ಶೋಕ್ ತಾನೊಬ್ಬ ಗೃಹಮಂತ್ರಿ ಎಂಬುದನ್ನೇ ಮರೆತು ಬೈಗೆ ಹೋಗುತ್ತಾರೆ. ಅಲ್ಲಿ ಸಾರಿಗೆ ಸಂಸ್ಥೆಯನ್ನು ಉದ್ಧಾರ ಾಡಿದ್ದಕ್ಕಾಗಿ ಸನ್ಮಾನ ಸ್ವೀಕರಿಸುತ್ತಾರೆ. ಜಫ್ರುಲ್ಲಾಖಾನ್‌ನ ಕ್ಕದಲ್ಲೇ ವೇದಿಕೆಯಲ್ಲಿ ಕೂತು ಆತನಿಂದ ಸನ್ಮಾನಿಸಿಕೊಂಡ ಶೋಕ್ ತದನಂತರ ಆತನ ಐಷಾರಾಮಿ ಹೋಟೆಲ್‌ನಲ್ಲಿ ರ್ಟಿ ನಡೆಸುತ್ತಾರೆ.

ಮುಂದ್ಯಾವತ್ತಾದರೂ ಸಂಪುಟ ಪುನರ್ರಚನೆಯಾಗು ತ್ತೋ ಇಲ್ಲವೋ ಗೊತ್ತಿಲ್ಲ. ಬಹುಶಃ ಉಪಚುನಾವಣೆಯ ಲಿತಾಂಶ ಹೊರಬಿದ್ದನಂತರ ಆಗಲೂಬಹುದು. ಹಾಗೊಮ್ಮೆ ಪುಟ ಪುನರ್ರಚನೆಯಾಗಿದ್ದೇ ಆದರೆ ಅಶೋಕ್ ವಿರುದ್ಧ ಶ್ವನಾಥ್ ಅಥವಾ ಶ್ರೀನಿವಾಸ್‌ರನ್ನು ಯಡ್ಡಿ ಂತ್ರಿಯನ್ನಾಗಿಸುತ್ತಾರಂತೆ. ಅಶೋಕ್ ಕೈಯಿಂದ ಖಾತೆಯನ್ನು ಕಿತ್ತುಕೊಂಡು ನಾಮಕಾವಸ್ತೆಯ ಸಾರಿಗೆ ತೆಯನ್ನೇ ಮುಂದುವರಿಸುವ ಮತ್ತೊಂದು ಅಸ್ತ್ರವನ್ನೂ ಡ್ಡಿ ಪ್ರಯೋಗಿಸುತ್ತಾರಂತೆ. ಅಶೋಕ್ ವಿರುದ್ಧ ಈಗಾಗಲೇ ೀಮಣ್ಣನನ್ನು ಎತ್ತಿ ಕಟ್ಟಿರುವ ಮುಖ್ಯಮಂತ್ರಿಗೆ ಕ್ಕಲಿಗರಲ್ಲೇ ಮತ್ತೊಬ್ಬನನ್ನು ಮಂತ್ರಿಯಾಗಿಸುವ ಮೂಲಕ ಸಂತ್ ಬಣಕ್ಕೆ ಪರ್ಯಾಯ ಒಕ್ಕಲಿಗ ನಾಯಕನೊಬ್ಬನನ್ನು ಟ್ಟುಹಾಕುವ ತನಕ ಸಮಾಧಾನವಿಲ್ಲವಂತೆ.


ಇದರ ಮುನ್ಸೂಚನೆ ಸಿಕ್ಕಿಯೇ ಯಲಹಂಕ ಶಾಸಕ ಶ್ವನಾಥ್ ಸದ್ಯ ಅಶೋಕ್ ವಿರುದ್ಧ ತೊಡೆತಟ್ಟಿದ್ದಾನೆ. ನ್ನೆ ಯಲಹಂಕದ ರಸ್ತೆಯುದ್ದಕ್ಕೂ ವಿಶ್ವನಾಥ್ ನಡೆಸಿದ ಪೇಗೌಡ ಉತ್ಸವದ ಅದ್ದೂರಿ ಹೇಗಿತ್ತೆಂದರೆ; ಸರಿ ಮಾರು ಒಂದು ಮೈಲಿಯ ತನಕ ಗೌಡರನ್ನು ಕಲೆ ಕಿದ ವಿಶ್ವನಾಥ್ ತಾನೇ ರಸ್ತೆಗಿಳಿದು ಡ್ಯಾನ್ಸ್ ಮಾಡಿಬಿಟ್ಟ. ಲಿಕೆ ಹಮ್ಮಿಕೊಂಡಿದ್ದ ಕೆಂಪೇಗೌಡ ದಿನಾಚರಣೆಯನ್ನೂ ೀರಿಸಿ ರೋಡ್ ಷೋ ನಡೆಸಿದ ವಿಶ್ವನಾಥ್ ಸದ್ಯ ುಖ್ಯಮಂತ್ರಿಗಳ ಬಲಗೈ ಬಂಟ. ಅಶೋಕ್ ಹಣಿಯ ದೇ ಯಲಹಂಕಕ್ಕೆ ಯಡ್ಡಿ ಏಳೂನೂರು ಕೋಟಿ ಕೊಟ್ಟರು. ತ್ತೊಂದೆಡೆ ಎಂ. ಶ್ರೀನಿವಾಸ್ ಪ್ರತಿನಿಧಿಸುವ ಜರಾಜೇಶ್ವರಿ ಕ್ಷೇತ್ರಕ್ಕೊಂದು 650 ಕೋಟಿ ನೀಡಿದರು. ಮಂಗಲ ಶಾಸಕ ನಾಗರಾಜ್ ಬಂಡೆದ್ದು ತನ್ನ ಮ್ಮೆಲ್ಲೆಗಿರಿಗೇ ಸಂಚಕಾರ ತಂದುಕೊಂಡಾಗ ಇಡೀ ಮಂಗಲದ ಉಸ್ತುವಾರಿಯನ್ನು ಸಿಎಂ ವಹಿಸಿಕೊಟ್ಟಿದ್ದು ಶ್ವನಾಥ್‌ಗೆ. ಸದ್ಯ ಬಿಬಿಎಂಪಿಯ ಆಯಕಟ್ಟಿನ ಹುದ್ದೆಗಳ ುವ ಬಹುತೇಕ ಇಂಜಿನಿಯರ್‌ಗಳೆಲ್ಲ ವಿಶ್ವನಾಥ್ ನಿಷ್ಠರೇ. ಸಾಲದ್ದಕ್ಕೆ ದೇವೇಗೌಡರ ಪರಮಾಪ್ತರ ಭೂಹಗರಣಗಳ ುದ್ಧದ ಕಾರ್ಯಾಚರಣೆಗೆ ಯಲಹಂಕ ವಿಶ್ವನಾಥ್‌ರನ್ನೇ ಡ್ಡಿ ಛೂಬಿಟ್ಟಿದ್ದಾರೆ. ಇದರರ್ಥ ದೇವೇಗೌಡರ ುಟುಂಬದ ಜೊತೆ ಅಶೋಕ್ ಆತ್ಮೀಯರಾಗಿದ್ದಾರೆಂಬ ಮಾನಿ ಮುಖ್ಯಮಂತ್ರಿಗಿದೆ. ತನ್ನ ವಿರುದ್ಧ ದೇವೇಗೌಡರನ್ನು ತ್ತಿಕಟ್ಟಿರುವುದೇ ಅಶೋಕ್, ಅಶೋಕ್ ಮತ್ತು ಕುಮಾರ ಮಿ ಆತ್ಮೀಯರಾಗಿದ್ದರಿಂದಲೇ ಕಳೆದ ಚುನಾವಣೆಯಲ್ಲಿ ದ್ಮನಾಭನಗರಕ್ಕೆ ಜೆಡಿಎಸ್ ಡಮ್ಮಿ ಅಭ್ಯರ್ಥಿಯನ್ನು ಹಾಕಿ ೋಕ್ಷವಾಗಿ ಅಶೋಕ್ ಗೆಲುವಿಗೆ ನೆರವಾಯಿತೆಂಬುದು ಸಾಹೇಬರ ನಂಬಿಕೆ. ಈ ಕಾರಣಕ್ಕೇ ಅಶೋಕ್ ುದ್ಧ ಸೋಮಣ್ಣನನ್ನು ಛೂ ಬಿಟ್ಟರು. ಸೋಮಣ್ಣ ತನ್ನ ಬಿಕಸ್ತ ಮೂಟೆ ಮಂಜನನ್ನು ಮುಂದೆಬಿಟ್ಟು ಟ್ಟಿಗೊಲ್ಲಹಳ್ಳಿಯ ಡೀನೋಟಿಫಿಕೇಷನ್ ಹಗರಣದ ುದ್ಧ ಕೇಸು ಹಾಕಿಸಿದ.

ಈ ಮೂಲಕವಾದರೂ ಅಶೋಕ್‌ಗೆ ಅಂಕುಶ ಹಾಕುವ ಡ್ಡಿ ಹುನ್ನಾರ ಗುರಿತಪ್ಪಿ ಈಗ ಅಂತಃಕಲಹದ ರೂಪ ಡೆದಿದೆ. ಸೋಮಣ್ಣನ ಮೂಲಕ ತನ್ನನ್ನು ಕೋರ್ಟಿಗೆಳೆದ ುಖ್ಯಮಂತ್ರಿಯ ವಿರುದ್ಧ ಅಶೋಕ್ ತನ್ನ ಹಳೇ ಗುರು ನಂತ್‌ಕುಮಾರ್ ಜೊತೆ ಕೈಜೋಡಿಸಿದ್ದಾರೆ. ಕುಮಾರ ಮಿ ಮತ್ತು ಅನಂತ್‌ಕುಮಾರ್ ಜಂಟಿಯಾಗೇ ಅಶೋಕ್ ಡಾಯಕ್ಕೆ ತುಪ್ಪ ಸುರಿಯುತ್ತಿದ್ದಾರೆ. ಅಶೋಕ್ ವಿರುದ್ಧ ಬ್ಬಿಯ ಒಕ್ಕಲಿಗರ ನಾಯಕ ಯಾರು? ಯಲಹಂಕದ ಶ್ವನಾಥ್‌ಗೆ ಮಂತ್ರಿಗಿರಿ ಒಲಿಯುತ್ತಾ? ಅಥವಾ ಶ್ವನಾಥ್‌ನನ್ನು ಪಾರ್ಟಿ ಮಟ್ಟದಲ್ಲಿ ಬೆಳೆಸಿ ಮರಸು ಕ್ಕಲಿಗರ ಪೈಕಿ ಎಂ. ಶ್ರೀನಿವಾಸ್‌ರನ್ನು ಮಂತ್ರಿ ಮಾಡಿ ಡ್ಡಿ ಕೈಚಳಕ ತೋರುತ್ತಾರಾ?

ಸಿಎಂ ಮತ್ತು ಹೋಮ್ ಸಂಘರ್ಷಕ್ಕೆ ಯಾರ್ಯಾರು ಲಿಯಾಗುತ್ತಾರೋ, ಎಲ್ಲಿಗೆ ಬಂದು ನಿಲ್ಲುತ್ತೋ, ಯಾರ ಲೆಬಾಗುತ್ತೋ ಗೊತ್ತಿಲ್ಲ, ಸದ್ಯ ಮುಖ್ಯಮಂತ್ರಿ ಪಾಲಿಗೆ ಶೋಕ್ ನೆಗೆಡ ಕಂಟಕವಾಗಿ ಸುಡುತ್ತಿರುವುದಂತೂ ಸತ್ಯ

• ರಾ. ಸೋಮನಾಥ್

ಮಹಾಲಕ್ಷ್ಮಿ ಲೇಔಟ್ ಬಿಜೆಪಿ ರೌಡಿ ವೆಂಕಟೇಶನ ಅಟ್ಟಹಾಸ


ರೌಡಿ ವೆಂಕಟೇಶ

ಬಿಜೆಪಿಯ ರಾಮರಾಜ್ಯದ ಪರಿಕಲ್ಪನೆ ಹೇಗೆ ಒಂದೊಂದಾಗಿ ಸಾಕಾರಗೊಳ್ಳುತ್ತಿದೆ ಎಂಬುದಕ್ಕೆ ಇಲ್ಲೊಂದು ನಿದರ್ಶನವಿದೆ.

ಬಿಜೆಪಿಯ ಕೌನ್ಸಿಲರ್ ಓರ್ವ ಅಹವಾಲು ತಂದ ನಾಗರಿಕರನ್ನು ತನ್ನ ವಾರ್ಡ್ ಕಚೇರಿಯಲ್ಲೇ ಕೂಡಿ ಹಾಕಿ ಹಿಂಸಿಸಿದರೆ ಕನಿಷ್ಠ ಪೊಲೀಸರಾದರೂ ರಕ್ಷಿಸ ಬೇಕಲ್ಲವೆ?

ಆದರೆ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಮಟ್ಟಿಗೆ ಬಿಜೆಪಿ ಪದಾಧಿಕಾರಿಗಳೇ ರೌಡಿಗಳು, ಅದೇ ಪಕ್ಷದ ಕೌನ್ಸಿಲರನೇ ಜನಕಂಟಕ ಮತ್ತು ಕಷ್ಟ ಸಲ್ಲಿಸದ ಜನರೇ ಅಪರಾಧಿಗಳು. ಇದಕ್ಕೊಂದು ಉದಾಹರಣೆ ಯಂತಿದೆ ಇದೇ ಏಪ್ರಿಲ್ 27 ರಂದು ಪಾಲಿಕೆಯ ನಾಗಪುರ ವಾರ್ಡ್ ಕಚೇರಿಯಲ್ಲಿ ನಡೆದ ಈ ದೌರ್ಜನ್ಯ-

ಮಹಾಲಕ್ಷ್ಮಿ ಲೇಔಟಿನ ವಿಜಯಾನಂದ ನಗರದ ಶನಿ ಮಹಾತ್ಮ ದೇವಸ್ಥಾನದ ರಸ್ತೆಯಲ್ಲಿರುವ ಸೃಷ್ಟಿ ಚಾರಿಟಬಲ್ ಟ್ರಸ್ಟ್ ಎಂಬುದು ಬಂಜೆತನದ ವಿರುದ್ಧ ವೈಜ್ಞಾನಿಕ ಮತ್ತು ವೈದ್ಯಕೀಯ ಸೇವೆ ಕಲ್ಪಿಸುವ ಸಂಸ್ಥೆ. ಸಂತಾನಹೀನ ದಂಪತಿಗಳಿಗೆ ವರದಾನವೆಂಬಂತೆ ಅದು ಬಾಡಿಗೆ ತಾಯಂದಿರನ್ನು ಹುಡುಕಿ ಕೊಡುತ್ತದೆ. ಇಲ್ಲಿ ಗರ್ಭಧಾರಣೆ ಆಸ್ಪತ್ರೆಗಳಲ್ಲಿ ನುರಿತ ವೈದ್ಯರಿಂದ ನಡೆಯುತ್ತದೆ. ಇಂಥ ಬಾಡಿಗೆ ತಾಯಂದಿರಿಗೆ ವಸತಿ, ವೈದ್ಯಕೀಯ ನೆರವು, ಪೌಷ್ಟಿಕ ಆಹಾರ ಮತ್ತು ನೆಮ್ಮದಿಯ ವಾತಾವರಣ ಕಲ್ಪಿಸುವುದು ಸೃಷ್ಟಿ ಚಾರಿಟಬಲ್ ಟ್ರಸ್ಟ್.

ಇದ್ಯಾವುದೂ ಕಾನೂನು ವಿರೋಧಿಯಾಗಲಿ, ನಿಷಿದ್ಧ ಚಟುವಟಿಕೆಯಾಗಲಿ ಅಲ್ಲ. ಇದಕ್ಕೆಂದೇ ಪಾಲಿಕೆ ವತಿಯಿಂದ ಲೈಸೆನ್ಸ್ ಪಡೆಯಲಾಗಿದೆ. ಆರೋಗ್ಯ ಇಲಾಖೆ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ನಿಬಂಧನೆಗಳ ಪ್ರಕಾರ ಅನುಮತಿ ಪಡೆದೇ ಬೆಂಗಳೂರು ಮತ್ತು ದೇಶಾದ್ಯಂತ ಇಂಥ ಅನೇಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ.

ಅದೇನು ದೌರ್ಭಾಗ್ಯವೋ ಗೊತ್ತಿಲ್ಲ, ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸೃಷ್ಟಿ ಚಾರಿಟೇಬಲ್ ಟ್ರಸ್ಟ್ ನಡೆಸುತ್ತಿದ್ದ ಗರ್ಭಿಣಿಯರ ಸೇವಾ ಕೇಂದ್ರದ ಮೇಲೆ ಸ್ಥಳೀಯ ಬಿಜೆಪಿ ಪುಂಡರ ಕಣ್ಣು ಬಿತ್ತು. ಸೃಷ್ಟಿ ಸೇವಾಕೇಂದ್ರದ ಪಕ್ಕದಲ್ಲೇ ಇದ್ದ ಪುಡಿ ರೌಡಿಗಳಾದ ಆಂಜಿ ಮತ್ತು ಪ್ರಕಾಶ ಎಂಬಿಬ್ಬರು ಪದೇಪದೇ ಗರ್ಭಿಣಿಯರ ವಸತಿಗೆ ನುಗ್ಗಿ 'ಇಲ್ಲಿ ನೀವೆಲ್ಲ ವೇಶ್ಯಾವಾಟಿಕೆ ನಡೆಸುತ್ತಿದ್ದೀರ. ನಿಮ್ಮನ್ನೆಲ್ಲ ಪೊಲೀಸರಿಗೆ ಹಿಡಕೊಡ್ತೀವಿ. ಬಾಡಿಗೆಗೆ ನೀವೆಲ್ಲ ತಾಯಿ ಆಗ್ತೀರಿ. ಅಂದ್ರೆ ಅದು ವೇಶ್ಯಾವಾಟಿಕೆ ಅಲ್ವಾ?' ಎಂದು ಹಾವಳಿಯಿಟ್ಟರು. ಸೃಷ್ಟಿ ಸೇವಾ ಕೇಂದ್ರದ ಮುಖ್ಯಸ್ಥ ಗುರುಮೂರ್ತಿಯಿಂದ ಅಷ್ಟಿಷ್ಟು ದುಡ್ಡನ್ನೂ ಕಿತ್ತರು.

ಆದರೆ ಸಮಸ್ಯೆ ಶುರುವಾಗಿದ್ದೇ ಇಲ್ಲಿಂದ. ಹಾಳಾಗಲಿ, ಕಾಟ ತಪ್ಪಲಿ ಎಂದು ಗುರುಮೂರ್ತಿ ಬಿಜೆಪಿ ಪುಂಡರಿಗೆ ದೇಣಿಗೆ ಕೊಟ್ಟಿದ್ದೇ ಮಹಾಪರಾಧವಾಗಿತ್ತು. ಈ ಆಂಜಿ ಮತ್ತು ಪ್ರಕಾಶ ಎಂಬಿಬ್ಬರು ಪುಡಿ ರೌಡಿಗಳು ಇದೇ ಮಹಾಲಕ್ಷ್ಮಿ ಲೇಔಟಿನ ಹಳೇ ರೌಡಿ ಆಟೋ ವೆಂಕಟೇಶನ ಶಿಷ್ಯರು. ಒಂದಾನೊಂದು ಕಾಲಕ್ಕೆ ಆಟೋ ಓಡಿಸಿ ಕೊಂಡಿದ್ದು ಕ್ರಮೇಣ ರೌಡಿಜಮ್ಮಿಗೆ ಎಂಟ್ರಿ ಕೊಟ್ಟ ಮರಾರಿ ವೆಂಕಟೇಶ ಉರ್ಫ್ ಪಿ. ವೆಂಕಟೇಶ್ ಸದ್ಯ ನಾಗಪುರ ವಾರ್ಡಿಗೆ ಕೌನ್ಸಿಲರ್ ಆಗಿರುವ ಎಸ್. ಹರೀಶನ ಬಲಗೈ ಬಂಟ ಮತ್ತು ಮಾರಪ್ಪನಪಾಳ್ಯ ವಾರ್ಡ್‌ನ ಬಿಜೆಪಿ ಅಧ್ಯಕ್ಷ.

ಈತನ ಪತ್ನಿ ಮಂಗಳಗೌರಿ ಎಂಬಾಕೆಯದು ಚೀಟಿ ದಂಧೆ. ಯಾರೋ ಸಿಂಗಾಪುರದ ಆಸಾಮಿಯೊಬ್ಬನನ್ನು ಯಾಮಾರಿಸಿ ಆತನ ಕಾರು ಕಿತ್ತುಕೊಂಡ ಈಕೆಯ ವಿರುದ್ಧ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸಿದೆ. ಕೃಷ್ಣಾನಂದ ನಗರದ 2 ನೇ ಕ್ರಾಸಿನಲ್ಲಿರುವ ವೆಂಕಟೇಶನ ಮನೆಯದ್ದೇ ಕರಾಳ ಚರಿತ್ರೆ. ತನ್ನ ಪತ್ನಿಯ ಅಕ್ಕತಂಗಿಯರಿಬ್ಬರನ್ನೂ ಹೆದರಿಸಿ ಇಡೀ


ದೌರ್ಜನ್ಯಕ್ಕೀಡಾದ ಮೀನಾ

ಆಸ್ತಿ ಲಪಟಾಯಿಸಿದ ವೆಂಕಟೇಶನಿಗೆ ಕಂಠೀರವ ಸ್ಟುಡಿಯೋ ಎದುರಿಗಿರುವ ಮರಳು ಸ್ಟ್ಯಾಂಡ್‌ನಿಂದ ದಿನವೊಂದಕ್ಕೆ ಐದು ಸಾವಿರ ರೂಪಾಯಿಯ ಆದಾಯ ವಿದೆ. ಕೃಷ್ಣಾನಂದನಗರ, ನಂದಿನಿ ಲೇಔಟ್, ನಾಗಪುರ, ಕಂಠೀರವ ಸ್ಟುಡಿಯೋ, ಮಾರಪ್ಪನ ಪಾಳ್ಯ, ವಡ್ಡರಪಾಳ್ಯ, ಮಹಾಲಕ್ಷ್ಮಿ ಲೇಔಟ್ ಇತ್ಯಾದಿ ಏರಿಯಾಗಳಲ್ಲಿ ಯಾವುದೇ ಖಾಲಿ ಸೈಟು ಕಂಡರೂ ಕೌನ್ಸಿಲರ್ ಹರೀಶನನ್ನು ಕರೆದೊಯ್ದು 'ಇದು ಪಾಲಿಕೆ ಸೊತ್ತು' ಎಂದು ಬೇಲಿ ಹಾಕಿಸಿ ಹಾವಳಿಯಿಡುವುದು ಈತನ ಫುಲ್‌ಟೈಂ ದಂಧೆ.

ಈ ಸುತ್ತಮುತ್ತಲ ಏರಿಯಾಗಳ ಪಾಲಿಗೆ ಕಂಟಕನಾಗಿ ಬೆಳೆದ ರೌಡಿ ವೆಂಕಟೇಶನ ಕಾಟ ತಾಳದೆ ಕೆಲದಿನಗಳ ಹಿಂದೆ ವಾಟರ್‌ಬೋರ್ಡ್ ಹಿಂದಿನ ಗಂಗಾಧರೇಶ್ವರ ದೇವಸ್ಥಾನದ ಸ್ಲಮ್ ನಿವಾಸಿ ಹೆಂಗಸರೆಲ್ಲ ಸೇರಿ ಕೌನ್ಸಿಲರ್ ಹರೀಶನ ಸಮೇತ ಈತನನ್ನೂ ಸೇರಿಸಿ ಅಟ್ಟಾಡಿಸಿ ಹೊಡೆದರು. ಇದ್ಯಾವುದರಿಂದಲೂ ವೆಂಕಟೇಶ ಪಾಠ ಕಲಿಯಲಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲಂತೂ ಹರೀಶ-ವೆಂಕಟೇಶರ ಜೋಡಿ ನಂದಿನಿ ಲೇಔಟ್ ಮತ್ತು ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಗಳನ್ನೇ ಗುತ್ತಿಗೆ ಹಿಡಿದವರಂತೆ ಸಿಕ್ಕಸಿಕ್ಕವರ ಮೇಲೆ ಖೊಟ್ಟಿ ಕೇಸು ಹಾಕಿಸತೊಡಗಿದರು.

ತಿಂಗಳೊಂದಕ್ಕೆ ಪ್ರತಿ ಪೊಲೀಸ್ ಠಾಣೆಯಲ್ಲೂ ವೆಂಕಟೇಶ ಮತ್ತು ಹರೀಶ ಸೇರಿಕೊಂಡು ಕಮ್ಮಿಯೆಂದರೂ ಮೂರು ಕಂಪ್ಲೇಂಟು ಕೊಡಿಸುತ್ತಾರೆ. ಪೊಲೀಸರು ಇವರ ತಾಳಕ್ಕೆ ತಕ್ಕಂತೆ ಅಮಾಯಕರ ಮೇಲೆ ದೂರು ದಾಖಲಿಸುತ್ತಾರೆ. ಒಂದೆಡೆ ರೌಡಿಜಮ್ಮು ಮತ್ತೊಂದೆಡೆ ಪೊಲೀಸ್ ಕುಮ್ಮಕ್ಕು ಎರಡನ್ನೂ ಒಟ್ಟೊಟ್ಟಿಗೇ ಜಮಾಯಿಸಿ ಕೃಷ್ಣಾನಂದನಗರದ ಆಂಜನೇಯ ದೇವಸ್ಥಾನದ ಬಳಿ ಶಿವಾನಂದ ಎಂಟರ್‌ಪ್ರೈಸಸ್ ಎಂದು ಬೋರ್ಡು ಬರೆಸಿ ಟ್ರಾವಲ್ಸು, ಫೈನಾನ್ಸು, ರಿಯಲ್ ಎಸ್ಟೇಟ್ ಎಲ್ಲವನ್ನೂ ಒಟ್ಟೊಟ್ಟಿಗೇ ಶುರು ಹಚ್ಚಿಕೊಂಡ ವೆಂಕಟೇಶನ ಕಣ್ಣು ಬಿದ್ದಿದ್ದು ಸೃಷ್ಟಿ ಸೇವಾ ಕೇಂದ್ರದ ಅಸಹಾಯಕ ಗರ್ಭಿಣಿಯರ ಮೇಲೆ.

ಇಲ್ಲಿಗೆ ಮೂರು ತಿಂಗಳ ಹಿಂದೆ ಕೌನ್ಸಿಲರ್ ಹರೀಶನ ಮನೆಗೇ ಗುರುಮೂರ್ತಿಯನ್ನು ಕರೆಸಿಕೊಂಡ ವೆಂಕಟೇಶ ಹತ್ತು ಲಕ್ಷದ ಡಿಮ್ಯಾಂಡ್ ಇಟ್ಟ. ನಿರ್ಗತಿಕ ಗರ್ಭಿಣಿಯರನ್ನು ಯಾವ ರೀತಿ ತಾನೇ ಸುಲಿಯಲು ಸಾಧ್ಯ? ರೊಚ್ಚಿಗೆದ್ದ ಗುರುಮೂರ್ತಿ 'ಅಲ್ರೀ, ಪಾಪದ ಗರ್ಭಿಣಿಯರ ಭ್ರೂಣಕ್ಕೆ ಕೈಹಾಕ್ತೀರಲ್ರೀ. ಅವರ ಶಾಪ ತಟ್ಟದೇ ಇರುತ್ತಾ?' ಎಂದು ಶಾಪ ಹಾಕಿದರು.

ಇಷ್ಟಾಗಿದ್ದೇ ತಡ, ವೆಂಕಟೇಶ ಮತ್ತು ಕೌನ್ಸಿಲರ್ ಹರೀಶ ಸೇರಿಕೊಂಡು ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಗುರುಮೂರ್ತಿ ವಿರುದ್ಧ ಒಂದಲ್ಲ ಮೂರು ಸುಳ್ಳು ಕೇಸುಗಳನ್ನು ಹಾಕಿಸಿದ್ದಾರೆ. ಹೆಂಗಸೊಬ್ಬಳ ಅಂಡಾಣುವನ್ನು ಕಿತ್ತುಕೊಂಡಿದ್ದಾರೆ ಎಂಬ ಹಾಸ್ಯಾಸ್ಪದ ಕೇಸಿನ ಮೇಲೆ ನಂದಿನ ಲೇಔಟ್ ಪೊಲೀಸರು ಗುರುಮೂರ್ತಿಯನ್ನು ಜೈಲಿಗೂ ಹಾಕಿದ್ದಾಯ್ತು. ಪುರುಷನ ವೀರ್ಯವನ್ನಾಗಲಿ, ಮಹಿಳೆಯ ಅಂಡಾಣುವನ್ನಾಗಲಿ ಅವರಾಗಿ ಬಯಸದೆ ಬೇರೆ ಯಾರಿಂದಲೂ ಕಸಿಯಲು ಸಾಧ್ಯವೇ ಇಲ್ಲ ಎಂಬ ನೈಸರ್ಗಿಕ-ಜೈವಿಕ-ಪ್ರಕ್ರಿಯೆಯನ್ನೇ ಅರಿಯದ ಪೊಲೀಸರು ಅನ್ಯಾಯವಾಗಿ ಸೃಷ್ಟಿ ಸೇವಾ ಕೇಂದ್ರದ ಗರ್ಭಿಣಿಯರ ಮೇಲೆ ದೌರ್ಜನ್ಯಕ್ಕೆ ನಿಂತು ಬಿಟ್ಟರು.

ಇಷ್ಟಾದ ಮೇಲೂ ಸೃಷ್ಟಿ ಸೇವಾ ಕೇಂದ್ರದ ಗುರುಮೂರ್ತಿಯಿಂದ ದುಡ್ಡು ಹುಟ್ಟಲಿಲ್ಲವಲ್ಲ; ಅದಕ್ಕೆ ವೆಂಕಟೇಶ ತನ್ನ ಬಿಜೆಪಿ ಲೆಟರ್‌ಹೆಡ್ಡನ್ನೇ ಬಳಸಿ ಇಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದೆಯೆಂದು ಪಾಲಿಕೆ ಅಧಿಕಾರಿಗಳಿಗೆ ದೂರು ಕೊಟ್ಟ. ಪಾಲಿಕೆ ಅಧಿಕಾರಿಗಳಾದರೂ ಗರ್ಭಿಣಿ ಹೆಂಗಸರನ್ನು ಏನೆಂದು ದಂಡಿಸಲು ಸಾಧ್ಯ? ವೆಂಕಟೇಶನ ದೂರನ್ನು ಕಸದ ಬುಟ್ಟಿಗೆಸೆದರು. ಇದಾಗಿದ್ದೇ ತಡ ವೆಂಕಟೇಶ ಸೃಷ್ಟಿ ಸೇವಾಕೇಂದ್ರದ ಕಟ್ಟಡದ ಪ್ಲಾನೇ ಸರಿ ಇಲ್ಲ, ಅದು ಅನಧಿಕೃತ ಕಟ್ಟಡ, ಅದನ್ನು ನೆಲಸಮಗೊಳಿಸಿ ಎಂದು ಮತ್ತೊಂದು ಅರ್ಜಿ ಕೊಟ್ಟ. ಒಂದೆಡೆ ರೌಡಿ ಕಾಟ ಮತ್ತೊಂದೆಡೆ ಪೊಲೀಸ್ ಕಿರುಕುಳ, ಮಗದೊಂದೆಡೆ ಪಾಲಿಕೆ ಅಧಿಕಾರಿಗಳ ಹಾವಳಿಗೆ ರೋಸತ್ತ ಗುರುಮೂರ್ತಿ ಪತ್ನಿ ಮೀನಾ ತನ್ನ ಜೊತೆ ಸೇವಾ ಕೇಂದ್ರದ ಇಬ್ಬರು ಕಾರ್ಯಕರ್ತರನ್ನು ಕರಕೊಂಡು ಕೌನ್ಸಿಲರ್ ಹರೀಶನ ವಾರ್ಡ್ ಕಚೇರಿಗೇ ನ್ಯಾಯ ಕೇಳಲು ನಿನ್ನೆ ಅಂದರೆ ಏಪ್ರಿಲ್ 27 ರ ಬೆಳಿಗ್ಗೆ ಹೋಗಿದ್ದಾರೆ.

ಕೌನ್ಸಿಲರ್ ಕಛೇರಿಗೇ ಬಂದ ಮೀನಾ ಮತ್ತಿಬ್ಬರು ಹುಡುಗರನ್ನು ನೋಡಿದ್ದೇ ತಡ ವೆಂಕಟೇಶನ ಪಿತ್ಥ ಕೆರಳಿದೆ. ಮೀನಾ ಕಪಾಳಕ್ಕೆ ಎರಡು ಬಾರಿಸಿದ್ದಾನೆ. ಜೊತೆಗಿದ್ದ ಇಬ್ಬರೂ ಹುಡುಗರನ್ನು ಕೌನ್ಸಿಲರ್‌ನ ಕಚೇರಿಗೆ ಎಳೆದೊಯ್ದು ತನ್ನ ಐದಾರು ಮಂದಿ ಸಹಚರರ ಜೊತೆ ಸೇರಿಕೊಂಡು ರಾಡು ದೊಣ್ಣೆಯಿಂದ ಹೊಡೆದಿದ್ದಾನೆ. ಹೊಡೆದ ಏಟಿಗೆ ಮಂಜುನಾಥ ಎಂಬ ಹುಡುಗನ ಕೈ ಮೂಳೆ ಮುರಿದಿದೆ. ಜೊತೆಗಿದ್ದ ಮತ್ತೊಬ್ಬ ಹುಡುಗ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ. ಇನ್ನೆಲ್ಲಿ ತಮ್ಮ ಹುಳುಕು ಬಯಲಾಗುತ್ತೋ ಎಂದು ಹರೀಶ ಮತ್ತು ವೆಂಕಟೇಶ ಸೇರಿಕೊಂಡು ಪೊಲೀಸರನ್ನು ಕರೆಸಿ ಕತೆ ಕಟ್ಟಿದ್ದಾರೆ. ಆ ಪ್ರಕಾರ ಸೃಷ್ಟಿ ಸೇವಾ ಕೇಂದ್ರದ ಮೀನಾ ಮತ್ತಿಬ್ಬರು ಹುಡುಗರು ವೆಂಕಟೇಶನನ್ನು ಕೊಲ್ಲಲೆಂದು ಹೊಂಚ ಹಾಕುತ್ತಿದ್ದರಂತೆ. ಜೊತೆಗೆ ಮೊಂಡು ಚಾಕು ಒಂದನ್ನೂ ತಂದಿದ್ದರಂತೆ. ಕಾಮಾಕ್ಷಿಪಾಳ್ಯದ ಮಾಜಿ ಕೌನ್ಸಿಲರ್ ಮತ್ತು ಜೆಡಿಎಸ್ ನಾಯಕ ಗೋಪಾಲಯ್ಯನಿಂದ ಸುಪಾರಿ ಪಡೆದು ಬಿಜೆಪಿ ರೌಡಿ ವೆಂಕಟೇಶನನ್ನು ಕೊಲ್ಲುವುದು ಅವರ ಉದ್ದೇಶವಂತೆ!

ಮಹಾಲಕ್ಷ್ಮಿ ಲೇಔಟ್ ಇನ್ಸ್‌ಪೆಕ್ಟರ್ ಅನಿಲ್‌ಕುಮಾರ್ ಸಾಹೇಬರದ್ದು ಅದೇನು ದೌರ್ಬಲ್ಯವೋ ಗೊತ್ತಿಲ್ಲ. ರೌಡಿ ವೆಂಕಟೇಶನ ಗ್ಯಾಂಗ್ ಹಿಂಸಿಸಿ ಕರೆತಂದಿದ್ದ ಹುಡುಗರನ್ನೇ ಲಾಕಪ್ಪಿಗೆ ದಬ್ಬಿದ್ದಾರೆ. ಎಸಿಪಿ ಅಜ್ಜಪ್ಪನವರದ್ದು ಬಿಜೆಪಿ ಸರ್ಕಾರವನ್ನು ಎದುರಿಸಲಾಗದ ನರ ದೌರ್ಬಲ್ಯ. ಇನ್ನೂ ದುರಂತವೆಂದರೆ ತನ್ನನ್ನು ಕೌನ್ಸಿಲರ್‌ನ ಕಚೇರಿಯಲ್ಲೇ ಹಿಂಸಿಸಿದ ರೌಡಿ ವೆಂಕಟೇಶನ ಗ್ಯಾಂಗ್ ವಿರುದ್ಧ ಮೀನಾ ಪೊಲೀಸ್ ಕಮೀಷನರ್, ಡಿಸಿಪಿ, ಮಹಾಲಕ್ಷ್ಮಿ ಲೇಔಟ್ ಇನ್ಸ್‌ಪೆಕ್ಟರ್ ಎಲ್ಲರಿಗೂ ದೂರು ಕೊಟ್ಟರೆ, ಸರಿಸುಮಾರು 200 ಮಂದಿಯ ಪುಂಡರ ಪಡೆ ಸಮೇತ ಪೊಲೀಸ್ ಠಾಣೆಗೇ ನುಗ್ಗಿದ ಕೌನ್ಸಿಲರ್ ಹರೀಶ ಇನ್ಸ್‌ಪೆಕ್ಟರ್ ಅನಿಲ್‌ಕುಮಾರ್ ಎದುರೇ ದೂರು ಕೊಟ್ಟವರಿಗೆ ಕೊಲೆ ಬೆದರಿಕೆ ಹಾಕಿದ್ದಾನೆ.

ಒಂದೋ ಕೌನ್ಸಿಲರ್ ವಿರುದ್ಧದ ದೂರು ವಾಪಸ್ಸು ಪಡೆಯಬೇಕು ಅಥವಾ ಕೇಳಿದ ಹತ್ತುಲಕ್ಷ ರೋಲ್‌ಕಾಲ್ ಕೊಟ್ಟು ಕೈ ಮುಗಿಯಬೇಕು. ಪೊಲೀಸ್ ಠಾಣೆಗೇ ನುಗ್ಗಿ ಪೊಲೀಸರ ಎದುರೇ ದೂರು ಕೊಟ್ಟವರನ್ನು ಬಿಜೆಪಿ ರಕ್ಕಸರು ಹೆದರಿಸುತ್ತಾರೆಂದರೆ ಮಹಾಲಕ್ಷ್ಮಿ ಲೇಔಟನಲ್ಲಿ ಯಾರಿಗಾದರೂ ರಕ್ಷಣೆ ಇದೆಯಾ? ಯಾವುದೂ ಲೆಕ್ಕಕ್ಕಿಲ್ಲವಾ? ಬಿಜೆಪಿ ರಾಮರಾಜ್ಯದ ಪರಿಕಲ್ಪನೆಗೆ ಇದಕ್ಕಿಂತ ಸಾಕ್ಷಿ ಬೇಕಾ?


ನಾಗಪುರ ಕೌನ್ಸಿಲರ್ ...ೕಶ



ಬಾಬಾನೊಂದಿಗೆ ಸತ್ಯಜಿತ್

ಸತ್ಯ ಸಾಯಿಬಾಬಾ ಮುಂದಿನ ಜನ್ಮದಲ್ಲಿ ಕರ್ನಾಟಕದ ಮಂಡ್ಯದಲ್ಲಿ ಹುಟ್ಟುತ್ತಾನೋ ಇಲ್ಲವೋ? ಆದರೆ ಕರ್ನಾಟಕದವನೇ ಒಬ್ಬ ಬಾಬಾ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾಗುವ ಸಾಧ್ಯತೆಗಳು ಕಾಣುತ್ತಿವೆ.

ಅವನು ಸತ್ಯಜಿತ್!

ಮಂಗಳೂರು ಮೂಲದ ಈತ ಈಗಿನ್ನೂ ಮೂವತ್ಮೂರು ವರ್ಷದವನು. ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಅಂದರೆ ಆಗಿನ್ನೂ ಏಳೆಂಟು ವರ್ಷದವನಾಗಿದ್ದಾಗಲೇ ಬಾಬಾ ಶಾಲೆಯಲ್ಲಿ ಓದಲೆಂದು ಹೋಗಿದ್ದ ಸತ್ಯಜಿತ್ ಆಗಲೇ ಬಾಬಾ ಖಾಸಗಿ ರೂಂಗೂ ಹೋಗಿಬರುತ್ತಿದ್ದ. ದಿನಕ್ರಮೇಣ ಹೀಗೆ ಬಾಬಾನ ಸೇವೆ ಮಾಡುಮಾಡುತ್ತಲೇ ಕೊನೆಗೆ ಬಾಬಾನನ್ನೇ ಕಂಟ್ರೋಲಿಗೆ ತೆಗೆದುಕೊಂಡಿದ್ದ.

ಅದೇ ಸತ್ಯಜಿತ್ ಈಗ ತನ್ನ ಹತ್ತಿರ ಬಾಬಾನ ಕೊನೆಯ ವಿಲ್ ಇರುವುದಾಗಿಯೂ, ತಾನದನ್ನು ಸೂಕ್ತ ಸಮಯದಲ್ಲಿ ಹೊರತೆಗೆದು ತೋರಿಸುವುದಾಗಿಯೂ ಹೇಳುತ್ತಿದ್ದಾನೆ.

ಇದರಿಂದ ಸಾಯಿಬಾಬಾ ಟ್ರಸ್ಟ್ ಸದಸ್ಯರು ಬೆಚ್ಚಿಬಿದ್ದಿದ್ದಾರೆ. ಸಾಯಿಬಾಬಾ ಸಾಯುವ ಹಲದಿನಗಳ ಮೊದಲಿನಿಂದಲೇ ಸತ್ಯಜಿತ್ ವಿರುದ್ಧ 'ಬಾಬಾಗೆ ನಿದ್ದೆ ಮಾತ್ರೆ ತಿನ್ನಿಸುತ್ತಿದ್ದಾನೆ' ಎಂದು ಟ್ರಸ್ಟ್ ಮೆಂಬರ್‌ಗಳು ಜಗಳ ತೆಗೆದಿದ್ದರು. ಅಂದರೆ ಹೊರನೋಟಕ್ಕೆ ಸ್ಪಷ್ಟವಾಗಿ ಕಾಣುವಂತೆ ಈಗ ಬಾಬಾ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಲು ಎರಡು ಗುಂಪುಗಳು ಕಾದಾಟಕ್ಕೆ ಇಳಿದಿರುವುದು ಕಾಣುತ್ತಿದೆ.

ಒಂದು ಸತ್ಯಜಿತ್ ಗುಂಪು, ಇನ್ನೊಂದು ಟ್ರಸ್ಟ್ ಗುಂಪು. ಟ್ರಸ್ಟ್ ಗುಂಪಿನಲ್ಲಿ ಬಾಬಾ ನೆಂಟ ರತ್ನಾಕರ, ಚಕ್ರವರ್ತಿ, ಹೀರಾಲಾಲಾ ಶಾ, ಶ್ರೀನಿವಾಸನ್ ಮೊದಲಾದವರಿದ್ದಾರೆ.

ಈ ಗದ್ದಲದ ನಡುವೆಯೇ ಸಾಯಿಬಾಬಾ ಸಾಯುವ ಎರಡು ತಿಂಗಳು ಮೊದಲೇ ಶವಪೆಟ್ಟಿಗೆಗೆ ಆರ್ಡರ್ ಮಾಡಿದ್ದ ಸಂಗತಿಯೂ ಬಯಲಾಗಿದೆ.

ಹಾಗಾದರೆ ಎಂದೋ ಸತ್ತುಹೋಗಿದ್ದ ಸಾಯಿಬಾಬಾನನ್ನು ಏಪ್ರಿಲ್ 24ರಂದು ಸತ್ತನೆಂದು ಘೋಷಿಸಿದರೇಕೆ? ಎಂಬ ಪ್ರಶ್ನೆ ಎದ್ದೇಳುತ್ತದೆ.

ಬಂಧಿಯಾಗಿದ್ದನೆ ಬಾಬಾ?

ನಿಜಕ್ಕೂ ಇದೊಂದು ವಿಪರ್ಯಾಸಕರ ಸನ್ನಿವೇಶ. ವಿಶ್ವಾದ್ಯಂತ ಲಕ್ಷಾಂತರ ಭಕ್ತರನ್ನೂ, ಸರ್ಕಾರಗಳ ಅಧಿಪತಿಗಳನ್ನೇ ಅನುಯಾಯಿ ಯಾಗಿ ಪಡೆದಿದ್ದ ಸಾಯಿಬಾಬಾ ತಾನು ಮಾತ್ರ ಬೆರಳೆಣಿಕೆಯಷ್ಟು ಜನರ ಕೈಲಿ ಬಂಧಿಯಾಗಿದ್ದನೇ?



ಟ್ರಸ್ಟಿಗಳು

ಲಕ್ಷಾಂತರ ಜನ ಸಾಯಿಬಾಬಾ ಬದುಕಲಿ ಎಂದು ಪ್ರಾರ್ಥಿಸುತ್ತಿದ್ದಾಗ ಬಾಬಾನ ಆಪ್ತರೇ ಆತ ಸಾಯುವ ಮೊದಲೇ ಶವಪೆಟ್ಟಿಗೆ ರೆಡಿ ಮಾಡಿಕೊಳ್ಳುತ್ತಿದ್ದರೆಂಬ ಸುದ್ದಿ ಅನುಮಾನ ಹುಟ್ಟಿಸುವುದಿಲ್ಲವೇ?

ಬಾಬಾ ಶವಪೆಟ್ಟಿಗೆಯ ವಿಚಾರ ಈಗ ಇದ್ದಕ್ಕಿದ್ದಂತೆ ಬೆಂಗಳೂರಿನ ಮಲ್ಲೇಶ್ವರದಿಂದ ಮೇಲೆದ್ದು ಬಂದಿದೆ.

ಬೆಂಗಳೂರಿನ ಸಾಯಿಬಾಬಾ ಆಶ್ರಮವಿರುವ ಕಾಡುಗೋಡಿಯವರೇ ಆದ ಲಕ್ಷ್ಮೀ ಎಂಬುವವರು ಮಲ್ಲೇಶ್ವರದಲ್ಲಿ ನಡೆಸುತ್ತಿರುವ ಕುಮಾರ್ ಅಂಡ್ ಕಂಪೆನಿ ಇಂಟರ್‌ನ್ಯಾಷನಲ್ ಎಂಬ ಸಂಸ್ಥೆ ಈ ಫ್ರೀಜರ್ ಬಾಕ್ಸ್ ಅರ್ಥಾತ್ ಶವಪೆಟ್ಟಿಗೆಯ ವಿಚಾರವನ್ನು ತಾನೇ ಬಹಿರಂಗಪಡಿಸಿದೆ.

ಆದರೆ ಇದನ್ನು ರೆಡಿ ಮಾಡಿ ಪುಟ್ಟಪರ್ತಿಗೆ ಕಳಿಸಲು ಹೇಳಿದ್ದು ಸತ್ಯಜಿತ್‌ನೋ ಅಥವಾ ಟ್ರಸ್ಟ್ ಮೆಂಬರ್‌ಗಳೋ? ಎಂಬುದೀಗ ಬಗೆಹರಿಯಬೇಕಿದೆ. ಈ ಫ್ರೀಜರ್ ಬಾಕ್ಸ್‌ಗೆ ಆರ್ಡರ್ ಮಾಡಿದವನು ಕೊಯಮತ್ತೂರಿನ ರಾಜೇಂದ್ರ ರೆಡ್ಡಿಯೇ ಆದರೂ ಅವನೇನು ಬಾಬಾ ಆಪ್ತನಾಗಿರಲಿಲ್ಲ, ಆಶ್ರಮವಾಸಿ ಅಥವಾ ಟ್ರಸ್ಟ್ ಮೆಂಬರೂ ಅಲ್ಲ. ಹಾಗಿದ್ದ ಮೇಲೆ ಬಾಬಾ ದೇಹದ ಮೇಲೆ ನಿಯಂತ್ರಣ ಸಾಧಿಸಲು ಪೈಪೋಟಿ ನಡೆಸುತ್ತಿರುವ ಎರಡು ಬಣದವರ ಪೈಕಿ ಯಾರೋ ಒಬ್ಬರು ರಾಜೇಂದ್ರ ರೆಡ್ಡಿ ಮೂಲಕ ಈ ಕೆಲಸಕ್ಕೆ ಕೈಹಾಕಿರಬೇಕು ತಾನೇ?

ಶಿಶುಕಾಮಿ ಬಾಬಾ ಮತ್ತು ಸತ್ಯಜಿತ್

ಸಾಯಿಬಾಬಾನ ಪವಾಡಗಳ ಬಗ್ಗೆ ಅದೆಷ್ಟು ಕತೆಗಳಿವೆಯೋ ಅದಕ್ಕೆ ತದ್ವಿರುದ್ಧವಾಗಿ ಅವನ ಶಿಶು ಕಾಮವಾಂಛೆ ಹಾಗೂ ವಿಕೃತಿಗಳ ಕತೆಗಳೂ ನೂರಾರಿವೆ. ಸಾಯಿಬಾಬಾನ ಸಾವು ಹಾಗೂ ಉತ್ತರಾಧಿಕಾರಿಯ ಜಗಳ ಈಗ ನಡೆದಿರುವಾಗಲೇ ಜೆರಾಲ್ಡ್ ಪ್ರಿಡ್ಡಿ ಎಂಬಾತ ದೊಡ್ಡ ಲೇಖನವೊಂದನ್ನು ಬರೆದು ಇಂಟರ್‌ನೆಟ್‌ನಲ್ಲಿ ಹಾಕಿದ್ದಾನೆ. ಈ ಜೆರಾಲ್ಡ್ ಒಂದು ಕಾಲದಲ್ಲಿ ಯುರೋಪ್‌ನಲ್ಲಿ ಸಾಯಿಬಾಬಾನ ಅನುಯಾಯಿಯಾಗಿದ್ದುಕೊಂಡು ಆಶ್ರಮ ಸ್ಥಾಪಿಸಿ ಹತ್ತಾರು ವರ್ಷ ಕೆಲಸ ಮಾಡಿದ್ದಾತ. ಕೊನೆಗೆ ಬಾಬಾನ ವಿಕೃತ ಕಾಮ ಚೇಷ್ಟೆಗಳ ಘಟನಾವಳಿಗಳನ್ನು ಕೇಳಿ ಕೇಳಿ ಬೇಸತ್ತು ಬಾಬಾನಿಂದ ದೂರವಾಗಿದ್ದ.

ಅದೇ ಜೆರಾಲ್ಡ್ ಈಗ ಸತ್ಯಜಿತ್ ತರದವರು ಯಾಕೆ ಸಾಯಿಬಾಬಾಗೆ ಆಪ್ತರಾಗುತ್ತಾರೆಂಬ ಬಗ್ಗೆ ಹಳೆಯ ಪ್ರಕರಣಗಳೊಂದಿಗೆ ದಾಖಲಿಸಿದ್ದಾನೆ.

ಮುನ್ನಿ ಎಂಬ ಶಿಕ್ಷಕಿ

ಪುಟ್ಟಪರ್ತಿಯ ಸಾಯಿಬಾಬಾ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಮುನ್ನಿ ಎಂಬಾಕೆ ತನ್ನ ವಿದ್ಯಾರ್ಥಿಗಳ ಪೈಕಿ ಆಕರ್ಷಕವಾಗಿರುವ, ಸುಂದರ ಬಾಲಕರನ್ನು ಹುಡುಕಿ ತೆಗೆದು ಸಾಯಿಬಾಬಾನ ಖಾಸಗಿ ಸೇವೆಗೆ ಕಳುಹಿಸುತ್ತಿದ್ದಳು. ಈ ಸತ್ಯಜಿತ್ ಕೂಡ ಅಂತವರಲ್ಲೊಬ್ಬ. ಈ ಚಂದದ ಬಾಲಕರು ಬಾಬಾನ ಸೇವೆಗೆಂದು ರಾತ್ರಿ ಅವನ ಬೆಡ್‌ರೂಂ ಹೊಕ್ಕರೆ ಹೊರಬರುತ್ತಿದ್ದುದೇ ಮರುದಿನ ಬೆಳಗ್ಗೆ.



ಜೆರಾಲ್ಡ್

ಇದೊಮ್ಮೆ ವಿವಾದವಾಗಿ ಸ್ಫೋಟಿಸಿತು. ಏನಾಯಿತೆಂದರೆ ಸ್ವತಃ ಟೀಚರ್ ಮುನ್ನಿ ಈ ಬಾಲಕರನ್ನು ತನ್ನ ಕಾಮವಾಂಛೆಗೆ ಬಳಸಿಕೊಂಡು ಅದು ಬಹಿರಂಗವಾಯಿತು. ಅದು ದೊಡ್ಡ ವಿವಾದವಾಗುತ್ತಿದ್ದಂತೆಯೇ ಬಾಬಾನ ಕೆಲ ಹಳೆಯ ಭಕ್ತರು ತಾವು ಕಂಡ, ಅನುಭವಿಸಿದ್ದ ಪಾಡುಗಳನ್ನು ಧೈರ್ಯವಾಗಿ ಹೇಳಿಕೊಂಡರು. ಅಂತಹವರ ಪೈಕಿ ಗ್ರೀಸ್ ದೇಶದ ದಂಪತಿಗಳು ಜೆರಾಲ್ಡ್ ಪ್ರಿಡ್ಡಿಗೆ ತಮ್ಮ ಮಗ ಸಾಕ್ರೆಟೀಸ್ ಸಾಯಿಬಾಬಾನ ವಿಕೃತಿಗೆ ಹೇಗೆ ಬಲಿಪಶುವಾಗಿದ್ದನೆಂಬ ಕತೆ ಹೇಳಿಕೊಂಡರು.

ಹೀಗೆ ಸರಣಿಯೋಪಾದಿಯಲ್ಲಿ ಬಾಬಾನ ವಿಕೃತ ಚೇಷ್ಟೆಗಳು ಹೊರಬಂದರೂ ಬಾಬಾ ಕೆಲ ಆಪ್ತ ಸೇವಕ ಬಾಲಕರು ಮತ್ತವರ ಪೋಷಕರು ಮುಗುಮ್ಮಾಗೇ ಉಳಿದುಬಿಟ್ಟರು.

ಅಂತವರ ಪೈಕಿ ಸತ್ಯಜಿತ್ ಒಬ್ಬ ಎನ್ನಲಾಗುತ್ತಿದೆ.

ಡೀಲ್‌ಗಳೂ ನಡೆಯುತ್ತಿದ್ದವು



ಸಾಯಿಬಾಬಾ ಆಸ್ಪತ್ರೆ ಕಟ್ಟಿಸಿದ್ದು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೆಲ್ಲವನ್ನೂ ಹೊಗಳಿ ಕೊಂಡಾಡುವವರಿಗೆ ತೆರೆಮರೆಯಲ್ಲಿ ನಡೆಯುತ್ತಿದ್ದ ಡೀಲ್‌ಗಳ ಅರಿವು ಬರಲು ಸಾಧ್ಯವಿರಲಿಲ್ಲ. ಬಾಬಾನ ಆಪ್ತ ವಲಯದಲ್ಲಿದ್ದ ಕೆಲವರು ಸಮಾಜ ಸೇವೆಯ ಸೋಗಿನಲ್ಲೇ ಕೋಟ್ಯಂತರ ರೂಪಾಯಿ ಲೂಟಿ ಮಾಡುತ್ತಿದ್ದರೆಂಬ ವಿವರಗಳು ಈಗ ಹೊರಬರುತ್ತಿವೆ.

ಕೊಂಡಾಲ್ ರಾವ್ ಎಂಬುವವನು ಅವರಲ್ಲೊಬ್ಬ.

ಆಂಧ್ರ ಸರ್ಕಾರದಲ್ಲಿ ಇಂಜಿನಿಯರ್ ಆಗಿದ್ದ ಕೊಂಡಲ್ ರಾವ್ ಸಾಯಿಬಾಬಾ ಚೆನ್ನೈ ನಗರಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಹೊರಟಾಗ ಆ ಇಡೀ ಯೋಜನೆಯ ಚೀಫ್ ಕನ್ಸಲ್ಟೆಂಟ್ ಆಗಿದ್ದ. ಲಾರ್ಸನ್ ಅಂಡ್ ಟಬ್ರೋ ನಿರ್ಮಾಣ ಕಂಪೆನಿಯ (ಅಂಬಾನಿ ಕುಟುಂಬದ್ದು) ಎ.ರಾಮಕೃಷ್ಣ ಎಂಬುವವನು ಇವನ ಗೆಳೆಕಾರನಾಗಿದ್ದ. ಬಾಬಾನ ಬೃಹತ್ ಯೋಜನೆಗಳ ಕಾಂಟ್ರ್ಯಾಕ್ಟ್‌ಗಳೆಲ್ಲ ಎಲ್ ಅಂಡ್ ಟಿಗೇ ಸಿಗುವಂತೆ ಈ ಕೊಂಡಾಲ್ ರಾವ್ ನೋಡಿಕೊಳ್ಳುತ್ತಿದ್ದ. ರಾಜಗೋಪಾಲ್‌ಚಾರಿಯ ಮಗ ಕೆ.ಚಕ್ರವರ್ತಿ ಎಂಬುವವನು ಬಾಬಾ ಟ್ರಸ್ಟ್ ಮೆಂಬರ್ ಆಗಿದ್ದು ಇವರೆಲ್ಲ ಒಂದು ಸಿಂಡಿಕೇಟ್ ರೀತಿ ಆಪರೇಟ್ ಮಾಡುತ್ತಿದ್ದರು. ಮಜಾ ಅಂದರೆ ಸಾಯಿಬಾಬಾನ ಆಪ್ತ ವಲಯದಲ್ಲಿದ್ದ ಈ ಕೊಂಡಾಲ್ ರಾವ್, ಚಕ್ರವರ್ತಿ, ರಾಮಕೃಷ್ಣ ಕೆ.ಆರ್.ಪರಮಹಂಸ, ಡಾ.ಜಿ.ವೆಂಕಟರಾಮನ್ (ಅಣುವಿಜ್ಞಾನಿ) ಮುಂತಾದವರಿಗೆಲ್ಲಾ ಸ್ವತಃ ಸಾಯಿಬಾಬಾನೇ ಆಗಾಗ್ಗೆ ದುಬಾರಿ ಜಪಾನಿ ಕಾರುಗಳನ್ನು ಉಡುಗೊರೆಯಾಗಿ ಕೊಡುತ್ತಿದ್ದ. ಆದರೆ ಈ ಕಾರುಗಳನ್ನು ಹಣ ತೆತ್ತು ಆಶ್ರಮದ ಬಾಗಿಲಿಗೆ ತಂದು ನಿಲ್ಲಿಸುತ್ತಿದ್ದವರು ಕಾರ್ಪೊರೆಟ್ ಕಂಪೆನಿಗಳವರು.

ತಮಗೆ ಸಿಗುತ್ತಿದ್ದ ಕೋಟ್ಯಂತರ ರೂಪಾಯಿಗಳ ಕಾಂಟ್ರ್ಯಾಕ್ಟ್‌ಗೆ ಪುರಸ್ಕಾರವಾಗಿ ಈ ಕಂಪೆನಿಗಳು ಬಾಬಾ ಆಪ್ತರಿಗೆ ಈ ಗಿಫ್ಟ್ ಕೊಡಿಸುತ್ತಿದ್ದರು... ಅದೂ ಬಾಬಾ ಕೈಯಿಂದಲೇ! ಹೀಗೆ ಹೊರ ನೋಟಕ್ಕೆ ಕಾಣುವಂತೆ ಬಾಬಾ ವಲಯದಲ್ಲಿ ಎರಡು ಬಣಗಳಿದ್ದವೆಂಬುದು ಸ್ಪಷ್ಟವಾಗಿದೆ. ಬಾಬಾ ಬದುಕಿದ್ದಾಗ ಹಾಗೂ ಸತ್ತ ಮೇಲೆ ಈ ಗುಂಪುಗಳೇ ಈಗ ಬಾಬಾ ಸಾಮ್ರಾಜ್ಯದ ಹತೋಟಿಗಾಗಿ ಸಂಘರ್ಷಕ್ಕಿಳಿದಿದ್ದಾರೆ.

ಈ ಜಗಳದಲ್ಲಿ ಬಾಬಾನ ಖಾಸಗಿ ಗೆಳೆಕಾರ ಸತ್ಯಜಿತ್ ಗೆಲ್ಲುತ್ತಾನೋ ಅಥವಾ ಟ್ರಸ್ಟ್‌ನವರು ಮೇಲುಗೈ ಸಾಧಿಸುತ್ತಾರೋ ಇಲ್ಲಾ ಇಬ್ಬರೂ ರಾಜಿ ಮಾಡಿಕೊಂಡು ಸಾಮ್ರಾಜ್ಯ ಹಂಚಿಕೊಳ್ಳುತ್ತಾರೋ ಕಾದು ನೋಡಬೇಕಿದೆ.

• ವರದಿಗಾರ

ಶವಪೆಟ್ಟಿಗೆ ನೀಡಿದ ಲಕ್ಷ್ಮಿಗೂ ಅನುಮಾನ!





ಸಾಯಿಬಾಬಾ ಏಪ್ರಿಲ್ 24ರಂದು ಸಾಯಲಿಲ್ಲ ಎಂಬುದು ಈಗ ಗ್ಯಾರಂಟಿಯಾಗಿದೆ. ಕೊಯಮತ್ತೂರಿನ ರಾಜೇಂದ್ರ ರೆಡ್ಡಿ ಮಾರ್ಚ್ 29ನೇ ತಾರೀಕಿಗೆ ಮಲ್ಲೇಶ್ವರದ ಕುಮಾರ್ ಅಂಡ್ ಕೋ. ಆಫೀಸ್‌ಗೆ ಫೋನ್ ಮಾಡಿ ಅತ್ಯಾಧುನಿಕ ಶವಪೆಟ್ಟಿಗೆ ಬಗ್ಗೆ ವಿಚಾರಿಸುತ್ತಾನೆ. ಈ ಸಂಸ್ಥೆಯ ಮಾಲಕಿ ಲಕ್ಷ್ಮಿ ಹೇಳುವಂತೆ ಆಕೆ ಸರಬರಾಜು ಮಾಡಿದ್ದು ಒಂದು ಮಾಮೂಲಿ ಮರದ ಶವಪೆಟ್ಟಿಗೆಯಲ್ಲ, ಬದಲಾಗಿ ರೆಫ್ರಿಜರೇಟರ್‌ನಂತೆ ಕೆಲಸ ಮಾಡುವ ಫ್ರೀಜರ್ ಬಾಕ್ಸ್. ಶವ ಬೇಗನೆ ಕೊಳೆಯದಂತೆ ಸುತ್ತಲೂ ಐಸ್ ತುಂಬಿಸಿರುವ ಈ ಫ್ರೀಜರ್ ಬಾಕ್ಸ್ ಏಪ್ರಿಲ್ 4ರಂದು ಪುಟ್ಟಪರ್ತಿಗೆ ತಲುಪಿದೆ. ಆ ನಡುವೆ ಒಮ್ಮೆ ಬಾಬಾ ಸತ್ತ ಅಂದರು. ಇಲ್ಲ ಬದುಕಿದ್ದಾನೆ, ಚೇತರಿಸಿಕೊಂಡನೆಂಬ ರೂಮರನ್ನೂ ಹಬ್ಬಿಸಲಾಯಿತು. ಇದರರ್ಥ ಇಷ್ಟೇ: ಸಾಯಿಬಾಬಾನ ಸಾವನ್ನು ಜಾರಿಗೊಳಿಸುವ ಮುನ್ನಾ ಅವನ ಸುತ್ತಲೂ ಇದ್ದ ಜನ ಅಮೂಲ್ಯವಾದವುಗಳನ್ನೆಲ್ಲಾ ಬೇರೆಡೆಗೆ ಸಾಗಿಸಲು, ಉತ್ತರಾಧಿಕಾರಿ ಪ್ರಶ್ನೆ ಬಗೆಹರಿಸಿಕೊಳ್ಳಲು ಪ್ಲಾನ್ ಮಾಡಿಕೊಳ್ಳುತ್ತಿದ್ದರು ಅಷ್ಟೆ. ಅವುಗಳ ಪೈಕಿ ಕೆಲವು ಸರ್ವ ಸಮ್ಮತವಾಗಿ ಬಗೆಹರಿದಿರಲಿಕ್ಕೂ ಸಾಕು... ಉತ್ತರಾಧಿಕಾರಿ ಪ್ರಶ್ನೆಯೊಂದನ್ನುಳಿದು....

ಬಾಬಾ ಸತ್ತ ದಿನ ಆತನ ದೇಹಸ್ಥಿತಿ ಹೇಗಿತ್ತೆಂಬ ಪ್ರಶ್ನೆ ಈಗಲೂ ಬಗೆಹರಿದಿಲ್ಲ, ದೇಹ ಪ್ರದರ್ಶನಕ್ಕಿಡುವ ಮುನ್ನ ಬಾಬಾನ ಶವಕ್ಕೆ ಇಂಬಾಮ್(ಸಂರಕ್ಷಣೆ) ಮಾಡಲಾಗಿತ್ತು, ಅಂದರೆ ಶವ ಬೇಗ ಕೊಳೆಯದಂತೆ ದೇಹದ ಕೆಲ ಅಂಗಗಳನ್ನು ಹೊರತೆಗೆದು, ಮುಖ ಕಾಂತಿಯುತವಾಗಿ ಕಾಣುವಂತೆ ಮಾಡುವ ವಿಧಾನವದು.

ಫೊರೆನ್ಸಿಕ್ ತಜ್ಞ ವೈದ್ಯರುಗಳಿಗೆ ಮಾತ್ರ ಈ ವಿಧಾನ ಗೊತ್ತಿರುತ್ತದೆ. ಸತ್ಯ ಏನೆಂಬುದು ಅವರಿಗೆ ಮಾತ್ರ ಗೊತ್ತಿರಲಿಕ್ಕೆ ಸಾಧ್ಯ. ಅಂದಹಾಗೆ ಸಾಯಿಬಾಬಾನ ಮೃತ ಶರೀರವನ್ನು ಇಂಬಾಮ್ ಮಾಡಿದವರು

ಡಾ. ಕಿರಣ್!

ಈತ ಕೋಲಾರದ ದೇವರಾಜ [illegible] ಮೆಡಿಕಲ್ ಕಾಲೇಜಿನ ಫೊರೆನ್ಸಿಕ್ ವೈದ್ಯ!!



ಆಪ್ತರಿಗೆ ಕಾರ್ ಉಡುಗೊರೆ



ರಾಧಿಕಾ ನಾನು ನನ್ನ ಕನಸು...

[illegible]

ಷ್ಟು ದಿನ ಮಾಜಿ ಮುಖ್ಯಮಂತ್ರಿ ಎಚ್.ಡಿ. ಸ್ವಾಮಿ ಮತ್ತು ನಟಿ ರಾಧಿಕಾ ನಡುವಿನ ಸಂಬಂಧ ಊಹಾಪೋಹಗಳು ಮನಬಂದಂತೆ ಹರಿ ದಾಡು ಕೆಲವು ತಿಂಗಳುಗಳ ಹಿಂದೆ ಯಾವಾಗ ಖುದ್ದು ಳೇ ತನ್ನ ಹಾಗೂ ಮಗುವಿನ ಫೋಟೋಗಳನ್ನು ಮಗಳಿಗೆ ತಲುಪಿಸಿ "ಕುಮಾರಸ್ವಾಮಿ ನನ್ನ ಗಂಡ, ಕೆ.ಸ್ವಾಮಿ ನಮ್ಮಿಬ್ಬರ ಮಗಳು, ನಾಲ್ಕು ವರ್ಷದ ! ನಾವಿಬ್ಬರೂ ಮನೆಯವರ ಸಮಕ್ಷಮದಲ್ಲಿ ಗಿ ಮದುವೆಯಾದೆವು" ಎಂದು ಬಹಿರಂಗಪಡಿ ಆಗ ಗಾಳಿ ಸುದ್ದಿ ಹಬ್ಬಿಸುವ ಬಾಯಿಗಳಿಗೆ ತುರುಕಿದಂತಾಗಿತ್ತು.

ದು ವರ್ಷಕ್ಕಿಂತ ಹಿಂದೆ ಜಯನಗರದ 'ಕ್ರೆಡೆಲ್' ುಲ್ಲಿ ರಾಧಿಕಾ ಹೆಣ್ಣು ಮಗುವಿಗೆ ಜನ್ಮ ್ರದರೊಂದಿಗೆ ಕುಮಾರಸ್ವಾಮಿ ಜೊತೆಗಿನ ಆಕೆಯ ಧ ದೃಢಪಟ್ಟಿತ್ತು, ಈಗ ಅಂಥದ್ದೇ ಒಂದಿಷ್ಟು ೋಗಳು ಹೊರಬಂದಿವೆ...

ಮಾರಸ್ವಾಮಿ ಮತ್ತು ರಾಧಿಕಾ ಸಂಬಂಧ ಕಾನೂನಿನ ಅಕ್ರಮವಾಗಿದ್ದರೂ ಸಮಾಜದ ುಂದ ಅದನ್ನು ಸಕ್ರಮವಾಗಿಸಲು ರಾಧಿಕಾ ರಸ್ವಾಮಿಯವರ ಅನುಮತಿ ಮೇರೆಗೆ ದೇ ಯತ್ನಿಸುತ್ತಿದ್ದಾಳೆ. ಇಲ್ಲದಿದ್ದರೆ ಇಂಥ ೋಗಳನ್ನು ಹೊರಬಿಡುವ ಜರೂರತ್ತೇ ರಲಿಲ್ಲ, ಇನ್ನು ತನ್ನ ಈ ಸಂಸಾರದ ವನ್ನು ಗುಟ್ಟಾಗಿ ಇಡಲು ಸಾಧ್ಯವಿಲ್ಲ, ತಾವಾಗಿಯೇ ಬಹಿರಂಗಪಡಿಸಿದರೆ ತ ಮತ್ತು ಮೀಡಿಯಾದವರ ಪ್ರಶ್ನೆಗಳಿಂದ ಬಹುದು ಎಂಬುದು ಕುಮಾರಣ್ಣನ ರವಿರಬಹುದು. ಜೊತೆಗೆ ತನ್ನ ಮುದ್ದು ು ಮತ್ತು ರಾಧಿಕಾಗೆ ಸಾಮಾಜಿಕ ಾನವೂ ಸಿಗುತ್ತದೆ ಎಂಬ ಆಶೆಯೂ ಕುದು. ಇದೆಲ್ಲದರ ಜೊತೆಗೆ ವಿರೋಧ ಈ ವಿಚಾರವನ್ನೇ ಮುಂದಿಟ್ಟು ಕೊಂಡು ಾರಿತ್ರ್ಯಹರಣಕ್ಕೆ ಯತ್ನಿಸುವುದೂ ತಪ್ಪುತ್ತದೆ ಾಜಕೀಯ ಲೆಕ್ಕಾಚಾರವೂ ಇರಬಹುದು.

ದೆಲ್ಲ ಏನೇ ಇರಲಿ, ಕೆಲ ತಿಂಗಳ ಹಿಂದೆ ಮತ್ತು ಕುಮಾರಸ್ವಾಮಿ ನಡುವೆ ಬಿರು ಾಗಿದೆ, ಇತ್ತೀಚೆಗೆ ರಾಧಿಕಾಳೊಂದಿಗೆ ಸ್ವಾಮಿ ಹೆಚ್ಚು ಕಾಲ ಕಳೆಯುತ್ತಿಲ್ಲ ಎಂಬ ್‌ಗಳೂ ಜೀವ ಪಡೆದಿದ್ದವು. ಅದೆಲ್ಲಕ್ಕಿಂತ ಕಾರಿಯಾದ ವಿಷಯ ಯಾವುದೆಂದರೆ ಗೌಡರ ಕುಟುಂಬದ ಕೆಲವರಿಂದ ರಾಧಿಕಾಳ ಬೆದರಿಕೆ ಇದೆ, ಆದ್ದರಿಂದಲೇ ಆಕೆ ಎಲ್ಲೂ ಕಾಣಿಸಿಕೊಳ್ಳುತ್ತಿಲ್ಲ ಎಂಬ ಮಾತೂ ಎಲ್ಲೆಡೆ ಬಿತ್ತು.

ನೆಲ್ಲ ನಿಜವಾ? ಸದಾ ರಾಧಿಕಾಳ ಸಖ್ಯದಲ್ಲೇ ಂದು ಆಕೆಯನ್ನು ಅಷ್ಟೊಂದು ಪ್ರೀತಿಸುತ್ತಿದ್ದ ಸ್ವಾಮಿ ಆಕೆಯಿಂದ ದೂರವಾಗುವ ಪ್ರಯತ್ನ ಮಾಡುತ್ತಿದ್ದಾರಾ? ಸ್ವತಃ ರಾಧಿಕಾಳನ್ನೇ ಕೇಳಿದರೆ ಹೇಗೆ ಎಂದು ಆಕೆಯೊಂದಿಗೆ ಸಂಪರ್ಕ ಸಾಧಿಸಿದ 'ಲಂಕೇಶ್'ಗೆ ಆಕೆ ನೀಡಿದ ನೇರಾನೇರ ಉತ್ತರಗಳು ಇಲ್ಲಿವೆ...

ಪತ್ರಿಕೆ: 'ಹೊಸ' ಬದುಕು ಹೇಗಿದೆ?

ರಾಧಿಕಾ: ತುಂಬಾ ಚೆನ್ನಾಗಿದೆ. ನಾನು, ನನ್ನ ಮಗು, ನನ್ನ ಪತಿ ಎಲ್ಲರೂ ಅತ್ಯಂತ ಸಂತೋಷದಿಂದ ಇದ್ದೀವಿ. ನಮಗೆ ಯಾವ ಕೊರತೆಯೂ ಇಲ್ಲ.

* ಈಗಲೂ ಮದುವೆ ಆಗಿರುವ ಹಲವಾರು ನಟಿಯರು ವಿವಿಧ ಪಾರ್ಟಿಗಳಲ್ಲಿ, ಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ನೀವು ಎಂದೂ ಅಂತಹ ಪ್ರೋಗ್ರಾಮ್‌ಗಳಲ್ಲಿ ಕಾಣಿಸಿಕೊಂಡಿಲ್ಲ. ಆದ್ದರಿಂದ ನೀವು ಮುಖ್ಯವಾಹಿನಿಯಿಂದ ಹೊರಗೆ ಉಳಿದಿದ್ದೀರಿ ಅನ್ನಿಸುತ್ತದೆಯಾ? ನಿಮ್ಮ ವೈಯಕ್ತಿಕ ಸ್ವಾತಂತ್ರ್ಯ ಕಳೆದುಕೊಂಡ ಅನುಭವವಾಗುತ್ತಿದೆಯಾ?

ನಾನು ಮುಖ್ಯವಾಹಿನಿಯಿಂದ ಹೊರಗುಳಿದಿದ್ದೇನೆ ಅನ್ನುವ ಕಲ್ಪನೆಯೇ ತಪ್ಪು. ನಾನು ಮತ್ತು ನನ್ನ ಮಗು ಸಮಾಜದಲ್ಲಿ ಮುಕ್ತವಾಗಿ ಬೆರೆತು ನೆಮ್ಮದಿಯಾಗೇ



ಇದ್ದೀವಿ. ನಾನು ಗೃಹಬಂಧನದಲ್ಲಿದ್ದಿದ್ದರೆ ವೈಯಕ್ತಿಕ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ, ಆದರೆ ನಾನು ಸ್ವತಂತ್ರವಾಗಿ ಯಾರ ಭಯವೂ ಇಲ್ಲದೇ ಬದುಕುತ್ತಿದ್ದೀನಿ. ಹೀಗಾಗಿ ಸ್ವಾತಂತ್ರ್ಯ ಕಳೆದುಕೊಂಡ ಹಕ್ಕಿ ನಾನಲ್ಲ.

* ನೀವು ಮುಖ್ಯವಾಹಿನಿಗೆ ಬರೋದು ಯಾವಾಗ?

ನಾನು ಈಗಷ್ಟೇ ಹೇಳಿದಂತೆ ಮುಖ್ಯವಾಹಿನಿಯಲ್ಲೇ ಇದ್ದೀನಿ. ಸಿನಿಮಾದಿಂದ ಸ್ವಲ್ಪ ದೂರ ಇರುವುದರಿಂದ ಪ್ರಚಾರ ಸಿಗುತ್ತಿಲ್ಲ ಅಷ್ಟೇ. ನಾನು ಕದ್ದೂ ಮುಚ್ಚಿ ಬಾಳ್ವೆ ನಡೆಸುವ ಅಗತ್ಯವಿಲ್ಲ, ನಾನ್ಯಾವತ್ತೂ ಮೇನ್‌ಸ್ಟ್ರೀಮ್‌ನಲ್ಲೇ ಇದ್ದೇನೆ. ಸಾರ್ವಜನಿಕ ಸ್ಥಳಗಳಿಗೆ ನಾವು ಒಟ್ಟಿಗೇ ಹೋಗ್ತೀವಿ. ಎಲ್ಲರೂ ನಮ್ಮನ್ನು ನೋಡುತ್ತಿರುತ್ತಾರೆ. ಇದು ಮುಖ್ಯವಾಹಿನಿ ತಾನೆ?!

* ವೈವಾಹಿಕ ಜೀವನ ಏನನ್ನಿಸುತ್ತಿದೆ?

ನಾನು ಕುಮಾರಸ್ವಾಮಿಯವರನ್ನು ಶಾಸ್ತ್ರೋಕ್ತವಾಗೇ ಮದುವೆಯಾದವಳು. ಇವತ್ತಿಗೂ ನಾವು ತುಂಬಾ ಅನ್ಯೋನ್ಯವಾಗಿದ್ದೀವಿ. ನನಗೆ ಅವರಿಂದ ಯಾವ ಕೊರತೆಗಳೂ ಆಗಿಲ್ಲ, ಅವರು ನನಗೆ ಬರೀ ಪತಿ ಮಾತ್ರ ಅಲ್ಲ, ನನ್ನೊಂದಿಗೆ ಒಬ್ಬ ಸ್ನೇಹಿತನಂತೆ ಬೆರೆಯುತ್ತಾರೆ. ಪ್ರತಿದಿನ ನನ್ನ ಮನೆಗೆ ಬಂದು ನನ್ನ ಹಾಗೂ ಮಗಳು ಶ್ರಮಿಕಾಳೊಂದಿಗೆ ಕಾಲ ಕಳೆಯುತ್ತಾರೆ. ನಮ್ಮ ಸಾಂಸಾರಿಕ ಜೀವನದ ವಿಚಾರ ಈಗ ಗುಟ್ಟಾಗೇನೂ ಉಳಿದಿಲ್ಲ. ಪ್ರತಿದಿನ ಕುಮಾರಸ್ವಾಮಿ ಅವರು ನಮ್ಮ ಮನೆಗೆ ಬರೋದು, ಅವರ ಕಾರು ನಮ್ಮ ಮನೆ ಮುಂದೆ ನಿಲ್ಲೋದು ಎಲ್ಲರಿಗೂ ಗೊತ್ತಿರೋ ವಿಚಾರ. ನನ್ನ ಮಗಳಿಗೂ ಅವರು ಏನೂ ಕಡಿಮೆ ಮಾಡಿಲ್ಲ, ಮನೆಯವರೆಲ್ಲ ಸೇರಿ ಅವಳಿಗೆ ನಾಮಕರಣ ಮಾಡಿದೆವು. ಇತ್ತೀಚೆಗಷ್ಟೇ ಅವಳ ಹುಟ್ಟುಹಬ್ಬವನ್ನು ಸಹ ಸಂಭ್ರಮದಿಂದ ನಡೆಸಿದ್ದೇವೆ.

ಅವರು ಫ್ರೀ ಇದ್ದಾಗ ಹೊರಗೆ ಶಾಪಿಂಗ್ ಹೋಗ್ತೀವಿ. ಮೊನ್ನೆ ಮೊನ್ನೆಯಷ್ಟೇ ದೆಹಲಿ ಅಧಿವೇಶನದ ಸಂದರ್ಭದಲ್ಲಿ ನನ್ನ ಹಾಗೂ ಶ್ರಮಿಕಾ ಇಬ್ಬರನ್ನೂ ಕರೆದುಕೊಂಡು ಹೋಗಿದ್ದರು. ಡೆಲ್ಲಿಯಲ್ಲಿ ಮಾಲ್‌ಗಳಲ್ಲೆಲ್ಲಾ ತಿರುಗಾಡಿ ಬಂದ್ವಿ. ನಮ್ಮ ಮನೆಯಲ್ಲಿ ಯಾವುದೇ ದೇವತಾಕಾರ್ಯವಾಗಲಿ ಅವರು ಇದ್ದೇ ಇರುತ್ತಾರೆ. ಮೊನ್ನೆ ಕೂಡಾ ನಮ್ಮೂರಿನಲ್ಲಿ ನಾಗಪೂಜೆ ಇರಿಸಿದ್ವಿ. ಅವರು ಅಲ್ಲೂ ಪಾಲ್ಗೊಂಡಿದ್ದರು. ಯಕ್ಷಗಾನ, ಮಂಡಲ ಪೂಜೆ ಏನೇ ಇದ್ದರೂ ಅವರು ಬಂದೇ ಬರ್‍ತಾರೆ.

ಒಂದುವೇಳೆ ಅವರು ನನ್ನ ಹಾಗೂ ಮಗುವನ್ನು ನೋಡಲು ಬಂದಿಲ್ಲವೆಂದರೆ ಅಟ್‌ಲೀಸ್ಟ್ ಕಾಲ್ ಮಾಡ್ತಾನೇ ಇರ್‍ತಾರೆ. ತುಂಬಾ ಪ್ರೀತಿಯಿಂದ ಬಹಳ ಹೊತ್ತು ಫೋನ್‌ನಲ್ಲಿ ಮಾತಾಡ್ತೀವಿ. ನಿಮ್ಮ ಕಾಲ್ ಬರೋದಿಕ್ಕೆ ಮುಂಚೆ ಕೂಡಾ ಅವರೊಟ್ಟಿಗೇ ಮಾತಾಡ್ತಿದ್ದೆ...

* ಶ್ರಮಿಕಾ ಒಬ್ಬಳೇ ಮಗಳಾ?

ಹೌದು, ನಮಗೆ ಸದ್ಯಕ್ಕೆ ಅವಳೊಬ್ಬಳೇ ನಮ್ಮ ಮುದ್ದು ಮಗಳು. ಮಾಧ್ಯಮದವರು ನನಗೆ ಎರಡು, ಮೂರು ಮಕ್ಕಳಾಗಿವೆ ಎಂದೆಲ್ಲಾ ಬರೆದರು. ಅದೆಲ್ಲಾ ಶುದ್ಧ ಸುಳ್ಳು. ಅಷ್ಟೇ ಅಲ್ಲ ಮೊದಲ ಮಗು ಆಸ್ಟ್ರೇಲಿಯಾದಲ್ಲಿ ಜನಿಸಿತು ಮತ್ತು ಅದನ್ನು ನಾನು ಅಲ್ಲೇ ಯಾರ ಜೊತೆಗೋ ಬಿಟ್ಟುಬಂದಿದ್ದೀನಿ ಎಂದೆಲ್ಲಾ ಮೀಡಿಯಾದವರು ಪ್ರಚಾರ ಮಾಡಿದರು. ಆದರೆ ಅದ್ಯಾವುದೂ ನಿಜವಲ್ಲ. ಹೆತ್ತ ಮಗುವನ್ನೇ ಬೇರೆ ಯಾವುದೋ ದೇಶದಲ್ಲಿ ಬಿಟ್ಟು ಬದುಕುವ ಕಟುಕಿ ತಾಯಿ ನಾನಲ್ಲ.

* ಕುಮಾರಸ್ವಾಮಿ ಅವರ ಮನೆಯಿಂದ ನಿಮಗೇ ಯಾವುದೇ ಸಮಸ್ಯೆ ಎದುರಾಗಿದೆಯಾ?

ಇದುವರೆಗೂ ಅಂಥ ಯಾವ ಪ್ರಸಂಗವೂ ನಡೆದಿಲ್ಲ, ಯಾವ ಕಿರಿಕಿರಿಯೂ ಆಗಿಲ್ಲ, ಅವರ ಮನೆಯ ಹಿರಿಯರಿಂದ ಹಿಡಿದು ಯಾರೂ ನನಗೆ ಬೆದರಿಸಿದ್ದಾಗಲಿ ಏನೂ ನಡೆದಿಲ್ಲ.

* ಖಾಸಗಿ ಮತ್ತು ಸಿನಿಮಾ ಜೀವನದ ಮುಂದಿನ ದಾರಿ-ಗುರಿ ಏನು?

ನಾನ್ಯಾರಿಗೂ ಅನ್ಯಾಯ ಮಾಡಿಲ್ಲ. ನಾನು ಚೆನ್ನಾಗೇ ಬದುಕ್ತೀನಿ. ಮೀಡಿಯಾದವರು ಗಾಳಿಸುದ್ದಿ ಹಬ್ಬಿಸಿದಾಗ ಬೇಸರವಾಗುತ್ತೆ. ನನ್ನ ಸಹೋದರ ಆ್ಯಕ್ಟ್ ಮಾಡ್ತಾ ಇರೋ 'ಬೆಂಗಳೂರು 79' ಚಿತ್ರಕ್ಕೂ ನನಗೂ ಯಾವ ಸಂಬಂಧವೂ ಇಲ್ಲ, ಆದರೂ ಆ ಸಿನಿಮಾಗೆ ನಾನೇ ಫೈನಾನ್ಸ್ ಮಾಡ್ತಾ ಇದೀನಿ ಅಂತೆಲ್ಲಾ ಬರ್‍ದಿದಾರೆ. ಅದೆಲ್ಲ ತಪ್ಪು ಅನಿಸಿಕೆ.


ನಾನು ಸಿನಿಮಾಗಳನ್ನು ನಿರ್ಮಿಸಬೇಕೆಂದಿರುವುದು ನಿಜ. ನಾನೇ ತಂಗಿ ಪಾತ್ರದಲ್ಲಿ ನಟಿಸಲಿರುವ ಚಿತ್ರ ಆದಷ್ಟು ಬೇಗ ಸೆಟ್ಟೇರಲಿದೆ. ಈ ಸಿನಿಮಾವನ್ನು ನಾನೇ ನಿರ್ಮಿಸುತ್ತೇನೆ...

ರಾಧಿಕಾ ಇಷ್ಟು ಹೇಳುವಷ್ಟರಲ್ಲಿ ಆಕೆ ಮೊಬೈಲ್ ವ್ಯಾಪ್ತಿ ಪ್ರದೇಶದಿಂದ ಹೊರಕ್ಕೆ ಚಲಿಸಿತು. ಮೊಬೈಲ್ ಕಟ್. ಸದ್ಯ ನೆಂಟರೊಬ್ಬರ ಮದುವೆ ನಿಮಿತ್ತ ರಾಧಿಕಾ ಬಂಟ್ವಾಳಕ್ಕೆ ತೆರಳಿದ್ದಾರೆ.

ಉತ್ತಮ ಕಲಾವಿದೆಯಾದ, ಜೀವನದಲ್ಲಿ ಸಾಕಷ್ಟು ಕಷ್ಟಗಳನ್ನು ಕಂಡಿರುವ ರಾಧಿಕಾ ಈಗ ಒಂದು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ತಾಯಿಯಾಗಿ, ಮಡದಿಯಾಗಿ ಸುಖ ಸಂಸಾರದ ಭಾಗವಾಗಿದ್ದಾರೆ. ಆಕೆ ಆದಷ್ಟು ಬೇಗ ಸಿನಿಮಾರಂಗಕ್ಕೆ ಬರುವಂತಾಗಲಿ...








ಬಳ್ಳಾರಿ ಪೋಲೀಸರು ಕಳ್ಳರ ಮೈ ಮುಟ್ಟುವಂತಿಲ್ಲ

ಬಳ್ಳಾರಿ ಸೀಮೆಯಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿಲ್ಲ... ಇಂತಹುದೊಂದು ಹಳೇ ವಾಸ್ತವ ಹೊಸ ಮುಖದೊಂದಿಗೆ ಅಡಿಗಡಿಗೆ ಎದ್ದು ನಿಲ್ಲುತ್ತಿರುತ್ತದೆ. ಇದೇ ವರಸೆಯಲ್ಲಿ ಇತ್ತೀಚೆಗೆ ನಡೆದೊಂದು ಘಟನೆ ಮಾತ್ರ ತೀರಾ ಅಸಹ್ಯ ಹುಟ್ಟಿಸುವಂತಿದೆ. ಅದು ಕರ್ತವ್ಯ ನಿಷ್ಠೆಯನ್ನೇ ಉಸಿರಾಗಿಸಿಕೊಂಡಿದ್ದ ಮೂವರು ಪೇದೆಗಳ ಅಮಾನತು ವೃತ್ತಾಂತ!

ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ಪೇದೆಗಳಾದ ಎಸ್. ದಿನಕರ, ಜಗದೀಶ್ ಹಾಗೂ ಶ್ರೀನಿವಾಸ ಅಮಾನತು ಶಿಕ್ಷೆಗೆ ಗುರಿಯಾದ ಪೇದೆಗಳು. ತಮ್ಮ ಠಾಣೆಯಲ್ಲಿ ದಾಖಲಾದ ಕಳ್ಳತನದ ಕೇಸೊಂದನ್ನು ಜಾಲಾಡಿ ಕಳ್ಳರನ್ನು ಹಿಡಿಯಲು ಹೆಣಗಾಡಿದ್ದೇ ಈ ಬಡಪಾಯಿಗಳು ಮಾಡಿರುವ ಮಹಾಪರಾಧ! ಇದು ವಿಚಿತ್ರವಾದರೂ ಸತ್ಯ. ಯಾಕೆಂದರಿದು ಪ್ರತಿಯೊಂದು ವಿಚಾರದಲ್ಲೂ ರೆಡ್ಡಿ ಪಡೆಯ ಓಲೈಕೆಗೆ ನಿಲ್ಲುವ ಅಧಿಕಾರಿಗಳೇ ತುಂಬಿ ತುಳುಕುತ್ತಿರುವ ಪ್ರದೇಶ.

ಬಳ್ಳಾರಿ ತಾಲ್ಲೂಕಿನ ಶಂಕರಬಂಡೆ ಗ್ರಾಮದ ಸರ್ಕಾರಿ ಶಾಲೆಯೊಂದರಲ್ಲಿ ನಡೆದ ಬಿಸಿಯೂಟ ಸಾಮಗ್ರಿಗಳ ಕಳ್ಳತನ ಇಡೀ ವಿದ್ಯಮಾನದ ಮೂಲ. ಈ ಶಾಲೆಯಲ್ಲಿ ಗ್ಯಾಸ್ ಸಿಲೆಂಡರ್, ಒಲೆ, ಅಡುಗೆ ಪಾತ್ರೆಗಳೂ ಸೇರಿದಂತೆ ಲಕ್ಷಾಂತರ ಮೌಲ್ಯದ ವಸ್ತುಗಳು ಕಳುವಾಗಿದ್ದವು. ಈ ಬಗ್ಗೆ ಇದೇ ತಿಂಗಳ ಹದಿನೈದನೇ ತಾರೀಖಿನಂದು ಶಾಲೆಯ ಎಸ್‌ಡಿಎಂಸಿ ವತಿಯಿಂದ ದೂರು ದಾಖಲಾಗಿತ್ತು. ಠಾಣೆಯಲ್ಲಿ ಯಾವುದೇ ಕೇಸುಗಳು ಪೆಂಡಿಂಗ್ ಇರದ ಕಾರಣ ಪೇದೆಗಳಾದ ದಿನಕರ್, ಜಗದೀಶ್ ಮತ್ತು ಶ್ರೀನಿವಾಸ್ ಈ ಕಳವು ಪ್ರಕರಣದ ಬೆಂಬಿದ್ದಿದ್ದರು.

ಈ ಮೂವರು ತನಿಖೆಯ ಹಾದಿಯಲ್ಲಿರುವಾಗಲೇ ಎಸ್‌ಡಿಎಂಸಿ ಅಧ್ಯಕ್ಷ ಎರ್ರಿಸ್ವಾಮಿ ಎಂಬಾತನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ. ಇಪ್ಪಾದದ್ದೇ ದಿನದೊಪ್ಪತ್ತಲ್ಲಿ ಎರ್ರಿಸ್ವಾಮಿಯನ್ನು ಹಿಡಿದು ವಿಚಾರಣೆ ಆರಂಭಿಸಿದ್ದರು. ಲಿಂಗಾಯತ ಸಮುದಾಯದವನಾದ ಎರ್ರಿಸ್ವಾಮಿ ಇರೋ ವಿಚಾರವನ್ನು ಒದರಿ ತೆಪ್ಪಗಾಗಿದ್ದರೆ ಏನೂ ನಡೆಯುತ್ತಿರಲಿಲ್ಲ. ಆದರೀತ ಖಾಕಿ ದರ್ಶನವಾಗುತ್ತಲೇ 'ನಂಗೆ ಜನಾರ್ದನ ರೆಡ್ಡಿ ಕ್ಲೋಸು, ಶ್ರೀರಾಮುಲು ಪರಿಚಯ' ಅಂತೆಲ್ಲ ದೌಲತ್ತು ತೋರಿಸಲಾರಂಭಿಸಿದ. ಇದರಿಂದ ಮತ್ತಷ್ಟು ಅನುಮಾನಗೊಂಡ ಈ ಪೇದೆಗಳು ವಿಚಾರಣೆಯನ್ನು ಮತ್ತಷ್ಟು ತೀವ್ರಗೊಳಿಸಿದರು. ಆದರೆ ಹುಟ್ಟಾ ದರ್ಪಿಷ್ಟ ಎರ್ರಿಸ್ವಾಮಿ ಪೊಲೀಸ್ ಇಲಾಖೆಯನ್ನೇ ಕೆಟ್ಟದಾಗಿ ಜಾಲಾಡತೊಡಗಿದ. ಕಿಂಚಿತ್ತೂ ವಿಚಾರಣೆಗೆ ಸಹಕರಿಸಲಿಲ್ಲ. ಇದರಿಂದ ಪಿತ್ಥ ನೆತ್ತಿಗೇರಿಸಿಕೊಂಡ ಪೊಲೀಸು ಮಂದಿ ನಾಲ್ಕೈದು ತದುಕುತ್ತಲೇ ತಾನು ನಿರಪರಾಧಿಯೆಂದು ಎರ್ರಿಸ್ವಾಮಿ ಅಲವತ್ತುಕೊಂಡಿದ್ದಾನೆ. ಇದು ಎಸ್‌ಡಿಎಂಸಿ ಅಧ್ಯಕ್ಷನ ದ್ವೇಷದ ಕೆಲಸವೆಂಬುದು ಪೊಲೀಸರಿಗೂ ಮನದಟ್ಟಾಗಿದೆ.



ಈ ವಿಚಾರ ತಿಳಿಯುತ್ತಲೇ ಪೊಲೀಸರು ಎರ್ರಿಸ್ವಾಮಿಯೊಂದಿಗೆ ಗೌರವಯುತವಾಗಿಯೇ ನಡೆದುಕೊಂಡಿದ್ದಾರೆ. ಅಷ್ಟರಲ್ಲೇ ಈ ಎರ್ರಿಸ್ವಾಮಿ ಬಳ್ಳಾರಿಯ ಯುವ ಗಾಯಕ ಯಲ್ಲನಗೌಡ ಶಂಕರಬಂಡೆ ಎಂಬಾತನ ಮಾವನೆಂಬ ವಿಚಾರವೂ ತಿಳಿದಿದೆ. ಯಲ್ಲನಗೌಡ ಈ ಪೇದೆಗಳಿಗೆ ಪರಿಚಿತನಾದುದರಿಂದ ಆತನನ್ನೇ ಠಾಣೆಗೆ ಕರೆಸಿ ಎರ್ರಿಸ್ವಾಮಿಯನ್ನು ಬಿಟ್ಟುಕಳಿಸಿದ್ದಾರೆ. ಇಷ್ಟಕ್ಕೆ ಸುಮ್ಮನಾಗಿದ್ದರೆ ಎಲ್ಲವೂ ಸರಿಯಾಗಿರುತ್ತಿತ್ತು. ಆದರೆ ಎರ್ರಿಸ್ವಾಮಿ ತನ್ನ ಜಾತಿ ದೌಲತ್ತು, ಪುಡಿ ಕಾಂಟ್ಯಾಕ್ಟುಗಳನ್ನು ಬಳಸಿಕೊಂಡು ಇಡೀ ಪ್ರಕರಣಕ್ಕೆ ಜಾತಿ ಬಣ್ಣ ಬಳಿಯಲು ಸನ್ನದ್ಧನಾಗಿಬಿಟ್ಟ.

ಈ ವಿಚಾರ ಬಳ್ಳಾರಿ ಸೀಮೆಯ ಕೆಲಸವಿಲ್ಲದ ಕೆಲ ಅಬ್ಬೇಪಾರಿ ಲಿಂಗಾಯತರ ಪಾಲಿಗೆ ಹಬ್ಬದೂಟವಾಗಿ ಬದಲಾಯ್ತು. ಇಷ್ಟರಲ್ಲೇ ಎರ್ರಿಸ್ವಾಮಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಶರಣ ಅಧ್ಯಕ್ಷ ಗುರುಲಿಂಗನಗೌಡನ ಕಿವಿ ಚುಚ್ಚಿದ್ದ. ವಿಚಾರ ಏನು-ಎತ್ತ ಎಂಬುದನ್ನೇ ವಿಚಾರಿಸದ ಗುರುಲಿಂಗ ತನ್ನ ಗುರು ಶ್ರೀರಾಮುಲುನಿಗೆ ಏಕಾಏಕಿ ವಿಷಯ ಮುಟ್ಟಿಸಿದ. ಬಳ್ಳಾರಿಗೆ ಹೊಸದಾಗಿ ಎಸ್ಪಿಯಾಗಿ ಬಂದಿರುವ ಚಂದ್ರಗುಪ್ತ ಖಡಕ್ ಅಧಿಕಾರಿ. ಈತ ರೆಡ್ಡಿಗಳ ಯಾವ ಆಟಗಳಿಗೂ ಸೊಪ್ಪು ಹಾಕುತ್ತಿಲ್ಲ. ಇವರನ್ನು ಹ್ಯಾಗಾದರೂ ಮಾಡಿ ಎತ್ತಂಗಡಿ ಮಾಡಲು ಹೊಂಚು ಹಾಕಿ ಕೂತಿದ್ದ ರೆಡ್ಡಿಪಡೆ ಅದಕ್ಕೆ ಎರ್ರಿಸ್ವಾಮಿ ಪ್ರಕರಣವನ್ನೇ ಬಳಸಿಕೊಳ್ಳಲು ಸ್ಕೆಚ್ಚು ಹಾಕಿತು.

ಇದರನ್ವಯ ಎಸ್ಪಿಯನ್ನು ಬಿಜೆಪಿ ಲಿಂಗಾಯತ ವಿರೋಧಿ ಅಂತೆಲ್ಲ ಬಿಂಬಿಸಿದ ರೆಡ್ಡಿ ಬೆಂಬಲಿತ ದುಷ್ಟಕೂಟ ಎರ್ರಿಸ್ವಾಮಿಯನ್ನು ವಿಚಾರಣೆಗೊಳಪಡಿಸಿದ ಪೇದೆಗಳನ್ನು ಅಮಾನತುಗೊಳಿಸುವಂತೆ ಒತ್ತಡ ಹೇರತೊಡಗಿತು. ಆದರೆ ಎಸ್ಪಿ ಇದ್ಯಾವುದಕ್ಕೂ ಕ್ಯಾರೇ ಅಂದಿರಲಿಲ್ಲ. ಆದರೆ ರಾಮುಲುನ ಬೆಂಬಲದಿಂದ ಹತ್ತಿಪ್ಪತ್ತು ಮಂದಿಯೊಂದಿಗೆ ಏಕಾಏಕಿ ಠಾಣೆಗೆ ಲಗ್ಗೆಯಿಟ್ಟ ಎರ್ರಿಸ್ವಾಮಿ ಠಾಣೆಯ ಕಾಂಪೌಂಡಿನಲ್ಲೇ ಪಂಚಾಯ್ತಿ ಶುರುವಿಟ್ಟುಕೊಂಡಿದ್ದಾನೆ. ಅಲ್ಲಿಗೇ ಮೂವರು ಪೇದೆಗಳನ್ನು ಕರೆಸಿಕೊಂಡು ತಲಾ ಇಪ್ಪತ್ತು ಸಾವಿರ ಪರಿಹಾರ ಕೊಡಬೇಕು ಹಾಗೂ ಎರ್ರಿಸ್ವಾಮಿಯ ಕಾಲು ಹಿಡಿದು ಕ್ಷಮೆ ಕೇಳಬೇಕೆಂದು ಅಕ್ಷರಶಃ ಪಾಳೇಗಾರಿಕೆಯ ಠರಾವು ಹೊರಡಿಸಿದ್ದಾನೆ!

ಹೇಳಿಕೇಳಿ ಈ ಮೂವರು ಪೇದೆಗಳು ಕರ್ತವ್ಯನಿಷ್ಠೆಯನ್ನು ನೆಚ್ಚಿಕೊಂಡವರು. ಹಲವಾರು ಕ್ರಿಮಿನಲ್‌ಗಳನ್ನು ಬೇರೆಬೇರೆ ರಾಜ್ಯಗಳಿಂದ ಎಳೆದು ತಂದು ಹಿನ್ನೆಲೆಯೂ ಇವರಿಗಿದೆ. ಎಂಥದ್ದೇ ಕ... ಪ್ರಕರಣವಾದರೂ ಚಾಣಾಕ್ಷತೆಯಿಂದ, ಜೀವವನ್ನೂ ... ಭೇದಿಸುವ ಛಾತಿಯಿರುವವರು. ಇಂಥಾ ಪೆ... ಯಾವನೋ ಚಪರಾಸಿಯ ಕಾಲು ಹಿಡಿದು ಯಾ... ಕ್ಷಮೆ ಕೇಳಿಯಾರು? ಆದುದರಿಂದಲೇ 'ಪ... ಅಮಾನತುಗೊಳಿಸಿ. ತನಿಖೆಯನ್ನೂ ನಡೆಸಿ, ... ತಪ್ಪಿತಸ್ಥರೆಂದು ತಿಳಿಯುತ್ತೆ' ಅಂದು ಹೊರ ನಡೆ... ಈ ಸಂದರ್ಭದಲ್ಲೂ ಪೇದೆಗಳನ್ನು ಅಮಾನತುಗೊ... ಎಸ್ಪಿ ಚಂದ್ರಗುಪ್ತ ಒಪ್ಪಲಿಲ್ಲ. ಆದುದರಿಂದಲೆ... ಪಡೆ ಡಿವೈಎಸ್‌ಪಿಯೊಬ್ಬನ ಮೂಲಕ ಅದನ್ನ... ಪೌರುಷ ಮೆರೆಯಿತು.

ಅಸಹ್ಯದ ವಿಚಾರವೆಂದರೆ, ಕರ್ತವ್ಯನಿಷ್ಠ ಪೇ... ಅಮಾನತುಗೊಳಿಸಿದ ವಿಚಾರವನ್ನು ಕೆಲ ಪ... ಅಧಿಕಾರಿಗಳೇ ದುಂಬಾಲು ಬಿದ್ದು ಮಾಧ್ಯಮ... ತಿಳಿಸಿದರು. ಇದು ರೆಡ್ಡಿ ಪಡೆಯ ಬೂಟು ... ಓಲೈಸಿಕೊಳ್ಳುವ ದುಷ್ಟತನವಲ್ಲದೆ ಬೇರೇನೂ ...

ಅಷ್ಟಕ್ಕೂ ಈ ಪೇದೆಗಳೇನೂ ತಪ್ಪು ... ಎರ್ರಿಸ್ವಾಮಿ ಎಗರಾಡುವುದರ ಬದಲು ಇರುವ... ಹೇಳಿದ್ದರೆ ಏನೂ ಆಗುತ್ತಿರಲಿಲ್ಲ. ಅಂಥ... ಅಮಾನತು ಶಿಕ್ಷೆಗೊಳಗಾಗಿದ್ದಾರೆ. ಕರ್ತವ್ಯನಿಷ್ಠ... ಪೇದೆಗಳಿಗೆ ಈ ಸ್ಥಿತಿ ಬಂದಿರುವುದು ಯಾವ ... ರವಾನಿಸುತ್ತದೆ? ಯಾವನೋ ಅಬ್ಬೇಪಾರಿ ... ಆವರಣದಲ್ಲೇ ಪಂಚಾಯ್ತಿ ನಡೆಸುತ್ತಾನೆಂದರೆ, ... ಹಿಡಿದು ಕ್ಷಮೆ ಕೇಳಬೇಕೆಂದು ಪೊಲೀಸರಿಗೇ ಫ... ಹೊರಡಿಸುತ್ತಾನೆಂದರೆ ಏನನ್ನಬೇಕು? ಇಂಥಾ ... ಕೆಲಸಕ್ಕೆ ಕುಮ್ಮಕ್ಕು ನೀಡಿದ ರೆಡ್ಡಿ ಪಡೆಗೆ ಯಾ... ಹೊಡೆಯಬೇಕು? ಇಂಥ ಹಲವಾರು ಪ... ಬಳ್ಳಾರಿಯಾದ್ಯಂತ ಆಕ್ರೋಶವಾಗಿ ಹರಿದಾಡು...

ಆದರೆ ಈ ಬಗ್ಗೆ ಗಮನ ಹರಿಸಬೇಕಾ... ಉಸಿರಾಟದ ಲಯವನ್ನೂ ರೆಡ್ಡಿ ಪಡೆಯ ಸು... ಬಿಟ್ಟಿದ್ದಾರೆ. ಇಂಥಾ ಸ್ಥಿತಿಯಲ್ಲಿ ಪಾಳೇಗಾರಿಕೆ ವಿಜ... ಇನ್ನೇನಾದೀತು?

ಬಾಗಲಕೋಟೆ ಎಸ್ಪಿ ಗೋಯೆಲ್‌ನ ಗೋಲ್‌ಮಾಲ್ ವೃತ್ತಾಂತ

ಬಾಗಲಕೋಟೆ ಜಿಲ್ಲೆಯ ಜನರ ನಸೀಬು ಪೂರ್ತಿ ಕೈಕೊಟ್ಟಂತಿದೆ. ಇಲ್ಲಿಯ ಆರು ಮಂದಿ ಶಾಸಕರು, ಸಂಸದರು ಕೇಸರಿ ಸಂತತಿಯವರೇ ಆಗಿರುವುದರಿಂದ ಎಲ್ಲವೂ ಕೇಸರಿಮಯವಾಗಿದೆ. ಒಂದಿಡೀ ಅಧಿಕಾರಿವರ್ಗ ಆರೆಸ್ಸೆಸ್ ಮತ್ತು ಬಿಜೆಪಿಯ ಕಟ್ಟಾ ಕಾರ್ಯಕರ್ತರಾಗಿ ಬದಲಾಗಿದೆ. ಇದೆಲ್ಲದರಿಂದಾಗಿ ಜಿಲ್ಲೆಯ ಅಲ್ಪಸಂಖ್ಯಾತರು, ಪ್ರಗತಿಪರರಿಗೆ ಬರಖತ್ತಿಲ್ಲದಂತಾಗಿದೆ. ಇಂಥ ವಾತಾವರಣ ಖಡಕ್ ಪೊಲೀಸ್ ಅಧಿಕಾರಿಯೊಬ್ಬನಿಂದ ತಿಳಿಯಾಗೋ ಸಾಧ್ಯತೆಯಿದೆ. ಆದರಿಲ್ಲಿ ಆ ಸ್ಥಾನಕ್ಕೆ ವಕ್ಕರಿಸಿರುವವನು ಅಭಿಷೇಕ್ ಗೋಯಲ್ ಎಂಬ ಆಸಾಮಿ. ಪಕ್ಕದಲ್ಲೇ ಹೆಣ ಬೀಳುತ್ತಿದ್ದರೂ ಹಣಕ್ಕಾಗಿ ಹಪಾಹಪಿಸುವ ಜಾಯಮಾನದ ಈತನಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ.

ಉತ್ತರ ಭಾರತ ಮೂಲದ ಅಭಿಷೇಕ್ ಗೋಯಲ್‌ನ ಇತಿಹಾಸವನ್ನು ಎತ್ತಲಿಂದ ತಡಕಾಡಿದರೂ ಗಲೀಜುಗಳೇ

ಗೋಯಲ್ ವಿರುದ್ಧ ಪ್ರತಿಭಟನೆ....



ಮೆತ್ತಿಕೊಳ್ಳುತ್ತವೆ. ಈ ಹಿಂದೆ ಈತ ರಾಯಚೂರಿನಲ್ಲಿ ಕಸುಬು ಮಾಡಿಕೊಂಡಿದ್ದಾಗ ಗೋಯಲ್ ರಾಯಚೂರು ಜಿಲ್ಲೆಯ ಮಸ್ಕಿಯಲ್ಲೊಂದು ಪೊಲೀಸ್ ಪ್ರಾಯೋಜಿತ ಗಲಭೆ ಹುಟ್ಟುಹಾಕಿದ. ಇದರಲ್ಲಿ ದಲಿತರನ್ನು ವಿನಾಕಾರಣ ಜೈಲಿಗಟ್ಟಿ ಪೌರುಷ ಮೆರೆದಿದ್ದ. ಇದರ ವಿರುದ್ಧ ಉಗ್ರ ಪ್ರತಿಭಟನೆಗಳಾದದ್ದೇ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ಶಿವನಗೌಡ ನಾಯಕ ಗೋಯಲ್‌ನನ್ನು ಓಡಿಸಿದ್ದ.

ಅಲ್ಲಿಂದ ಸೀದಾ ಬಾಗಲಕೋಟೆಗೆ ಪೊಲೀಸ್ ವರಿಷ್ಠಾಧಿಕಾರಿಯಾಗಿ ವಕ್ಕರಿಸಿದ ಗೋಯಲ್ ಎರಡು ವರ್ಷಗಳಿಂದ ಹಳೇ ಚಾಳಿಯನ್ನೇ ಮುಂದುವರೆಸುತ್ತಿದ್ದಾನೆ. ಈತ ಅಧಿಕಾರ ವಹಿಸಿಕೊಂಡಿದ್ದೇ ಚಪರಾಸಿಯಂತೆ ಶಾಸಕ ವೀರಣ್ಣ ಚರಂತಿಮಠನ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುವ ಮೂಲಕ. ಪಕ್ಕಾ ದೀಲ್ ಮಾಸ್ಟರ್ ಆದರೆ ಚರಂತಿಮಠ 'ನನ್ ಜೋಳಿಗೀಗಿ ಒಂದಷ್ಟ ಹಾಕಿ ನೀ ಎಷ್ಟಾರ ತಿಂದ್ಕ' ಅಂತ ಹಸಿರು ನಿಶಾನೆ ತೋರಿಸಿದ್ದ. ಗೋಯಲ್ ಇಂದಿಗೂ ಅದಕ್ಕೆ ಬದ್ಧನಾಗಿಯೇ ನಡೆದುಕೊಳ್ಳುತ್ತಿದ್ದಾನೆ.

ಮೊದಮೊದಲು ಬೇಕಾಬಿಟ್ಟಿ ಮೀಟಿಂಗು ಕರೆದು ಇನ್ಸ್‌ಪೆಕ್ಟರ್‌ಗಳನ್ನು ಗುದ್ದೆ ಹಾಕಿಕೊಂಡು ಸಿಕ್ಕಾಪಟ್ಟೆ ಸ್ಟ್ರಿಕ್ಟ್ ಆಫೀಸರ್ ಎಂಬಂತೆ ಪೋಸು ಕೊಡತೊಡಗಿದ. ಒಂದೇ ಒಂದು ದೂರು ಬಂದರೂ ಸುಮ್ನೆ ಬಿಡೋದಿಲ್ಲ ಅಂತೆಲ್ಲ ಆವಾಜು ಹಾಕಿದ. ಇದೆಲ್ಲ ಪತ್ರಿಕೆಗಳಲ್ಲಿ ಬರುವಂತೆಯೂ ನೋಡಿಕೊಂಡಿದ್ದ. ಅದಾಗಲೇ ಪೊಲೀಸರ ಹಫ್ತಾ ವಸೂಲಿ, ದೌರ್ಜನ್ಯಗಳಿಂದ ಕಂಗಾಲಾಗಿದ್ದ ಸಾರ್ವಜನಿಕರು ದೂರು ನೀಡಲು ಶುರುಮಾಡಿದರು. ತದನಂತರ ಅಸಲಿ ವರಸೆ ಶುರುವಿಟ್ಟುಕೊಂಡ ಗೋಯಲ್ ದೂರುದಾರನಿಗೆ ತಕ್ಷಣ ಒಂದು ಸಾವಿರ ಇನಾಮು ನೀಡಿ ನಂತರ ತರಹೇವಾರಿ ರೀತಿಯಲ್ಲಿ ಅವರಿಂದಲೇ ಹಣ ಪೀಕಲು ಶುರುವಿಟ್ಟ. ಈ ದಂಧೆಗೆ ಮಧ್ಯವರ್ತಿಗಳನ್ನಿಟ್ಟುಕೊಳ್ಳದಿರುವುದು ಈತನ ಜಾಣತನಕ್ಕೆ ನಿದರ್ಶನ.

ಸಾರ್ವಜನಿಕರಿಂದ ಯಾವುದಾದರೂ ದೂರು ಬಂದರೆ ಇನ್ಸ್‌ಪೆಕ್ಟರ್‌ಗಳನ್ನೇ ಬ್ಲ್ಯಾಕ್‌ಮೇಲ್ ಮಾಡುವುದು ಗೋಯಲ್‌ನ ಖಯಾಲಿ. ಈತ ಎಲ್ಲಾ ಹಣವನ್ನೂ ತಾನೇ ಗೆಬರುವ ಉದ್ದೇಶದಿಂದ ರೇಡು ನಡೆಸಿ ಹಿಗ್ಗಾಮುಗ್ಗ ತದುಕಿಸಿಕೊಂಡ ಉದಾಹರಣೆಗಳು ಸಾಕಷ್ಟಿವೆ. ಇದೇ ರೀತಿ ಅಡಕಲ್ ಗ್ರಾಮದ ಇಸ್ಪೀಟ್ ಅಡ್ಡೆಗಳ ಮೇಲೆ ರೇಡು ನಡೆಸಿದ ಗೋಯಲ್‌ಗೆ ಅಲ್ಲಿದ್ದವರೇ ಹಿಡಿದು ತದುಕಿದ್ದರು. 'ನಾವು ಬಾದಾಮಿ ಇನ್ಸ್‌ಪೆಕ್ಟರ್ ಧೂಳಖೇಡಗೆ ಭಕ್ಷೀಸು ಕೊಟ್ಟೇ ಕ್ಲಬ್ ಚಾಲೂ ಮಾಡೇವಿ, ಗೋಯಲ್‌ಗೆ ತಾಕತ್ತಿದ್ರೆ ಧೂಳಖೇಡನನ್ನು ವಿಚಾರಿಸಲಿ. ಸಸ್ಪೆಂಡ್ ಮಾಡಲಿ' ಅಂತ ದಂಧೆ ನಡೆಸುವವರು ಬಹಿರಂಗವಾಗಿಯೇ ತಿರುಗೇಟು ನೀಡಿದ್ದರು.

ಮೇಲ್ಕಂಡ ವಾದದಲ್ಲಿ ಸತ್ಯವಿದೆ. ಈ ಧೂಳಖೇಡ ಗೋಯಲ್‌ನನ್ನೇ ನಿವಾಳಿಸಿ ಬಿಸಾಡುವಂಥ ಎತ್ತುವಳಿ ಗಿರಾಕಿ. ಬಾದಾಮಿ ಲಾಡ್ಜ್‌ಗಳು ಹಾಗೂ ಊರ ಹೊರಗಿನ ವೇಶ್ಯಾ ದಂಧೆಕೋರರೇ ಈತನ ಹಣದ ಮೂಲ. ಇನ್ನು ಸಾರಾಯಿ, ಮಟ್ಕಾದಂಥ ಕಸುಬುಗಳೂ ಕೂಡಾ ಧೂಳಖೇಡನಿಗೆ ಕಮಾಯಿ ತರುತ್ತವೆ. ಇದೆಲ್ಲ ತನಗೇ ಸಿಗಲಿ ಎಂಬ ಹಪಾಹಪಿಯಿಂದ ಗೋಯಲ್ ರೇಡಿನ ನಾಟಕವಾಡಿದ್ದ. ಆದರೆ ಸಾರ್ವಜನಿಕರಿಂದ ಧೂಳಕೇಡನ ವಿರುದ್ಧ ದಂಡಿದಂಡಿ ದೂರುಗಳು ಬಂದರೂ ಆತನನ್ನು ಅಮಾನತ್ತುಗೊಳಿಸುವ ತಾಖತ್ತು ಗೋಯಲ್‌ಗಿಲ್ಲ.



ಗೋಯಲ್

ಭಾರಿ ಖಡಕ್ಕು ಅಂತ ಬಿಂಬಿಸಿಕೊಳ್ಳುವ ಗೋಯಲ್‌ನ ಕಣ್ಣೆದುರಿಗೇ ಕಳ್ಳಭಟ್ಟಿ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಈತನ ಕಚೇರಿ ಹಿಂದೆಯೇ ಇರುವ ಗದ್ದನಕೇರಿ ತಾಂಡಾ, ಮುಚಗಂಡಿ ತಾಂಡಾಗಳಲ್ಲಿ ಭಟ್ಟಿ ಸಾರಾಯಿ ನೀರನ್ನೇ ಮೀರಿಸಿ ಚೆಲ್ಲಾಡುತ್ತಿದೆ. ಭಟ್ಟಿ ಸಾರಾಯಿಯನ್ನು ಹಾಡುಹಗಲೇ ದ್ವಿಚಕ್ರವಾಹನಗಳಲ್ಲಿ ಈತನ ಕಚೇರಿ ಮುಂದೆಯೇ ಸಾಗಿಸಲಾಗುತ್ತದೆ. ಈ ತಾಂಡಾದ ಹೂವಪ್ಪ ರಾಠೋಡ್ ಜಿಪಂ ಅಧ್ಯಕ್ಷನಾದ ಮೇಲಂತೂ ಆಡಳಿತ ಭವನದಲ್ಲೇ ಭಟ್ಟಿ ಸಾರಾಯಿಯ ದುಖಾನು ತೆರೆದಂತಾಗಿದೆ. ಆದರೆ ಖಡಕ್ಕು ಗೋಯಲ್ ಕೈಲಾಗದವನಂತೆ ತೆಪ್ಪಗಿದ್ದಾನೆ.

ಕೆಲ ತಿಂಗಳುಗಳ ಹಿಂದೆ ಇದೇ ತಾಂಡಾಗಳ ಹತ್ತಿರ ಅಮಾನವೀಯ ಘಟನೆಯೊಂದು ನಡೆದಿತ್ತು. ಕಳ್ಳಬಟ್ಟಿ ಹೇರಿಕೊಂಡು ಯದ್ವಾತದ್ವಾ ಬೈಕು ಓಡಿಸುವ ಹುಡುಗರು ದಲಿತ ಹುಡುಗಿಯೊಬ್ಬಳ ಜೀವವನ್ನೇ ತೆಗೆದಿದ್ದರು. ಆದರೆ ಗೋಯಲ್ ಈ ಬಗ್ಗೆ ತುಟಿಪಿಟಕ್ಕೆಂದಿಲ್ಲ. ಇದು ಸಾರಾಯಿ ಮಾಫಿಯಾ ಇಡೀ ಇಲಾಖೆಯನ್ನೇ ಕಂಟ್ರೋ... ಕೊಂಡಿರುವುದಕ್ಕೆ ಸ್ಪಷ್ಟ ಉದಾಹರಣೆ.

ಮೊನ್ನೆ ನಗರದಲ್ಲಿ ವಿಕ್ಷಿಪ್ತ ಘಟನೆಯೊಂದು ... ಆಚಾನಕ್ಕಾಗಿ ಓರ್ವ ಮಹಿಳೆ ಹಾಗೂ ಆಟೋ ... ನಡುವೆ ಜಗಳ ನಡೆದ... ಮಿಲಾಯಿಸುವ ಹಂತ ತ... ಜಗಳ ನಡೆಯುತ್ತಿರುವುದ... ಮತ್ತು ಮುಸ್ಲಿಮ್ ಕ... ನಡುವೆ ಎಂದರಿತ ಕೆಲ ... ಗಳು ಹಠಾತ್ತನೆ ಸೋಡಾ... ಎಸೆದಿದ್ದರು. ಇಬ್ಬರೂ ... ಗೊಂಡು ಆಸ್ಪತ್ರೆ ... ತರುವಾಯ ಎರಡೂ ... ಹಿರೀಕರು ಸೇರಿ ... ಪರಿಹರಿಸಿಕೊಳ್ಳಲು ... ಠಾಣೆಗೆ ತೆರಳಿದರು. ... ನಡುವೆ ಕೆಲ ಭಜರಂಗಿ ... ಗಳು ಈ ಘಟನೆಗೆ ... ಮುಸ್ಲಿಂ ಗಲಭೆಯ ಬಣ್ಣ ... ಇದನ್ನೇ ಮುಂದಿಟ್ಟುಕೊಂಡು ಗೋಯಲ್ ... ಇತ್ಯರ್ಥಕ್ಕೆ ಬಂದವರ ಮೇಲೆ ಕೇಸು ಜಡಿ... ದಬ್ಬಿದ್ದ. ಹಲವು ದಲಿತ-ಮುಸ್ಲಿಮರನ್ನು ಠಾಣೆಗೆ ಕರೆ... ಕಾಟ ಕೊಟ್ಟಿದ್ದ. ಮೂರ್ಖ ಗೋಯಲ್ ಇಷ್ಟೆಲ್ಲಾ ... ನಡೆಸಿದ್ದು ಜಿಲ್ಲಾಸ್ಪತ್ರೆಯ ಮುಖ್ಯ ವೈದ್ಯಾಧಿಕಾ... ದೂರು ಪಡೆಯುವ ಮೂಲಕ!

ದುರಂತವೆಂದರೆ ಸ್ವತಃ ದಲಿತನಾಗಿರುವ ... ಉಸ್ತುವಾರಿ ಸಚಿವ ಕಾರಜೋಳ ತನ್ನದೇ ಜನ... ದೌರ್ಜನ್ಯವಾಗುತ್ತಿದ್ದರೂ ಏನೂ ಆಗದಂತಿದ್ದಾನೆ. ... ಸಂಬಂಧಿಸಿದಂತೆ ಸ್ಥಳಕ್ಕೆ ಭೇಟಿ ನೀಡಿ ಪರಿ... ಸೌಜನ್ಯವನ್ನೂ ಆತ ತೋರಿಸಿಲ್ಲ. ಪ್ರಗತಿಪರರು... ಸಂಘಟನೆಗಳು ಹಾಗೂ ಕೋಮು ಸೌಹಾರ್ದ ವೇ... ಹೋರಾಟಗಳಿಂದಾಗಿ ದಲಿತರಿಗೆ ಅಲ್ಪಸಂಖ್ಯಾತರಿಗೆ ... ದೊರೆತಿದೆಯಾದರೂ ಪೊಲೀಸರ ದೌರ್ಜನ್ಯ ... ಲಾಗಿದೆ.

• ಮೇಘ...

ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ.

ಬಲವೀರಾ ರೆಡ್ಡಿ ಲೂಟಿ ಮಾಡಿದ್ದೆಷ್ಟು?


ಬಲವೀರಾ ರೆಡ್ಡಿ

ಧಿಮಾಯಿತಿ ಕೆಲಸಕ್ಕೆ ಲಾಯಕ್ಕಾದವನನ್ನು ಯೂನಿವರ್ಸಿಟಿಯೊಂದಕ್ಕೆ ವೈಸ್ ಚಾನ್ಸಲರ್ ಮಾಡಿದರೆ ಅದು ಉದ್ಧಾರವಾಗಲು ಸಾಧ್ಯವೆ?

ಇದು ಡಾ. ಬಲವೀರಾ ರೆಡ್ಡಿಗೆ ಸಂಬಂಧಿಸಿದ ವಿಚಾರ.

ನೋಡಲು ಘಡವನಂತೆ ಕಾಣುವ ಬಲವೀರಾ ರೆಡ್ಡಿ ಕಳೆದ ವರ್ಷದವರೆಗೂ ಬೆಳಗಾಂನಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ.ಯ ಉಪಕುಲಪತಿಯಾಗಿದ್ದವ. ಈಗ ಡಾ. ಮಹೇಶಪ್ಪ ವಿಸಿಯಾಗಿದ್ದಾರೆ. ಆದರೆ ಲಂಚಕೋರ ಬಲವೀರಾ ರೆಡ್ಡಿ ಇಲ್ಲಿ ನಡೆಸಿ ಹೋಗಿರುವ ಹಗರಣಗಳು, ಲೂಟಿ, ಅರಾಜಕತೆಯನ್ನು ರಿಪೇರಿ ಮಾಡಬೇಕೆಂದರೆ ಮಹೇಶಪ್ಪನವರು ಇನ್ನೂ ಎರಡು ವರ್ಷ ಕಷ್ಟಪಡಬೇಕಿದೆ.

ಆದರೆ ಇತ್ತೀಚೆಗೆ ವಿಟಿಯೂನಲ್ಲಿ ನಡೆಯುತ್ತಿರುವ ಘಟನಾವಳಿಗಳನ್ನು ನೋಡಿದರೆ ಕಳ್ಳ ಬಲವೀರಾ ರೆಡ್ಡಿಯ ಹಗರಣ ಗಳನ್ನು ಮುಚ್ಚಿ ಹಾಕುವ ವ್ಯವಸ್ಥಿತ ಪಿತೂರಿಯೊಂದು ಚಾಲೂ ಆಗಿರು ವುದು ಕಂಡುಬರುತ್ತಿದೆ. ಬಿಜೆಪಿ ಸರ್ಕಾರದ ಮಂತ್ರಿಗಳು, ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ನಾಯಕರು ಒಟ್ಟಿಗೆ ಸೇರಿ ಬಲವೀರಾ ರೆಡ್ಡಿಯ ರಕ್ಷಣೆಗೆ ನಿಲ್ಲುತ್ತಿದ್ದಾರೆ.



ಇಡೀ ಇಂಡಿಯಾದಲ್ಲೇ ಅತ್ಯಂತ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿರುವ ಹಾಗೂ ಕರ್ನಾಟಕದ ಹೆಮ್ಮೆಯ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ಆಂಧ್ರ ಮೂಲದ ಬಲವೀರಾ ರೆಡ್ಡಿಯ ಕಪಿಮುಷ್ಠಿಗೆ ಸಿಲುಕಿ ನಿತ್ರಾಣಗೊಂಡಿತ್ತು. ಸತತ ಹನ್ನೊಂದು ವರ್ಷಕಾಲ ಈ ವಿವಿಯಲ್ಲಿ ಅಧಿಕಾರ ಹಿಡಿದಿದ್ದ ಬಲವೀರಾ ರೆಡ್ಡಿ ಈಗ ಬೆಂಗಳೂರಿನ ಎಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಭರ್ಜರಿ ಬಂಗಲೆ ಕಟ್ಟಿಸಿಕೊಂಡು ತಳವೂರಿದ್ದಾನೆ. ಅವನೀಗ ಕನಿಷ್ಠ 50 ಕೋಟಿ ರೂಪಾಯಿಗಳ ಕುಳ!

ಬಲವೀರಾ ರೆಡ್ಡಿ ಈಗ್ಗೆ 20 ವರ್ಷಗಳ ಹಿಂದೆ ಕೈಲಿ ಬರೀ ಒಂದು ಬಟ್ಟೆ ಬ್ಯಾಗ್ ಹಿಡಿದುಕೊಂಡು ಬೆಂಗಳೂರಿಗೆ ಬಂದವನು. ಆಗ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಪ್ರೊ. ಭಂಡಾರಿಯವರನ್ನು ಕಾಡಿಬೇಡಿ ಒಂದು ಕೆಲಸ ಗಿಟ್ಟಿಸಿಕೊಂಡಿದ್ದ ನಂತರ ಹಾಗೇ ಬೇರು ಬಿಟ್ಟುಕೊಂಡು ಸಂಸ್ಥೆಯ ಹಂಗಾಮಿ ತಾಂತ್ರಿಕ ನಿರ್ದೇಶಕನೂ ಆದ. ಕೆಲಕಾಲ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕನಾಗಿದ್ದ. ಸುರತ್ಕಲ್‌ನ ಇಂಜಿನಿಯರಿಂಗ್ ಕಾಲೇಜ್‌ನಲ್ಲೂ ಪಾಠ ಮಾಡಿಕೊಂಡಿದ್ದ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಡಿ.ಕೆ. ಶಿವಕುಮಾರ್‌ನಿಗೆ ಒಂದಷ್ಟು ದುಡ್ಡು ತಿನ್ನಿಸಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಗೆ ವಕ್ಕರಿಸಿಕೊಂಡ. ಅದು ಹೆಗ್ಗಣವೇ ಭತ್ತದ ಕಣಜ ಹೊಕ್ಕಂತಾಗಿ ಹೋಯಿತು. ಆರು ವರ್ಷ ಕಾಲ ವಿಟಿಯೂನ ವೈಸ್ ಛಾನ್ಸಲರ್ ಆಗಿದ್ದ ರೆಡ್ಡಿ ದಿನ ಬೆಳಗಾದರೆ ದುಡ್ಡು ಕದಿಯುವುದು, ಪರ್ಸೆಂಟೇಜ್ ಡೀಲು ಕುದುರಿಸುವುದನ್ನೇ ಕಸುಬು ಮಾಡಿಕೊಂಡ. ಇವನು 2007 ರಲ್ಲಿ ವಿಶ್ವವಿದ್ಯಾಲಯ ಬಿಟ್ಟು ತೊಲಗುವ ಗಳಿಗೆ ಬಂದಾಗ ಹಲವು ಕೋಟಿ ರೂಪಾಯಿಗಳ ಹಗರಣ ಆಗಿಹೋಗಿತ್ತು. ಬಲವೀರಾ ರೆಡ್ಡಿಯ ಹಗರಣಗಳ ಬಗ್ಗೆ ಆಡಿಟರ್ ಜನರಲ್ ಆಫ್ ಇಂಡಿಯಾ ನೀಡಿರುವ ವರದಿಗಳನ್ನು ನೋಡಿದರೆ ದಿಗ್ಭ್ರಮೆಯಾಗುತ್ತದೆ. ರೆಡ್ಡಿ ನಿವೃತ್ತನಾದ ನಂತರವೂ ಏಳು ತಿಂಗಳು ವಿಸಿಯಾಗೇ ಅಕ್ರಮವಾಗಿ ಮುಂದುವರೆದಿದ್ದ. ನಂತರ ಪ್ರೊ. ಎಚ್.ಪಿ. ಖಿಂಚಾ ವಿಸಿಯಾಗಿ ಬಂದವರು ರೆಡ್ಡಿಯ ಹಗರಣಗಳನ್ನು, ಆಡಿಟ್ ವರದಿಗಳನ್ನು ಗಮನಿಸಿ ಕ್ರಮ ಆರಂಭಿಸಿದ್ದರು. ಆಗ ಹೇಗೊ ಮಾಡಿ ಉತ್ತರಿಸದೆ ತಪ್ಪಿಸಿಕೊಂಡ ರೆಡ್ಡಿ, ಇವನು ಖಿಂಚಾ ಬರೆಯುತ್ತಿದ್ದ ಯಾವ ಪತ್ರಕ್ಕೂ ಉತ್ತರ ಕೊಡುತ್ತಿರಲಿಲ್ಲ. ತನ್ನ ಆಡಳಿತಾವಧಿಯ ಹಗರಣಗಳಿಗೆ ಸಮಜಾಯಿಷಿಯನ್ನು ನೀಡುತ್ತಿರಲಿಲ್ಲ. ನಂತರ 2010 ರ ಜೂನ್‌ನಲ್ಲಿ ಖಿಂಚಾ ನಿವೃತ್ತರಾಗಿ ಡಾ. ಮಹೇಶಪ್ಪ ವಿಸಿಯಾಗಿ ಬಂದರು. ಬಲವೀರಾ ರೆಡ್ಡಿಗೆ ತನ್ನ ಹಗರಣಗಳು ಮತ್ತೆ ಎಲ್ಲಿ ಹೊರಬೀಳುತ್ತವೋ ಎಂದು ಗಾಬರಿಯಾಯಿತು. ಮಹೇಶಪ್ಪನವರಿಗೆ ವಿಸಿ ಹುದ್ದೆ ತಪ್ಪಿಸಿ ತನ್ನ ಚೇಲಾ ಶಿವಕುಮಾರನಿಗೆ ಆ ಸ್ಥಾನ ಕೊಡಿಸಲು ರೆಡ್ಡಿ ಲಾಬಿ ಮಾಡಿದ್ದ. ಆದರೆ ಅದು ಕೈಗೂಡಲಿಲ್ಲ. ಈಗ ವಿಸಿ ಡಾ. ಮಹೇಶಪ್ಪ ತನ್ನ ಕಾಲದ ಹಗರಣಗಳನ್ನು ಕೆದಕದಂತೆ ಮಾಡಲು ಅವರ ವಿರುದ್ಧವೇ ವಿವಾದ ಸೃಷ್ಟಿಸಲು ರೆಡ್ಡಿ ತಂತ್ರ ಹೂಡಿದ್ದಾನೆ. ಕೆಲ ತಿಂಗಳ ಹಿಂದೆ ಎಬಿವಿಪಿಯವರು 'ಡಾ. ಮಹೇಶಪ್ಪರಿಗೆ ವಿಸಿಯಾಗುವ ಅರ್ಹತೆ ಇಲ್ಲ' ಎಂದು ಪ್ರತಿಭಟಿಸಿದ್ದೂ ಕೂಡ ರೆಡ್ಡಿ ಕುದುರಿಸಿದ್ದ ಡೀಲ್ ಆಗಿತ್ತು.


ರೆಡ್ಡಿ ಲೂಟಿ-ಆಡಿಟ್ ಚಾಟಿ

ಶಿಕ್ಷೆಯಾಗುವುದಾದರೆ ಉಳಿದ ಜೀವನ ಪೂರ್ತಿ ಜೈಲಿನಲ್ಲೇ ಇರಬೇಕಾದಷ್ಟು ಹಗರಣಗಳು ರೆಡ್ಡಿ ಆಡಳಿತದಲ್ಲಿ ನಡೆದಿದೆ. ಆಡಿಟ್ ವರದಿಯ ಅಧಿಕೃತ ದಾಖಲೆಗಳ ಒಂದು ರಾಶಿ ಇವೆ. ವಿವಿಗೆ ಕಂಪ್ಯೂಟರ್, ವೈಟ್‌ಬೋರ್ಡ್, ಲ್ಯಾಪ್‌ಟಾಪ್, ಫರ್ನಿಚರ್, ಸರಬರಾಜು ಡೀಲ್‌ಗಳಲ್ಲಿ ಬ್ಯಾರಿಂಗ್‌ಟನ್ ಲಿಮಿಟೆಡ್, ಲಿಕ್ವಿಡ್ ಕ್ರಿಸ್ಟಲ್, ಸಂಯುಕ್ತ ಕನ್‌ಸಲ್‌ಟೆನ್ಸಿ ಕಂಪನಿಗಳವರು ರೆಡ್ಡಿ ಜೊತೆ ಶಾಮೀಲಾಗಿ ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆದಿದ್ದಾರೆ.

ಇಂಜಿನಿಯರಿಂಗ್ ವಿದ್ಯಾರ್ಥಿಗಳ ಉಪಯೋಗಕ್ಕೆಂದು ಎರಡು ಕೋಟಿ ರೂಪಾಯಿ ತೆತ್ತು 412 ಲ್ಯಾಪ್‌ಟಾಪ್ ಖರೀದಿಸಿದ್ದ ರೆಡ್ಡಿ, ಇದಕ್ಕೆ ಒಂದು ಟೆಂಡರ್ ಇಲ್ಲ, ಕೊಟೇಶನ್ನು ಕರೆದಿರಲಿಲ್ಲ. ಸರಾಸರಿ ಅರವತ್ತೊಂದು ಸಾವಿರ ರೂಪಾಯಿ ಬೆಲೆತೆತ್ತು ತರಿಸಿದ ಲ್ಯಾಪ್‌ಟಾಪ್‌ಗಳ ಪೈಕಿ ಅರ್ಧದಷ್ಟೂ ವಿದ್ಯಾರ್ಥಿಗಳಿಗೆ ತಲುಪದೆ ವ್ಯರ್ಥವಾಗಿ ಬಿದ್ದಿದ್ದವು.

ಈ ಡೀಲ್‌ನಲ್ಲಿ ಬ್ಯಾರಿಂಗ್‌ಟನ್ ಲಿಮಿಟೆಡ್ ಹಾಗೂ ಬಲವೀರಾ ರೆಡ್ಡಿ ಕನಿಷ್ಠವೆಂದರೂ ಒಂದು ಕೋಟಿ ರೂಪಾಯಿ ಕದ್ದಿದ್ದಾರೆ.

ಹೊಸ ಕಟ್ಟಡಗಳ ನಿರ್ಮಾಣವೆಂದು ಹೊರಟು 24.72 ಲಕ್ಷಕ್ಕೆ ಎಸ್ಟಿಮೇಟ್ ಮಾಡಿದ್ದರೂ ಕಂಟ್ರಾಕ್ಟರ್‌ಗೆ ಹೆಚ್ಚುವರಿಯಾಗಿ 31.12 ಲಕ್ಷ ದಾಟಿಸಿ ಅಲ್ಲೂ ಹಣ ನುಂಗಿದ್ದಾನೆ.



ಕಾಲೇಜ್‌ಗಳಿಗೆ ವೈಟ್ ಬೋರ್ಡ್ ಕೊಡಿಸುತ್ತೇನೆಂದು ನಂಬಿಸಿ ಸಂಯುಕ್ತ ಕನ್‌ಸಲ್‌ಟೆನ್ಸಿಯವರಿಗೆ ಕಾನೂನುಬಾಹಿರವಾಗಿ ಸರಬರಾಜು ಆದೇಶ ಕೊಟ್ಟು 1.31 ಕೋಟಿ ರೂಪಾಯಿ ಕೊಡಿಸಿ ಡೀಲ್ ಮಾಡಿಕೊಂಡಿದ್ದ.

ಇನ್ನು ವಿವಿಯ ಪ್ರಿಂಟಿಂಗ್ ಕೆಲಸಗಳನ್ನು ಬೆಳಗಾಂನ ವಿಕ್ರಾಂತ್ ಆಫ್‌ಸೆಟ್ ಪ್ರಿಂಟರ್ಸ್ ಹಾಗೂ ಬೆಂಗಳೂರಿನ ಗೀತಾಂಜಲಿ ಗ್ರಾಫಿಕ್ಸ್‌ನವರಿಗೆ ನಿಯಮ ಉಲ್ಲಂಘಿಸಿ ಕೊಟ್ಟಿದ್ದ. ಇದರ ಮೊತ್ತ ಐವತ್ತು ಲಕ್ಷ ರೂಪಾಯಿ ಮೀರಿದ್ದು ಅಲ್ಲೂ ರೆಡ್ಡಿ ಪರ್ಸೆಂಟೇಜ್ ಬಾಚಿಕೊಂಡಿದ್ದಾನೆ.

ಇಂತಹ ಇನ್ನೂ ಒಂದು ಡಜನ್ ಹಗರಣಗಳನ್ನು ಮಾಡಿ ಹೆಬ್ಬಾವಿನಂತೆ ಹಣ ನುಂಗಿ ತೊಲಗಿರುವ ಬಲವೀರಾ ರೆಡ್ಡಿಗೆ ಈಗಲೂ ವಿಟಿಯು ಅನ್ನು ಕಂಟ್ರೋಲ್‌ನಲ್ಲಿಟ್ಟುಕೊಳ್ಳುವ ಆಸೆಯಿದೆ. ಹಾಗಾಗಿ ಹಾಲಿ ವಿಸಿ ಡಾ. ಮಹೇಶಪ್ಪ ವಿರುದ್ಧ ತರಲೆ ತೆಗೆಯಲು ನಾನಾ ತರದ ಗುಂಪುಗಳನ್ನು ಎತ್ತಿಕಟ್ಟಿ ಛೂ ಬಿಡುತ್ತಿದ್ದಾನೆ.

ಈ ನೀಚ ರೆಡ್ಡಿ ಆಡಿಟ್ ಆಕ್ಷೇಪಣೆಗಳ ಬಗ್ಗೆ ಒಮ್ಮೆಯೂ ವಿವರ ನೀಡಿಲ್ಲ, ಕದ್ದ ಹಣವನ್ನು ವಿವಿಗೆ ಹಿಂತಿರುಗಿಸಿಯೂ ಇಲ್ಲ.

ಚಾಲೆಂಜ್ ಮರುಮೌಲ್ಯಮಾಪನ ವಿವಾದ

ವಿಟಿಯೂನಲ್ಲಿ ಈಗ ಚಾಲೆಂಜ್ ರಿವ್ಯಾಲುಯೇಶನ್ ಬಗ್ಗೆ ಅವ್ಯವಹಾರದ ವಿವಾದ ಎಬ್ಬಿಸಲಾಗಿದೆ. ಬಲವೀರಾ ರೆಡ್ಡಿಯೇ ಇದರ ಹಿಂದೆ ಇದ್ದಾನೆ. ಇದನ್ನರಿಯದ ಇಲಾಖಾ ಕಾರ್ಯದರ್ಶಿ ಮದನ್ ಗೋಪಾಲ್ ವಿವಿ ಕಾಯ್ದೆಯ ನಿಯಮಗಳನ್ನೂ ಅರ್ಥಮಾಡಿಕೊಳ್ಳದೆ ಮೂವರು ಸದಸ್ಯರ ಒಂದು ಸಮಿತಿಯನ್ನು ತನಿಖೆಗಾಗಿ ನೇಮಿಸಿದ್ದಾರೆ. ಆದರೆ ಈ ಸಮಿತಿಯಲ್ಲಿರುವ ಡಾ. ಎಂ.ಎಸ್. ಶಿವಕುಮಾರ್ ಹಾಗೂ ಎಚ್.ವಿ. ಸುಧಾಕರ ನಾಯಕ್ ಇಬ್ಬರೂ ಅದೇ ವಿವಿಯ ಮಾಜಿ ರಿಜಿಸ್ಟ್ರಾರ್‌ಗಳಾಗಿದ್ದಾರೆ. ಇನ್ನೊಬ್ಬ ಸದಸ್ಯ ಡಾ. ವಿ. ಶ್ರೀಧರ್ ಸಹ ಇದೇ ವಿವಿಯ ಮಾಜಿ ಪರೀಕ್ಷಾ ವಿಭಾಗದ ರಿಜಿಸ್ಟ್ರಾರ್ ಆಗಿದ್ದರು. ಒಟ್ಟಾರೆ ಇವರೆಲ್ಲಾ ಬಲವೀರಾ ರೆಡ್ಡಿಯ ಬಳಗದವರೇ ಆಗಿದ್ದು ಇವರ ಸಮಿತಿ ನಡೆಸುವ ತನಿಖೆ ಹಾಗೂ ನೀಡಬಹುದಾದ ವರದಿಯ ಬಗ್ಗೆ ಯಾರಿಗೂ ನಂಬಿಕೆ ಇಲ್ಲದಂತಾಗಿದೆ.

ಸರ್ಕಾರ ಈಗಲಾದರೂ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ.ಯ ಸಮಸ್ಯೆಗಳನ್ನು ಸರಿಯಾಗಿ ಬಗೆಹರಿಸಲು ಯೋಚಿಸಬೇಕಿದೆ. ಬಹಳ ಮುಖ್ಯವಾಗಿ ಮಾಜಿ ವಿಸಿ ಡಾ. ಬಲವೀರಾ ರೆಡ್ಡಿಯು ಕೋಟ್ಯಂತರ ರೂಪಾಯಿ ಲೂಟಿ ಮಾಡಿ ಪರಾರಿಯಾಗಿರುವ ವಿಚಾರದ ಬಗ್ಗೆ ಗಮನಹರಿಸಿ ಕಾನೂನು ಕ್ರಮ ಜರುಗಿಸಬೇಕಿದೆ.

• ಪಾರ್ವತೀಶ

ಭ್ರಷ್ಟ ರೆಡ್ಡಿಗೆ ಎಬಿವಿಪಿ ಬೆಂಬಲ!

ಕರ್ನಾಟಕದ ಶಿಕ್ಷಣ ಕ್ಷೇತ್ರವನ್ನೆಲ್ಲಾ ತೊಳೆದು ಶುಚಿ ಮಾಡುವ ಸ್ಲೋಗನ್ ಹಾಕುತ್ತಿರುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಅರ್ಥಾತ್ ಎಬಿವಿಪಿ ಸಂಘಟನೆಗೂ ಬಲವೀರಾ ರೆಡ್ಡಿಗೂ ಇರುವ ಒಳಸಂಬಂಧ ಯಾವ ತರದ್ದು?

ಈ ಪ್ರಶ್ನೆ ಏಕೆಂದರೆ ಮೈಸೂರು ವಿವಿಯ ಶಶಿಧರ ಪ್ರಸಾದ್, ಬಿಜಾಪುರದ ಮಹಿಳಾ ವಿವಿಯ ಸಯೀದಾ ಅಖ್ತರ್ ವಿಸಿಗಳಾಗಿದ್ದಾಗ ನಡೆದಿರುವ ತಪ್ಪುಗಳು ಹಗರಣಗಳ ವಿರುದ್ಧ ಎಬಿವಿಪಿ ಧ್ವನಿ ಎತ್ತಿತ್ತು. ಹಾಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಹೊಸ ಉಪಕುಲಪತಿ ಡಾ. ಮಹೇಶಪ್ಪ ವಿರುದ್ಧವೂ ಯಾವುದೇ ಹಗರಣವಿಲ್ಲದಿದ್ದರೂ ಎಬಿವಿಪಿಗಳು ಗಲಾಟೆ ಎಬ್ಬಿಸಿದ್ದಾರೆ. ಆದರೆ ವಿಟಿಯುನ ಮಾಜಿ ವಿಸಿ ಬಲವೀರಾ ರೆಡ್ಡಿ ಕೋಟ್ಯಂತರ ರೂಪಾಯಿ ಲೂಟಿ ಮಾಡಿ ಸಿಕ್ಕಿಬಿದ್ದಿದ್ದರೂ ಕೂಡಾ ಈ ಚಡ್ಡಿ ವಿದ್ಯಾರ್ಥಿಗಳು ಅದನ್ನು ಪ್ರಶ್ನಿಸುತ್ತಿಲ್ಲ.

ಇದು ಅನುಮಾನ ಹುಟ್ಟಿಸುವಂತಿದೆ.

ಡಾ. ಮಹೇಶಪ್ಪ ಮೂಲತಃ ಹಿಂದುಳಿದ ಜನಾಂಗಕ್ಕೆ ಸೇರಿದವರಾಗಿದ್ದು ಈ ಹಿಂದೆ ಡಾನ್ ಬಾಸ್ಕೋ, ರೇವಾ ಹಾಗೂ ಕೇಂಬ್ರಿಡ್ಜ್ ಕಾಲೇಜುಗಳನ್ನು ಕಟ್ಟಿ ಬೆಳೆಸಿದ ಅನುಭವ ಹೊಂದಿದ್ದಾರೆ. ಹಾಲಿ ವಿಟಿಯುನಲ್ಲಿ 31 ಮುಖ್ಯ ಹಾಗೂ ಸ್ಪೆಷಲ್ ಆಫೀಸರ್‌ಗಳಿದ್ದು ಅವರಲ್ಲಿ 27 ಜನ ಬ್ರಾಹ್ಮಣರೇ ಇದ್ದಾರೆ. ಈ ಗುಂಪಿಗೆ ಹಿಂದುಳಿದ ಜಾತಿಯ ಡಾ. ಮಹೇಶಪ್ಪ ಅಂದರೆ ಒಂಥರಾ ಅಲರ್ಜಿ. ಇವರೆಲ್ಲಾ ಭ್ರಷ್ಟ ಬಲವೀರಾ ರೆಡ್ಡಿ ಜೊತೆ ಚೆನ್ನಾಗಿ ಇದ್ದವರು. ಹಾಗಾಗಿ ಈ ಬ್ರಾಹ್ಮಣರ ಗುಂಪು ಹಾಗೂ ಬಲವೀರಾ ರೆಡ್ಡಿ ಒಟ್ಟಿಗೆ ಸೇರಿ ಬ್ರಾಹ್ಮಣರ ವಿದ್ಯಾರ್ಥಿ ಸಂಘಟನಾದ ಎಬಿವಿಪಿಗಳನ್ನು ಮಹೇಶಪ್ಪ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ. ●

ಕೊಡೇಕಲ್ಲು ಧರ್ಮಾಧರ್ಮಗಳ ಮನಸಿನ ಕತ್ತಲೆಗೆ ನೈತಿಕತೆಯ ಬೆಳಕು



"ಇಂದಿಗೂ ಕೆಲವೆಡೆ ಸವರ್ಣೀಯರ ಬಾವಿಯನ್ನು ಮುಟ್ಟಿದ್ದಕ್ಕಷ್ಟೇ ದಲಿತರನ್ನು ಬೆತ್ತಲೆ ನಿಲ್ಲಿಸಿ ಥಳಿಸಲಾಗುತ್ತದೆ; ಸಾರ್ವಜನಿಕ ಬಹಿಷ್ಕಾರ ಹಾಕಲಾಗುತ್ತದೆ... ಜೊತೆಜೊತೆಗೇ 'ನಿತ್ಯನಾರಕಿ'ಗಳ ಸಂತೆಗಳಲ್ಲಿ ಮಾಧ್ವ ಮಠದ ನುಡಿಬೊಂತೆಗಳು, ಇಂದಿನ ದಿನದ ರಾಜಕೀಯದ ಒತ್ತಡಗಳೊಂದಿಗೆ, ಮೂಗು ಮುಚ್ಚಿ ಪಾದಯಾತ್ರೆ ನಡೆಸುತ್ತಾರೆ; ಮಾಧ್ಯಮಗಳಲ್ಲಿ ವಿಜೃಂಭಿಸುತ್ತಾರೆ...

ಆದರೆ, ಅಲ್ಲಿ ವಿವಿಧ ಜಾತಿಯ ಜನ ಒಟ್ಟಾಗಿ ನದಿಯಿಂದ ನೀರು ತರುತ್ತಾರೆ. ದಲಿತರು ತಂದ ನೀರಲ್ಲಿ ಗಂಧ ತೇಯುತ್ತಾರೆ. ಹಾಗೆ ತೇದ ಗಂಧವನ್ನು ಆ ಪರಂಪರೆಯ ಮೂಲಪುರುಷನ ಸಮಾಧಿಗೆ ಹಚ್ಚಲಾಗುತ್ತದೆ. ಅದರ ಮೇಲೆ ಮುಸ್ಲಿಮರು ಹಸಿರು ಗಲೀಫ ತಂದು ಹೊದಿಸುತ್ತಾರೆ. ಊರಿಗೆ ಊರೇ ಸೇರಿ, ಸಕಲೆಂಟು ಜಾತಿಗಳು ನೆರೆದು, ಜಾತ್ರೆ ನಡೆಸುತ್ತಾರೆ. ಮಾದಲಿ ಪ್ರಸಾದ ಅರ್ಪಿಸುತ್ತಾರೆ. ಊದು ಹಚ್ಚುತ್ತಾರೆ, ಲೋಬಾನ ಉರಿಸುತ್ತಾರೆ. ಒಣ ಖರ್ಜೂರ, ಕಲ್ಲು ಸಕ್ಕರೆ, ಶರಬತ್ತು ಹಂಚುತ್ತಾರೆ. ಅಲ್ಲಿ ಪೀಠಾಧಿಪತಿಗಳು ಇದ್ದಾರೆ, ಆದರೆ ಪಾದಪೂಜೆಯಿಲ್ಲ, ಅಡ್ಡ ಪಲ್ಲಕ್ಕಿಯಿಲ್ಲ, ಅಲ್ಲಿ ಅರ್ಚನೆಯಿದೆ, ಆದರೆ ದೇವರ ಗುಡಿಯಿಲ್ಲ, ದೈವದ ಮೂರ್ತಿಯಿಲ್ಲ, ಅಲ್ಲಿರುವ ಆರಾಧನೆ ದೈವದೇವರಿಗಲ್ಲ, ಬದಲಿಗೆ ತಮ್ಮ ಪೂರ್ವಿಕರು ಬರೆದ ಸಾಹಿತ್ಯಕ್ಕೆ, ಅಲ್ಲಿ ನಡೆಯುವ ಪಲ್ಲಕ್ಕಿ ಉತ್ಸವ ಇದೇ ಪುರಾತನ ಗ್ರಂಥಗಳಿಗೆ. ವರ್ಷದಲ್ಲಿ ಎರಡು ಬಾರಿ ನಡೆಯುವ ಈ ಜಾತ್ರೋತ್ಸವ ಆರಂಭಗೊಳ್ಳುವುದು ದಲಿತರ ಸ್ಪರ್ಶದಿಂದ ಪವಿತ್ರಗೊಂಡ ನೀರಿನಲ್ಲಿ ಗಂಧ ತೇಯುವುದರೊಂದಿಗೆ, ಕೊನೆಗೊಳ್ಳುವುದು ಮುಸಲ್ಮಾನ ಗಣ್ಯರು ಫತೆಹಾ ಹೇಳಿ ಧೂಳುಗಾಯಿ ಹೊಡೆದ ನಂತರ!

****

ಬಡವರ ಮನೆಯಲಿ ಜ್ಯೋತಿ, ಬಲ್ಲಿದನ ಮನೆಯಲಿ ಜ್ಯೋತಿ;
ಗೌಡರ ಮನೆಯಲಿ ಜ್ಯೋತಿ, ಗೊಲ್ಲರ ಮನೆಯಲಿ ಜ್ಯೋತಿ;
ಹೆತ್ತ ಮನೆಯಲಿ, ಸತ್ತ ಮನೆಯಲಿ ಜ್ಯೋತಿ;
ತಿಪ್ಪೆ ಮೇಲೆ ಕೆತ್ತಿ ಮಡಗಿದರೂ ದೇವಾ
ಭಿನ್ನಭೇದವಿಲ್ಲದಂತೆ ಉರಿವಂಥ ಪರಂಜ್ಯೋತಿ;
ಸತ್ತವರ ಸಮಾಧಿ ಮೇಲೆ ಕತ್ತಿ ಮಡಗಿದರೂ ಗುರುವು
ಏಕವಾಗಿ ಉರಿವಂಥ ಜಗಂಜ್ಯೋತಿ;
ಮೂರುಕೂಟದ ದಾರಿಯೊಳಗೆ ಮಡಗಿದರೂ ಸ್ವಾಮಿ
ಭಿನ್ನಭೇದವಿಲ್ಲದಂತೆ ಉರಿವಂಥ ಪರಂಜ್ಯೋತಿ.

ಇದು ದಕ್ಷಿಣ ಕರ್ನಾಟಕದ ಜನಪದ ನಾಯಕ ಮಂಟೇಸ್ವಾಮಿ ಕುರಿತಾದ ನೀಲಗಾರ ಪರಂಪರೆಯ ಕಾವ್ಯದ ಸೊಲ್ಲು, ಇದು ಕೇವಲ ಬೆಳಕಿನ ವಿವರಣೆಯಲ್ಲ, ಬದಲಿಗೆ ಇದು ಸಮಾಜದ ಎಲ್ಲ ಸ್ತರದ ಜನರಿಗೂ ದಕ್ಕುವ ಹಾಗೂ ಎಲ್ಲರನ್ನೂ ಒಳಗೊಳ್ಳುವ, ಜಾತಿಗಳ ಮೇಲುಕೀಳು ಎಂಬ ಏರುಪೇರಿನ ವ್ಯವಸ್ಥೆಯ ವೈಪರೀತ್ಯವನ್ನು ಧಿಕ್ಕರಿಸುವ ಮತ್ತು ಪುರೋಹಿತಶಾಹಿ ಮಧ್ಯವರ್ತಿಗಳಿಂದ ಮುಕ್ತಗೊಂಡ ಒಂದು ಧಾರ್ಮಿಕ ಪರ್ಯಾಯದ ಕುರಿತಾದ ವ್ಯಾಖ್ಯಾನವಾಗಿದೆ. ಮಂಟೇಸ್ವಾಮಿ, ಆತನ ಸಹಚರ ಕಿಡಿಗಣ್ಣ ರಾಚಪ್ಪಾಜಿ, ಶಿಷ್ಯ ಸಿದ್ಧಪ್ಪಾಜಿ ಇವರುಗಳೆಲ್ಲ ಹದಿನೈದನೆಯ ಶತಮಾನದಲ್ಲಿ ಉತ್ತರದೇಶದಿಂದ ಇಂದಿನ ದಕ್ಷಿಣ ಕರ್ನಾಟಕವೆಂಬ ಆಧ್ಯಾತ್ಮಿಕ ಕತ್ತಲಿನ ಲೋಕಕ್ಕೆ ಜ್ಞಾನದ ಬೆಳಕನ್ನು ತಂದ ಬಗ್ಗೆ ಈ ಕಾವ್ಯ ಪರಂಪರೆ ಮತ್ತೆ ಮತ್ತೆ ಹೇಳುತ್ತದೆ. ಹಾಗೆ ನಿರಂತರ ಜ್ಞಾನದ ಬೆಳಕನ್ನು ಹೊರಸೂಸುತ್ತಿದ್ದ ಉತ್ತರದೇಶದ ಕೇಂದ್ರಸ್ಥಾನ ಕೊಡೇಕಲ್ಲು, ಅದು ಇಂದಿನ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿದೆ. ಕೊಡೇಕಲ್ಲು ಪರಂಪರೆಯ ಮೂಲಪುರುಷ ಕೊಡೇಕಲ್ಲ ಬಸವಣ್ಣ.

ಮೂಲತಃ ಹಂಪೆಯವನಾದ ಕೊಡೇಕಲ್ಲ ಬಸವಣ್ಣ ತನ್ನ ಆಧ್ಯಾತ್ಮಿಕ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡದ್ದು ಹಂಪೆ ಮತ್ತು ಬಿಜಾಪುರದ ನಡುವಿನ ಕೊಡೇಕಲ್ಲನ್ನು. ಅದು 15ನೇ ಶತಮಾನದ ಸಮಯ. ಆ ಹೊತ್ತು ಸುತ್ತಲಿನ ಪರಿಸರ ರಾಜಕೀಯ ಮತ್ತು ಧಾರ್ಮಿಕ ಸಂಘರ್ಷಗಳ ಕುಲುಮೆಯಾಗಿತ್ತು, ಸಾಮ್ರಾಜ್ಯಾಧಿಪತಿಗಳ ವೈಭವ, ಅಹಂಭಾವ, ಶೌರ್ಯ ಕಾಳಗ, ಅಂತರ್‌ಕಲಹ ಮತ್ತು ಪತನಕ್ಕೆ ಸಮಾಜ ಸಾಕ್ಷಿಯಾಗಿತ್ತು, ಧರ್ಮಗಳ ಅತಿರೇಕ ಅಸಹನೀಯವಾಗಿತ್ತು, ವೈಷ್ಣವ-ಶೈವ, ಮುಸ್ಲಿಮ್-ಹಿಂದೂ ಸಂಘರ್ಷಗಳಿಂದ ಜನ ತತ್ತರಿಸಿಹೋಗಿದ್ದರು. ಇಂತಹ ಸಮಯದಲ್ಲಿ ಒಂದು ಕಾಲಿಗೆ ಹಿಂದೂಗಳಂತೆ ಪಾದರಕ್ಷೆ ಮತ್ತು ಇನ್ನೊಂದು ಕಾಲಿಗೆ ಮುಸ್ಲಿಮರು ಧರಿಸುವ 'ಕಂಸಿ'ಯನ್ನು ಧರಿಸಿದ ಕೊಡೇಕಲ್ಲ ಬಸವಣ್ಣ ಜನರ ನಡುವೆ ಸಾಮರಸ್ಯಕ್ಕಾಗಿ ಓಡಾಡಿದ ಮಹನೀಯ. ಜಾತಿಗಳನ್ನು ತೊಡೆದುಹಾಕುವ ಮತ್ತು ದುಡಿಯುವ ವರ್ಗಕ್ಕೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡುವ ಉದಾತ್ತ ಕಲ್ಪನೆಯಿಂದ ಹುಟ್ಟಿಕೊಂಡಿದ್ದ ಲಿಂಗಾಯತ ಧರ್ಮ ಆದಾಗ ಮೇಲು-ಕೀಳು, ಶುದ್ಧಿ-ಅಶುದ್ಧಿ ಪರಿಕಲ್ಪನೆಯನ್ನು ತನ್ನೊಳಗೇ ತುಂಬಿಕೊಂಡು ನಿಂತ ನೀರಾಗಿ ಕೊಳೆಯತೊಡಗಿತ್ತು, ಒಂದು ಶ್ರೇಣೀಕೃತ ವ್ಯವಸ್ಥೆಯಾಗಿ ಬದಲಾಗಿತ್ತು, ಕೊಡೇಕಲ್ಲ ಬಸವಣ್ಣ ಮತ್ತೆ ಜಾತಿಸೂತಕವಾಗಿ ಮಾರ್ಪಟ್ಟ ಇಷ್ಟಲಿಂಗವನ್ನು ಕಿತ್ತೆಸೆದ. ಅದರ ಬದಲು ಪ್ರಾಣಲಿಂಗ ಪ್ರತಿಷ್ಠೆ ಎಂಬ ಹೊಸ ಪರಿಕಲ್ಪನೆಯನ್ನು ಹುಟ್ಟು ಹಾಕಿದ. ಶಿವನನ್ನು ಶುದ್ಧ ನಡೆನುಡಿಗಳ ಮೂಲಕ ಅಂತರಂಗದಲ್ಲಿ ಪ್ರತಿಷ್ಠೆ ಮಾಡಬೇಕೇ ವಿನಹ ಜಾತಿಸೂಚಕವಾಗಿ ದೇಹದ ಮೇಲಲ್ಲ ಎಂದು ಪ್ರತಿಪಾದಿಸಿದ.

ಭಕ್ತಿ ಅಂತರಂಗದ ಕ್ರಮವು


ಕೊಡೇಕಲ್ಲ ಪರಂಪರೆಯವರಿಗೆ ಧರ್ಮದ ಹೊರ ಆವರಣಗಳು, ಸಂಕೇತಗಳು, ಆಚರಣೆಗಳು ಮತ್ತು ಕುರುಹುಗಳು ಅನಗತ್ಯವಾದುದು ಹಾಗೂ ಅಂಧಶ್ರದ್ಧೆಗೆ ಒಳದಾರಿಯೆಂದೇ ಅನ್ನಿಸಿದೆ. ಭೌತಿಕ ಆಚರಣೆಗಳು ಆಧ್ಯಾತ್ಮದ ಪರಿಕಲ್ಪನೆಗೆ ತೊಡಕಾದುದೆಂಬುದು ಅವರ ಸ್ಪಷ್ಟ ನಿಲುವು. ಮನೋವಿಕಾಸ ಮತ್ತು ನೈತಿಕತೆ ಎಂದೂ ಅವರ ಖಚಿತ ಗುರಿ. ಒಂದೆಡೆ ಅಲ್ಲಮ ಪ್ರಭು ಹೇಳುತ್ತಾನೆ, '*ಆಕಾರ, ನಿರಾಕಾರ ಎಂಬೆರಡೂ ಸ್ವರೂಪಂಗಳು.. .. ನಮ್ಮ ಗುಹೇಶ್ವರ ಆಕಾರನೂ ಅಲ್ಲ, ನಿರಾಕಾರನೂ ಅಲ್ಲ*'. ಈ ರೀತಿಯ ನಿರೀಶ್ವರವಾದಕ್ಕೆ ಅತಿ ಸನಿಹದ ಅಮೂರ್ತವಾದ ದೈವದ ಕಲ್ಪನೆ ಅವನದ್ದು. ಕೊಡೇಕಲ್ಲ ಬಸವಣ್ಣನನ್ನು ಕೆಲವೊಮ್ಮೆ ಕಲ್ಯಾಣದ ಬಸವಣ್ಣನ ಅವತಾರವೆಂದೂ, ಕೆಲವೊಮ್ಮೆ ಮಹಮ್ಮದನ ಪುನರಾವತಾರವೆಂದೂ ಗ್ರಹಿಸಿರುವಂತೆ ಆತ ಅಲ್ಲಮನ ಪುನರ್ಜನ್ಮ ಎಂಬ ನಂಬಿಕೆ ಸಹ ಇದೆ. ಅಂತೆಯೇ ಕೊಡೇಕಲ್ಲ ಬಸವಣ್ಣನನ್ನು 'ಶೂನ್ಯ ಸಿಂಹಾಸನ ಪ್ರಭು' ಎಂದು ಬಣ್ಣಿಸಿರುವುದೂ ಇದೆ. ಕೊಡೇಕಲ್ಲ ಪಥ ಮೂಲತಃ ಅಲ್ಲಮನ ಪಥ ಎನ್ನುವುದು ಸುಸ್ಪಷ್ಟ. ವಿಗ್ರಹಾರಾಧನೆಯಂತೂ ಈ ಪರಂಪರೆಯ ಪರಿಧಿಯಾಚೆಗಿನದ್ದು, ಮಂಟೇಸ್ವಾಮಿಯ ಶಿಷ್ಯ ಘನನೀಲಿ ಸಿದ್ಧಪ್ಪಾಜಿಯ ಹಂಬಲವೊಂದು ಹೀಗಿದೆ, 'ತಲಕಾಡ ಮರಳು ರಾಶಿ ಸಣ್ಣಕ್ಕಿ ಬೆಳೆಯಾಗಲಿ, ಹೊಡೆದು ಮೂಡಿದ ದೇವರುಗಳೆಲ್ಲ ಒಲೆ ಗುಂಡುಗಳಾಗಲಿ, ಹಾದಿಬೀದಿಯ ದೇವರುಗಳೆಲ್ಲ ಸೀಳು ಸೌದೆಯಾಗಲಿ; ಸಣ್ಣಕ್ಕಿಯ ಪ್ರಸಾದ ಅಳಿದುಳಿದ ಕಲ್ಯಾಣದ ಜಂಗಮರಿಗೆ ಪ್ರಸಾದವಾಗಲಿ'. ನೀಲಗಾರರ ಸಾಹಿತ್ಯದಲ್ಲಿ ಬರುವ ಈ



ಕಲ್ಯಾಣವು ಕಡೆಯ ಕಲ್ಯಾಣವಾದ ಕೊಡೇಕಲ್ಲ ಎಂಬುದು ಸ್ಪಷ್ಟ. ಕೊಡೇಕಲ್ಲು ಎಂದೂ ವಿಗ್ರಹಾರಾಧನೆಯಿಂದ ಗಾವುದ ಗಾವುದ ದೂರ ಇದ್ದುದು ಮಾತ್ರವಲ್ಲ, ಆ ಪರಂಪರೆಯ ಮುಂದುವರಿದ ಭಾಗಗಳು ಸಹ ನೈತಿಕತೆಯತ್ತಲೇ ತಮ್ಮ ದೃಷ್ಟಿ ಹರಿಸಿದ್ದವು ಎನ್ನುವುದು ಇದರಿಂದ ವಿಶದವಾಗುತ್ತದೆ.

ಸಾಂಪ್ರದಾಯಿಕವಾಗಿ ಶಿವನನ್ನು ಅಷ್ಟಾವಿದ್ಯಾರ್ಚನೆಗಳ ಮೂಲಕ ಮತ್ತು ಶೋಡಶೋಪಚಾರಗಳ ಮೂಲಕ ಆರಾಧಿಸುವ ಪದ್ಧತಿ ಮಧ್ಯಕಾಲೀನ ಸಮಯದಲ್ಲಿ ಆಚರಣೆಯಲ್ಲಿತ್ತು ಮತ್ತು ಈಗಲೂ ಇದೆ. ಅವನನ್ನು ನೈವೇದ್ಯ, ವಿಭೂತಿ, ಪುಷ್ಪ, ದೀಪ, ಧೂಪ, ತಾಂಬೂಲ ಮೊದಲಾದ ಎಂಟು ಬಗೆಯ ಅರ್ಪಣೆಯೊಂದಿಗೆ ಆರಾಧಿಸಬೇಕೆಂಬ ವಿಧಾನವದು. ಇದೊಂದು ಅರ್ಚಕವೃಂದ ಹುಟ್ಟುಹಾಕಿದ ಬಾಹ್ಯ ಆಚರಣೆಯ ವಿಧಿವಿಧಾನ. ಅದಕ್ಕೆ ವ್ಯತಿರಿಕ್ತವಾಗಿ ಕೊಡೇಕಲ್ಲ ಬಸವಣ್ಣನ ಸಂಪ್ರದಾಯ, '*ಮನವೆ ಮಲ್ಲಿಗೆ ಅರಳು, ಘನ ನೆನಹು ಶ್ಯಾವಂತಿಗೆ, ವಿನಯವೆ ಪಾವಳಗೆ ಪುಷ್ಪ ಸುಜ್ಞಾನ ಕಣಗಿಲ ಅರಳು*" ಎಂದು ಹೇಳುತ್ತದೆ. ಇದಕ್ಕೇ ಮಹಾಲಿಂಗನಿಗೆ ಅರ್ಪಿತ ಎಂಬುದು ಅವರ ನಂಬಿಕೆ. ಇದರ ಜೊತೆಗೆ ಅವರು ಉಪಮಾತೀತ ಶಿವನನ್ನು ಸಾಂಕೇತಿಕ ಧೂಪದೀಪಗಳಿಂದ ಅರ್ಚಿಸುವ ಬಗೆಯಂತೂ ಅನನ್ಯವಾದುದು, ಅಸದೃಶವಾದುದು. '*ತಾಪತ್ರಯಾದಿಗಳ ತರಿದು ದಹನವ ಮಾಡು, ಈ ಪರಿಯ ಪರಿಮಳವು ಪರಕೆ ಗುಗ್ಗಳಧೂಪ, ಉಪಮಾತೀತನಿಗರ್ಪಿತ ಪರಪರ*' ಎಂದು ಧಾರ್ಮಿಕ ಆಚರಣೆಯ ಪರಂಪರೆಯನ್ನು ಧಿಕ್ಕರಿಸಿ '*ಭಕ್ತ ಅಂತರಂಗದ ಕ್ರಮವು*'; ಬೂಟಾಟಿಕೆಯ, ತೋರ್ಪಡಿಕೆಯ ಕ್ರಮ ಅದಲ್ಲ ಎಂದಿದ್ದಾರೆ.

ಕೊಡೇಕಲ್ಲ ಬಸವಣ್ಣ ಮತ್ತು ಆತನ ಪರಂಪರೆ ಕಾಲಜ್ಞಾನ, ಖಂಡಜ್ಞಾನ, ನೀತಿಜ್ಞಾನ ಮತ್ತು ಬೋಧಜ್ಞಾನ ಎಂಬ ಪ್ರಕಾರಗಳ ಸಾಹಿತ್ಯ ಕೃತಿಗಳನ್ನು ರಚನೆ ಮಾಡಿವೆ. ಒಟ್ಟಾಗಿ ಇವುಗಳನ್ನು ಕೊಡೇಕಲ್ಲ ವಚನವಾಕ್ಯ ಎಂದು ಕರೆಯುತ್ತಾರೆ. ಇವುಗಳಲ್ಲಿ ಕಾಲಜ್ಞಾನ ಅತಿ ವಿಶಿಷ್ಟವಾದುದಾಗಿದೆ. ಸಮಕಾಲೀನರ ನೀತಿಗೆಟ್ಟ ನಡವಳಿಕೆಯನ್ನು ಇನ್ನು ಮುಂದೆ ಬರುವ ಕಲಿಕಾಲದಲ್ಲಿ ಮಾತ್ರ ಕಾಣುವಂಥದ್ದು ಎಂಬಂತೆ ಚಿತ್ರಿಸಲಾಗಿದೆ. ಅದರೊಂದಿಗೇ ಭವಿಷ್ಯದ ಬಗೆಗಿನ ಪೂರ್ವಾಲೋಚನೆಗಳನ್ನು ಬೆರೆಸಲಾಗಿದೆ. ಆ ಮೂಲಕ, ನಾಳೆ ಇಷ್ಟು ದುರ್ಭರವಾಗಲಿದೆ ಎಂದು ವಿನಾಶಕಾರಿ ಕಲಿಯನ್ನು ಕುರಿತಾಗಿ ಹೇಳುವ ಸಾಹಿತ್ಯ ರಚನೆಗಳನ್ನು ಮಾಡಲಾಗಿದೆ. ನಾಳೆ ಇಷ್ಟು ಕೆಟ್ಟದಾಗಿರುತ್ತದೆ ಎಂದು ಹೇಳುತ್ತಲೇ ಸಮಕಾಲೀನರ ಅವ್ಯವಹಾರಿಕತೆಯನ್ನು ಪ್ರಶ್ನಿಸುವ, ನೈತಿಕತೆಯನ್ನು ಉದ್ದೀಪನಗೊಳಿಸಿ ಅವರನ್ನು ಸರಿದಾರಿಗೆ ತರುವ ಪ್ರಯತ್ನ ಈ ಬಗೆಯ ಕಾವ್ಯಗಳಲ್ಲಿ ಇರುವುದನ್ನು ಗಮನಿಸಬಹುದು.



ನಾಳೆ ಕಲಿಯುಗದಲ್ಲಿ ಮಗಳ ರೂಪುಕಂಡು ತಂದೆಯೇ ಮರುಳಾಗುತ್ತಾನೆ, ಮಠದ ಸ್ವಾಮಿಗೆ ಎರಡು ಹೆಂಡತಿಯರಿರಲೇಬೇಕು, ಕುಡಿಯುವ ನೀರಿಗೂ ಮಲಗುವ ಮಂಚಕ್ಕೂ ಸುಂಕ ಹಾಕುತ್ತಾರೆ ಮೊದಲಾದ ಅಂದಿನ ದಿನದ ಸಾಮಾಜಿಕ ದುಸ್ಥಿತಿಯನ್ನು ಹೇಳುತ್ತಾ ಜೊತೆಜೊತೆಗೆ ಮೂಡಲಲ್ಲಿ ಜೋಡಿ ಸೂರ್ಯ ಮೂಡುತ್ತದೆ, ಆಗಸದಿಂದ ಸುಚ್ಚಿಕ್ಕಿ ಮಳೆ ಉದುರುತ್ತದೆ, ಊರು ಕಾಡಾಗುತ್ತದೆ ಕಾಡು ನಾಡಾಗುತ್ತದೆ ಮುಂತಾದ ಫ್ಯಾಂಟಸಿಯನ್ನು ಬೆರೆಸುವ ಅದ್ಭುತ ಸಾಹಿತ್ಯವನ್ನು ನಾವು ನೋಡಬಹುದು. ಅಂತೆಯೇ, ಕೊಡೇಕಲ್ಲು ಬಸವಣ್ಣನ ಶಿಷ್ಯನಾದ ಮತ್ತು ಆ ಪರಂಪರೆಯ ಮುಂದುವರಿದ ಭಾಗವಾಗಿ ಶ್ರಮಿಕವರ್ಗದ ಮತ್ತು ಕುಶಲಕರ್ಮಿಗಳ ಧಾರ್ಮಿಕ ನಾಯಕನೆನ್ನುವುದಕ್ಕಿಂತಲೂ ಮುಖ್ಯವಾಗಿ ಜನಸಾಮಾನ್ಯರ ನಡುವೆ ಒಬ್ಬ ಜನನಾಯಕನಾಗಿ ರೂಪುಗೊಂಡ ಮಂಟೇಸ್ವಾಮಿಯ ರಚನೆಯೊಂದು, "... ನಾಳೆ ಬಹಳ ಕಲಿ ಬರುತ್ತದೆ, ಕಾಲಜ್ಞಾನ ಒದಗುತ್ತದೆ, ಸಾರಿರಣ್ಣ ಸಾರಿರಿ" ಎಂದು ಹೇಳುತ್ತದೆ.

ಹಿಂದೂ-ಮುಸ್ಲಿಮ್ ಭಾವೈಕ್ಯತೆಯ ಬಗ್ಗೆ ಈ ಪರಂಪರೆ ನಮ್ಮ ಸಮಾಜದ ಹೃದಯಭಾಗದಲ್ಲಿ ನಿಲ್ಲುತ್ತದೆ. ಎಷ್ಟೆಂದರೆ ಕೊಡೇಕಲ್ಲ ಪೀಠಾಧಿಪತಿಗಳು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗ ಹಸಿರು ಶಲ್ಯ ಹಾಕಿರಲೇಬೇಕು. ಉತ್ಸವ, ಸಮಾರಂಭಗಳಲ್ಲಿ ಅದರ ಜೊತೆಗೆ ಹಸಿರು ರುಮಾಲು ಧರಿಸಿರಬೇಕು. ಕೊಡೇಕಲ್ಲ ಪರಂಪರೆಯ ಎಲ್ಲ ಧಾರ್ಮಿಕ ತಾಣಗಳೂ ಮುಸ್ಲಿಮ್ ವಾಸ್ತುಶಿಲ್ಪದಲ್ಲಿ ರೂಪಿತವಾಗಿವೆ, ಹೊರನೋಟಕ್ಕೆ ಮಸೀದಿಯ ಸ್ವರೂಪದಲ್ಲಿರು[illegible] ಈ ವಾಸ್ತುಶಿಲ್ಪದ ಪ್ರಸರಣವನ್ನು ಗಮನಿ[illegible] ಕೊಡೇಕಲ್ಲ ಪರಂಪರೆಯ ಪ್ರಸರಣದ ಅಗ[illegible] ಅರಿವಾಗುತ್ತದೆ. ಬಿಜಾಪುರ, ಗುಲ್ಬರ್ಗ, ಯಾದ[illegible] ಗಳಲ್ಲಿ ಮಾತ್ರವಲ್ಲ ನೆರೆಯ ಆಂಧ್ರ ಪ್ರದೇಶ[illegible] ಸಹ ಈ ಬಗೆಯ ವಾಸ್ತುಶಿಲ್ಪಗಳನ್ನು [illegible] ಬಹುದು. ಅತಿ ದೂರದ ಮಡಿಕೇರಿಯ ಓಂಕಾ[illegible] ದೇವಸ್ಥಾನ ಮತ್ತು ಕೊಡಗಿನ ಹಾಲೇರಿ ಅ[illegible] ಗದ್ದಿಗೆಗಳು ಸಹ ಕೊಡೇಕಲ್ಲ ಸಂಪ್ರದಾ[illegible] ರಚನೆಗಳೇ ಆಗಿವೆ.

ಕೊಡೇಕಲ್ಲ ಸಂಪ್ರದಾಯದಲ್ಲಿ ಹಿಂದೂ [illegible] ಮುಸ್ಲಿಮ್ ಗುರು-ಶಿಷ್ಯ ಪರಂಪರೆ ಗಮನಾರ್ಹ[illegible] ದಾಗಿದೆ. ಅಂತೆಯೇ ದಿಗ್ಗಿ, ತಿಂಥಿಣಿ ಮುಂತಾ[illegible] ಗದ್ದಿಗೆ ಮತ್ತು ದರ್ಗಾಗಳು ಪರಸ್ಪರ ಸನಿಹ[illegible] ಇವೆ. ಗದ್ದಿಗೆಗಳಲ್ಲಿ ಹಚ್ಚಿದ ಬೆಳಕು ದರ್ಗಾ[illegible] ಕಾಣಬೇಕಾದುದು ಅನಿವಾರ್ಯ. ಈ ಬೆ[illegible] ಭಾವೈಕ್ಯತೆಯ ನಿಜ ಬೆಳಕಾಗಿ ಇಂದೂ ಆ ಪರಿ[illegible] ಜನರ ನಡುವೆ ಜ್ವಲಂತವಾಗಿ ಉರಿಯುತ್ತಿದೆ.

ಕೊಡೇಕಲ್ಲಲ್ಲಿ ವರ್ಷದಲ್ಲಿ ಎರಡು ಬಾರಿ [illegible] ನಡೆಯುತ್ತದೆ. ದೀಪಾವಳಿ ಕಳೆದು ಮು[illegible] ಪಾಡ್ಯದಂದು ಮತ್ತು ಯುಗಾದಿ ಕಳೆದು ಮು[illegible] ಪಾಡ್ಯದಂದು ಜಾತ್ರೆ ನಡೆಯುವುದು. ಯುಗಾದಿ ನಂತರದ ಜಾತ್ರೆ ಹೆಚ್ಚು ಪ್ರಮುಖವಾದುದು. ಜಾ[illegible] ಸಮಯದಲ್ಲಿ ಕೃಷ್ಣಾನದಿಯಿಂದ ದಲಿತರು ತಂದ ನೀ[illegible] ಗಂಧವನ್ನು ತೇಯ್ದು ಬಸವಣ್ಣನ ಸಮಾಧಿಗೆ ಹಚ್ಚಲಾಗು[illegible] ನಂತರ ಕೊಡೇಕಲ್ಲ ವಚನವಾಕ್ಯ ಸಂಪುಟಗ[illegible] ಪಲ್ಲಕ್ಕಿಯಲ್ಲಿಟ್ಟು ಸಿಂಗರಿಸುತ್ತಾರೆ. ಅದೇ ಅವರ ಪ[illegible] ಪೂಜೆ. ಕೊಡೇಕಲ್ಲ ಪರಂಪರೆಗೆ ಇಷ್ಟದೈವವಿಲ್ಲ, [illegible] ಅದು ಕೊಡೇಕಲ್ಲ ಬಸವಣ್ಣ ಮಾತ್ರ. '*ನೀನೇ [illegible] ಬಸವಲಿಂಗ ನೀನಲ್ಲದೆ ದೈವವುಂಟೆ*' ಎಂದು ಗೌರವಿಸು[illegible] '*ಸೊಡ್ಡೋ ಸೊಡ್ಡು ಸೊಗಸುದವರ ಮಂದೆಯ [illegible] ಸೊಡ್ಡೋ.. ಹಾಕಿದ ಸೊಡ್ಡು ಕೈಯೊಡ್ಡಿ ಕೈಗೊಳ್ಳಿ*' [illegible] ಧರ್ಮದ ಹೆಸರಲ್ಲಿ ಕಾಳಗಕ್ಕೆ ನಿಲ್ಲುವವರಿಗೆ (ಸೊಗಸುದ[illegible] ಅಂದರೆ ಒಪ್ಪಿಗೆಯಿಲ್ಲದವರಿಗೆ) ಸಡ್ಡು ಹೊಡೆಯು[illegible] '*ಕುಲ ಛಲವೆಂದು ಕುಂದಸೆ ಹೆಚ್ಚಿ ಹೊಲೆ ದೈವ*[illegible] *ಹೋರಾಟದೊಳು ಒದ್ದಾಡುತ, ಹಲವು ಶಾಸ್ತ್ರ*[illegible] *ಪಾಪ್ಯಾರ್ಥಕ್ಕೆದಾಗಿ, ತಲೆ ತಗ್ಗ*[illegible] *ಮಂದೆಯ ಮೇಲೆ ಮದ ಸೋ*[illegible] ಬದುಕುವವರನ್ನು ಅಪಹಾಸ್ಯ ಮ[illegible] ತ್ತಾರೆ, ಅವರ ಜಡ್ಡುಗಟ್ಟಿದ ನಂ[illegible] ಸಡ್ಡು ಹೊಡೆಯುತ್ತಾರೆ. [illegible] ಮೌಢ್ಯಾಚರಣೆಯನ್ನು ಕಳೆದ [illegible] ಭಕ್ತಿಯ ಬಗ್ಗೆ ಅತ್ಯಂತ ಸ್ಪಷ್ಟ[illegible] 'ಸಕಲ ಪದಾರ್ಥವ ಸವಿದು, [illegible] ವಿನಲ್ಲಿ ಭಕ್ತವತ್ಸಲರಾಗಿ ಬಾಳಿ, [illegible] ಧ್ಯಾನಗಳಂ ಬಟ್ಟು ಬಾಳಿ [illegible] ನೆಂದು... ನಿಜ ಶಿವ ಸುಖದ[illegible] ಓಲಾಡದೆ ಸುಮ್ಮನೆ ಐಶ್ವ[illegible] ಸಭೆಯೊಳು ಉರುಳಿ, ಸವಿಗೆ ಹಿಂದುಳಿದವರ [illegible] ಸೊಡ್ಡೋ' ಎಂದು ಹೇಳುತ್ತಾರೆ.

ಕೊಡೇಕಲ್ಲ ಬಸವಣ್ಣನನ್ನು ಪ್ರವಾದಿ ಮಹಮ್[illegible] ಪೈಗಂಬರರ ಅವತಾರವೆಂದೇ ಸ್ಥಳೀಯ ಮುಸಲ್ಮಾ[illegible] ಶತಮಾನಗಳಿಂದಲೂ ನಂಬುತ್ತಾ ಬಂದಿದ್ದಾರೆ. ಅಂ[illegible] ದೇವರು ಒಬ್ಬ ಮಹಮ್ಮದ್ ಅವನ ಪ್ರವಾದಿ ಎಂಬ [illegible] 'ಲಾ ಇಲಾಹಿ ಇಲ್ಲಲ್ಲಾ ಮಹಮ್ಮದ್ ರಸೂಲಲ್ಲಾ' [illegible] ಅರೇಬಿಕ್ ಭಾಷೆಯ ಫಲಕಗಳನ್ನು ಕೊಡೇಕಲ್ಲ ಬಸ[illegible] ಸಮಾಧಿಯ ಮೇಲೆ ತೂಗಿ ಹಾಕಲಾಗಿದೆ. ಕೊ[illegible] ಜಾತ್ರೆಗಳಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಭಾಗ[illegible] ತ್ತಾರೆ. ಬಸವಣ್ಣನನ್ನು ಕುಲದೈವವೆಂದು ನಂಬು[illegible] ಕೊಡೇಕಲ್ಲಿನ 14ನೇ ಪೀಠಾಧಿಪತಿ ಶ್ರೀ ಮಹಲಿ[illegible] ವೀರಯ್ಯ ಸ್ವಾಮಿಗಳ ನೀಳ್ಬೆರಳುಗಳಿಗೆ ಆ ಸಮುದಾ[illegible] ಮುಖ್ಯಸ್ಥರು ಅತ್ತರು ಹಚ್ಚುವ ಸಂಭ್ರಮವನ್ನು ನೋಡು[illegible] ಸೊಗಸು. ವರ್ಷದಲ್ಲಿ ಎರಡು ಸಲ ನಡೆಯುವ ಜಾತ್[illegible] ಮುಕ್ತಾಯಗೊಳ್ಳುವುದು ಮುಸಲ್ಮಾನ ಗಣ್ಯರು ಫ[illegible] ಹೇಳಿ ತೆಂಗಿನಕಾಯಿ ಒಡೆಯುವುದರ ಮೂಲಕ. [illegible] ದೊಂದು ಅದ್ಭುತವಾದ ಧಾರ್ಮಿಕ ಭಾವೈಕ್ಯತಾ ಪ[illegible] ಕೊಡೇಕಲ್ಲಿನದ್ದು!

ಈ ದಿನ ಕೊಡೇಕಲ್ಲಿನ ಪ್ರಸ್ತುತತೆ ಹೆಚ್ಚಾಗಿದೆ. ವೈ[illegible] ಯುಗವೆಂದು ಕರೆಸಿಕೊಳ್ಳುತ್ತಿರುವ ಇಪ್ಪತ್ತೊಂದನೆಯ[illegible] ಮಾನದಲ್ಲಿ ನಾವಿದ್ದರೂ ಜನರ ಮೌಢ್ಯವನ್ನು ಹೆಚ್ಚಿಸು[illegible] ಕಂದಕಗಳನ್ನು ಸೃಷ್ಟಿ ಮಾಡುವ ಸಾಮಾಜಿಕ [illegible] ರಾಜಕೀಯ ಸಂದರ್ಭ ನಮ್ಮ ಮುಂದಿದೆ. ಈ ಸಂ[illegible] ಹೊತ್ತು ಉತ್ತರದೇಶದ ಜ್ಞಾನದೀವಟಿಗೆ ಎಲ್ಲೆಲ್ಲೂ [illegible] ವಾಗಿ ಉರಿಯುವ ಅಗತ್ಯವಿದೆ. ಸ್ಥಳಶುದ್ಧಿ, ಬ್ರಹ್ಮಕಲ[illegible] ಮೂಲಕ ಗುಡಿಯಲ್ಲಿ ದೇವರನ್ನು ಕೂಡಿಡುವ[illegible] ವಿಗಿಲಾಗಿ ಅಂತರ್ಯವನ್ನು ಗುಡಿಸಿ ಒಪ್ಪ[illegible] ನೈತಿಕತೆಯ, ಮಾನವತೆಯ ದೇವರನ್ನು ಅಲ್ಲಿ ಸ್ಥಾ[illegible] ಕೊಡೇಕಲ್ಲ ಪರಂಪರೆಯ ಸಂದೇಶ ಇಂದು [illegible] ಭಿತ್ತರವಾಗುವ ಅನಿವಾರ್ಯತೆಯಿದೆ.

• ಕೆ.ಆರ್.ವಿದ್ಯಾಧರ, ಮ[illegible]



ದ್ದ ಫಾರೆಸ್ಟಿನವರ ಮಾತು ಕೇಳದೆ ಮಂಗನ ಹಿಡಿವ ಕಾರ್ಯಾಚರಣೆಯಿಂದ ಮುಖನಾಗಿ ಉಳಿದ. ದೈಯ್ಯ, ದೇವರನ್ನೆಲ್ಲ ನಂಬೋನಲ್ಲ ಸಿದ್ದ. ಗೋವಿಂದನಂಥ ಲಿ ಹಿಡಿದ ಹಮ್ಮೀರ ಬೋನಲ್ಲಿ ಸಿಕ್ಕಿದ್ದು ಹೇಗೆ? ಮಠದ ಮಂಗಗಳಿಗೆ ದೈವೀಶಕ್ತಿ ದೆಯೇ? ಅಂತ ಅನುಮಾನ ಬಂತು. ಅದಕ್ಕಿಂತ 'ನನಗ್ಯಾಕೆ ಹಾಳು ಉಸಾಬರಿ. ಟೀನೂ ಬೈತಾಳೆ' ಅಂತ ಸುಮ್ಮನೆ ಕೂತ.

ಒಂದೆಡೆ ಸಿದ್ದ ಮಂಗನ ಬ್ಯಾಟೆಗೆ ಮುಖ ತಿರುಗಿಸಿ ದ್ದ, ಇನ್ನೊಂದು ಕಡೆ ಗುರುಗಳಿಗೆ ಮಂಗ ಕಚ್ಚಿದ ಏನೇ ಔಷಧಿ ಮಾಡಿದ್ರು ಹುಲಿಹುಣ್ಣಿನಂತೆ ನಾಗದೆ ವಿಸ್ತರಿಸುತ್ತಲೇ ಇತ್ತು. ಮಠದಲ್ಲಿ ವಿಶೇಷ ಹೋಮ ಮಾಡಿದರೂ ಪ್ರಯೋಜನ ಕಾಣುತ್ತಿರಲಿಲ್ಲ. ಜಗದ್ಗುರುಗಳು ಯಮ, ನಿಯಮ, ಆಸನ, ಣಯಾಮ, ಪ್ರತ್ಯಾಹಾರ, ಅಷ್ಟಾಂಗ ಯೋಗನಿಷ್ಠರಾಗಿ ಚರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಮಧ್ಯಾಹ್ನ ಹೊತ್ತು ಪಂಚಭಕ್ಷ ಪರಮಾನ್ನ ಸೇವನೆ, ರಾತ್ರಿ ಕದಡಿದ ಹಾಲು - ಇಷ್ಟೇ ಅವರ ಆಹಾರ ಚಕ್ರ. ತೋ ಅವರ ಅನುಷ್ಠಾನಗಳೆಲ್ಲವು ಪರಿಸರ ವಿರೋಧಿ ಗಳಾಗಿರಬೇಕು. ಸಾಮಾನ್ಯ ಜನರಿಗೆ ಬರುವ ವಿಶೇಷ ಲೆಗಳೆಲ್ಲವೂ ಮುತ್ತಿಕೊಂಡಿದ್ದವು. ಗುರುಗಳಿಗೆ ಲೆಯ ಒತ್ತಡ ಇದ್ದರೂ ಭಕ್ತರು ಕೇಳಬೇಕಲ್ಲ, ಟ್ಟಲೇ ಪದ್ಮಾಸನದಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಕಾಯಿಲೆ ಆದಾಗಲೆ ಮಿತಿಮೀರಿತ್ತು. ಮಂಗನ ಯಿಂದ ಕಾಯಿಲೆಗಳೆಲ್ಲವೂ ಒಂದೇ ಸಾರಿ ಉಲ್ಬಣ ದಿದ್ದವು.

ರುಗಳ ಅನಾರೋಗ್ಯ ಉಲ್ಬಣಗೊಂಡಂತೆಲ್ಲ ಸರ್ಕಾರಕ್ಕೆ ಳ ಶುರುವಾಗಿತ್ತು. ಮಂತ್ರಿಮಂಡಲ ಸಭೆಯಲ್ಲಿ ತುರ್ತು ವಾಜ್ಞೆ ಘೋಷಿಸಿ, ಜನರಿಗೆ ವರೆ ಕೊಡುವ ಪ್ರಾಣಿಗಳನ್ನು ಹರಿಸುವ ವಿಶೇಷ ಯೋಜನೆ ಜಾರಿ ಅದಕ್ಕೆ 'ಆಪರೇಷನ್ ಮಂಕಿ' ನಾಮಕರಣ ಮಾಡಿ ಹಣ ಡೆ ಮಾಡಲಾಯಿತು. ಮಠಕ್ಕೂ ಅನುದಾನ ಘೋಷಿಸಲಾಗಿತ್ತು. ಕಾರ್ಯಾಚರಣೆ ಶುರುಮಾಡಿ ದಿನ ಕಳೆದರೂ ಏನೂ ಫಲ ಲ್ಲ, ಪತ್ರಿಕೆ, ಟಿವಿ ಮಾಧ್ಯಮ ಲ್ಲಿ ನಿರಂತರ ಸುದ್ದಿ, ತಜ್ಞರ ಯ ಎಂದೆಲ್ಲ ಗಂಟೆಗಂಟೆಗೂ ಸುತ್ತಿದ್ದರು. ಮೂರು ದಿನದಿಂದ ಮಠದ ಆವರಣ ಪ್ರವೇಶ ನಿರ್ಬಂಧ ಮಾಡಿ ಗರ್ಭಗುಡಿಗೆ ಬೀಗ



● ಕಲ್ಕುಳಿ ವಿಠ್ಠಲ ಹೆಗ್ಡೆ

ಜಡಿಯಲಾಗಿತ್ತು. ದೇವರಿಗೆ ಪೂಜೆ ನಿಲ್ಲಿಸಬಾರದು ಅಂತ ಮಠದ ಹೊರಗೆ ಉತ್ಸವಮೂರ್ತಿಗೆ ಪೂಜೆ ಮಾಡಲಾಯಿತು.

ಅಷ್ಟೊತ್ತಿಗೆ ಮಠದ ಕಥೆಗಳು, ಮಂಗನ ಕಥೆಗಳು, ಸಿದ್ದನ ಕಥೆಗಳು ನಾನಾ ರೂಪ ತಾಳಿ ಸಿದ್ದ ಮಂಗಗಳನ್ನು ಹಿಡಿಯೋ ಮಾಂತ್ರಿಕನಾಗಿದ್ದ. ಸಿದ್ದ ಮಂಗಗಳನ್ನು ಹೇಗೆ ಹಿಡಿಯುತ್ತಾನೆಂಬುದರ ಬಗ್ಗೆ ಚರ್ಚೆಗಳೇ ಶುರುವಾಗಿದ್ದವು. ಪಾಕಶಾಲೆ ಮಾಣಿಯೊಬ್ಬ "ಸಿದ್ದ ಅಂದ್ರೆ ಕಿನ್ನರಿ, ಮಾಯಕಾರ, ಅವ ಕಿಂದರಿ ಬಾರಿಸ್ತಿದ್ದಂಗೆ ಮಂಗಗಳು ಹಿಂದೆ ಬರ್ತಾವೆ. ಸಿದ್ದ ಹೊಳೆ ದಾಟುತ್ತಿದ್ದಂತೆಯೇ ಮಂಗಗಳೂ ದಾಟಲು ಹೋಗಿ ಒಂದಷ್ಟು ಹೊಳೇಲಿ ತೇಲಿಹೋಗುತ್ತಿದ್ದವು. ಉಳಿದವನ್ನು ಕಾಡಿಗೆ ಬಿಡಲಾಗುತ್ತಿದೆ" ಎಂದೆಲ್ಲಾ ಹೇಳುತ್ತಿದ್ದ.

ಸಿದ್ದ ಫಾರೆಸ್ಟಿನವರ ಮಾತು ಕೇಳದೆ ಮಂಗನ ಹಿಡಿವ ಕಾರ್ಯಾಚರಣೆಯಿಂದ ವಿಮುಖನಾಗಿ ಉಳಿದ. ದೈಯ್ಯ ದೇವರನ್ನೆಲ್ಲ ನಂಬೋನಲ್ಲ ಸಿದ್ದ. ಗೋವಿಂದನಂಥ ಹುಲಿ ಹಿಡಿದ ಹಮ್ಮೀರ ಬೋನಲ್ಲಿ ಸಿಕ್ಕಿದ್ದು ಹೇಗೆ? ಮಠದ ಮಂಗಗಳಿಗೆ ದೈವೀಶಕ್ತಿ ಇದೆಯೇ? ಅಂತ ಅನುಮಾನ ಬಂತು. ಅದಕ್ಕಿಂತ 'ನನಗ್ಯಾಕೆ ಹಾಳು ಉಸಾಬರಿ. ಪ್ಯಾಟೀನೂ ಬೈತಾಳೆ' ಅಂತ ಸುಮ್ಮನೆ ಕೂತ.

ಸಿದ್ದ 'ಆಪರೇಷನ್ ಮಂಕಿ' ಕಾರ್ಯಾಚರಣೆಗೆ ಕೈಕೊಟ್ಟದ್ದು ಜಿಲ್ಲಾಡಳಿತದ ಗಮನಕ್ಕೆ ಬಂದು ತಲೆನೋವಾಗಿತ್ತು. ಇದು ಸರ್ಕಾರದ ತುದಿಗೆ ಕೂಡಾ ತಲುಪಿ ಮುಖ್ಯಮಂತ್ರಿಯವರೆಗೂ ಹೋಯ್ತು. ಸ್ವತಃ ಮುಖ್ಯಮಂತ್ರಿಗಳೇ ವಡೇರ ಅಳಿಯನ ಮೂಲಕ ಒತ್ತಡ ತಂದು ಸಿದ್ದನನ್ನು ಒಪ್ಪಿಸಲು ಸೂಚನೆ ಬಂತು. ಗೋವಿಂದ ಜ್ವರ ಬಂದು ಮುರಕೊಂಡು ಮಲಗಿದ್ದಾನೆ. ಕರೆದರೂ ಮಾತು-ಕತೆಯಿಲ್ಲ. ಇದೆಲ್ಲವನ್ನು ಕಂಡು ವಡೇರು ಖುದ್ದು ತಾವೇ ಕಾರು ತಗೊಂಡು ಸಿದ್ದನ ಮನೆಗೆ ಹೋದರು.

ಸಿದ್ದ ಎಲೆಯಡಿಕೆ ಉಗಿಯಲು ಹೊರ ಬರುವುದಕ್ಕೂ, ವಡೇರ ಕಾರು ಬರುವುದಕ್ಕೂ ಸರಿಯಾಯ್ತು. ಇದೇನು ಗೋವಿಂದನೇ ಕಾರು ತಗೊಂಡು ಬಂದನಾ? ಅಷ್ಟು ಬೇಗ ಸರಿಹೋದನಾ ಅಂತ ನೋಡಿದರೆ ಸ್ವತಃ ವಡೇರೆ! ಸಿದ್ದ 'ಇದೇನ್ ಕೇಡ್‌ಗಾಲಪ್ಪ ಮಠದ ಮಂಗನ ಸವಾಸ ಮಾಡಿದ ಮೇಲೆ ತಲೆಬಿಸಿ ತಪ್ಪಿದ್ದಿಲ್ಲ, ವಡೇರ್ ಬಂದಾರೆ ಅಂದಮೇಲೆ ಏನೋ ಅನಾಹುತ ಆಗಿದೆ. ಗೋವಿಂದನಿಗೆ ಹೆಚ್ಚುಕಮ್ಮಿ ಆತಾ' ಅಂತ ಯೋಚಿಸಿದ. ವಡೇರು ಕಾರಿಂದ ಇಳಿದು "ಸಿದ್ದ, ಸಿದ್ದಣ್ಣ ಹ್ಯಾಂಗಿದ್ದಿ, ಒಳ್ಳೆ ಜಾಗದಲ್ಲಿ ಮನೆ ಕಟ್ಕೊಂಡಿದಿಯ" ಅಂದ್ರು.

ಪ್ಯಾಟಿ ವಡೇರ ಬಗ್ಗೆ ಕೇಳಿದ್ದಳೆ ಹೊರತು ಅವರನ್ನು ಕಣ್ಣಾರೆ ನೋಡಿರಲಿಲ್ಲ, ಬಾಗಿಲು ಓರೆ ಮಾಡಿ ಸಂದಿಯಿಂದ ನೋಡುತ್ತಿದ್ದಳು. ಕಾಲೋನಿ ಹುಡುಗರೆಲ್ಲ ಕಾರಿನ ಸುತ್ತಾ ಬಂದು ಸೇರಿದವು. ನಾಲ್ಕಾರು ದಿನದಿಂದ ಸಿದ್ದನ ಮನೆಗೆ ಕಾರು-ಜೀಪು ಬರುವುದು ಮಾಮೂಲಿಯಾಗಿತ್ತು. ಯಾವುದೋ ಹೊಸ ವಸ್ತು ಕಂಡಂತೆ ಕಾರಿನ ಮೈದಡವಲು ಶುರು ಮಾಡಿದವು. ಸಿದ್ದ ಹುಡುಗರಿಗೆಲ್ಲ ಜೋರು ಮಾಡಿದ.


ವಡೇರ ಕಂಡು ಬೆವರಿಹೋದ ಸಿದ್ದನ ಬಾಯಿಂದ ದನಿ ಹೊರಡುತ್ತಿಲ್ಲ, ಎರಡೂ ಕೈಮುಗಿದು "ಅಡ್ಡಬಿದ್ದೆ ಒಡೆಯಾ, ನಮಸ್ಕಾರ ಕಂಡ್ರಯ್ಯ" ಅಂದ. ವಡೇರು ಹೀನಜಾತಿಯವರಿಗೆ ಪ್ರತಿನಮಸ್ಕಾರ ಮಡೋರಲ್ಲದಿದ್ದರೂ "ನಮಸ್ಕಾರ ಕಣಯ್ಯ" ಅಂದ್ರು. ಜೊತೆಗೆ "ನೀನು ನಂಜೊತೆ ಬರಬೇಕು. ಅರ್ಜೆಂಟ್ ಕೆಲ್ಸ ಉಂಟು" ಅಂದ್ರು.

"ಮಠಕಾದರೆ ನಾ ಬರೂದಿಲ್ಲ, ಅದೊಂದು ಕೆಲ್ಸ ನಂಗೇಳ್ಬೇಡಿ" ಅಂದ ಸಿದ್ದ. "ನೀನು ಸುಮ್ನೆ ಬಾ" ಅಂತೇಳಿ ಒತ್ತಾಯಿಸಿದರು. ಅತ್ತ ದರಿ; ಇತ್ತ ಪುಲಿ ಎಂಬಂತಾಗಿ ಸಿದ್ದ ಮರುಮಾತಾಡದೆ ಬಾಯಿ ಮುಚ್ಚಿಕೊಂಡು ಬಟ್ಟೆ ಬದಲಾಯಿಸಿ, ಪ್ಯಾಟಿ ಮಾತಿಗೂ ಕಾಯದೆ "ಬತ್ತಿನಿ" ಅಂತ ಹೊರಟ. ವಡೇರು ಕಾರಿನ ಬಾಗಿಲು ತೆಗೆದು "ಕೂತ್ಕೋ ಬಾ" ಅಂದ್ರು. ಸಿದ್ದ ಕಾರಲ್ಲಿ ಕೂತ.

ಕಾರು ಸೀದಾ ಮಠದೊಳಗೆ ಹೋಯಿತು. ಮಠದ ಕಚೇರಿಗೆ ಸಿದ್ದನನ್ನು ಕರ್ಕೊಂಡು ಹೋಗಿ "ಇವತ್ತು ಮಂಗಗಳನ್ನು ಹಿಡಿಯಬೇಕು. ನನಗೋಸ್ಕರ, ನನ್ನ ಮರ್ಯಾದೆ ಪ್ರಶ್ನೆ. ನೀನ್ ಏನು ಕೇಳ್ತಿಯಾ ಅದು ಕೊಡ್ತೀನಿ. ಮರುಮಾತಾಡ್ಬೇಡ. ಏನು ಬೇಕು ಹೇಳು ವ್ಯವಸ್ಥೆ ಮಾಡ್ತೀನಿ. ಆ ಗೋವಿಂದನ ಬಿಡು. ಅವ ಪಠಾಖಿ. ಜೊತೆಗೆ ಜನ ಬೇಕಾ ಹೇಳು, ಫಾರೆಸ್ಟ್‌ನವರನ್ನು, ಪೋಲೀಸ್‌ನವರನ್ನು, ನೀ ಯಾರನ್ನ ಹೇಳ್ತೀಯಾ ಅವರನ್ನ ರೆಡಿ ಮಾಡ್ತೀನಿ.

ಮಂಗನ ಬ್ಯಾಟೆ

(14)



ನಾನು ಇಲ್ಲೇ ಇರ್ತಿನಿ...." ಅಂತ ಅವರು ಏನೇನು ಹೇಳಬೇಕು ಅದನ್ನೆಲ್ಲ ಒಂದೇ ಸಾರಿ ಹೇಳಿದರು.

ಸಿದ್ದ ವಡೇರ ಕಾಲು ಹಿಡಿದು "ಅಯ್ಯ, ಅವು ದೇವರ ಮಂಗಗಳು. ನನ್ನ ಕುಲ ನಾಶ ಆಗ್ತದೆ. ಅದೊಂದು ಕೆಲ್ಸ ಬ್ಯಾಡ, ನೀವು ಹೊಳೆಗೆ ಹಾರು ಅನ್ನಿ, ಹಾರ್ತೀನಿ" ಅಂದ. "ದೇವರ ಮಂಗ ಅಂತೆ ದೇವರ ಮಂಗ, ಯಾವ್ನೊನೊ ಮೂರ್ಖ ಹೇಳಿದ್ದು ನಿಂಗೆ? ದೇವರ ಮಂಗ ಆಗಿದ್ರೆ ದೇವರಂಥ ಗುರುಗಳ ಮೇಲೆ ಹಾರ್ತಿದ್ವೇನು. ಆದೇನು ಬಂದ್ರು ನಾನು ನೋಡ್ಕೋತಿನಿ, ನೀ ಕೆಲ್ಸ ಶುರು ಮಾಡಬೇಕು" ಅಂತ ಆಜ್ಞೆ ಮಾಡಿದರು. ತಪ್ಪಿಸಿಕೊಳ್ಳಲಾಗದ ಸಿದ್ದ ಕೆಳಗಿನ ಪ್ಯಾಟಿಗೆ ಹೋಗಬೇಕು ಅಂದ. ಕೂಡಲೇ ವಡೆರು 500 ರೂಪಾಯಿ ನೋಟು ತೆಗೆದುಕೊಟ್ಟರು. "ಇಷ್ಟೆಂತಕ್ಕೆ, ಮಂಡಕ್ಕಿ ಪುರಿ ತರಕ್ಕೆ" ಅಂದ ಸಿದ್ದ. ಆದರೆ ಸತ್ಯ ಬೇರೆ ಇತ್ತು!

ಸಿದ್ದನಿಗೋಸ್ಕರವೇ ಓಡಾಟಕ್ಕೆ ಒಂದು ಜೀಪ್ ವ್ಯವಸ್ಥೆ ಮಾಡಿದ್ದರು. ಫಾರೆಸ್ಟ್ ಜೀಪಲ್ಲಿ ಸಿದ್ದ ಕೆಳಗಿನ ಪೇಟೆಗೆ ಹೋಗಿ ಶೆಟ್ರು ಅಂಗಡೀಲಿ 15 ಸೇರು ಮಂಡಕ್ಕಿ ತಗೊಂಡು ಚೀಲಕ್ಕೆ ಹಾಕಿಕೊಂಡು, ಸಾರಾಯಿ ಅಂಗಡಿಯಿಂದ ಒಂದಷ್ಟು ರೊಟ್ಟಿ ತೆಗೆದುಕೊಂಡು ಅದನ್ನೂ ಮಂಡಕ್ಕಿ ಚೀಲದಲ್ಲಿ ಹಾಕಿಕೊಂಡು ಜೀಪಲ್ಲಿ ಬಂದು ಕುಳಿತ. ಫಾರೆಸ್ಟ್‌ನವರಿಗೆ ಪರಿಮಳ ಬರುತ್ತಿತ್ತು.

ಸಿದ್ದನಿಗೆ ಎಣ್ಣೆ ಹಾಕಿದ ಮೇಲೆ ವಡೇರ್‌ಗಿಂತ ದೇವರು ಹೆಚ್ಚ ಅಂತ ಅನ್ನಿಸೋಕೆ ಶುರುವಾಯಿತು. ಸೀದಾ ಮಠದೊಳಗೆ ಬಂದು ಗೋವಿಂದ ಹಿಡಿದ ಮೂರು ಮಂಗಗಳನ್ನು ಮೊದಲು ಹುಲಿಬೋನಿಗೆ ಸಾಗಿಸಲು ಫಾರೆಸ್ಟ್‌ನವರಿಗೆ ಹೇಳಿದ. ಮಂಡಕ್ಕಿಯನ್ನು ಬೋನಿನ ಸುತ್ತ ಚೆಲ್ಲಿದ. ಮತ್ತೊಂದಷ್ಟು ಬೋನಿನೊಳಗೆ ಸುರಿದ. ಮೂರು ದಿನದಿಂದ ಉಪವಾಸವಿದ್ದರೂ ಆರಂಭದಲ್ಲಿ ಮಂಗಗಳು ಕೆಳಗೆ ಬರಲೇ ಇಲ್ಲ, ಆದರೆ ಸಿದ್ದ ಹಾಕಿದ್ದ ಮಂಡಕ್ಕಿಪುರಿಯನ್ನು ಪಾರಿವಾಳ, ಕಾಗೆ ತಿಂದು ಹಬ್ಬ ಮಾಡುವುದನ್ನು ಮಂಗಗಳಿಗೆ ಹೆಚ್ಚುಹೊತ್ತು ನೋಡುತ್ತ ಕೂರಕ್ಕೆ ಸಾಧ್ಯವಾಗಲಿಲ್ಲ, ಕೆಳಗೆ ಇಳಿದು ಬಂದು ಕಾಗೆ ಪಾರಿವಾಳ ಓಡಿಸಿ ಪುರಿ ಹೆರಕಕ್ಕೆ ಶುರು ಮಾಡಿದವು. ಸಿದ್ದ ಬೋನಿನೊಳಗೆ ಮಧ್ಯದಲ್ಲಿ ಮಡಕೆಗೆ ನೀರು ತುಂಬಿಟ್ಟ. ಸಂಜೆ ಹೊತ್ತಿಗೆ ಮಂಗನ ಮರಿ ಒಂದು ಬೋನೊಳಗೆ ಹೋಯಿತು. ಅದು ಹೋಗಿದ್ದು ನೋಡಿ ತಾಯಿಯೂ ಹೋಯಿತು. ಸ್ವಲ್ಪಹೊತ್ತಲ್ಲೇ ಹೊರಗಡೆ ಬಿದ್ದಿದ್ದ ಪುರಿ ಖಾಲಿಯಾಗುತ್ತಿದ್ದಂತೆ ಒಂದರ ಹಿಂದೆ ಒಂದು ಬೋನಿನೊಳಗೆ ಹೋಗುವುದು, ಬರುವುದು ಮಾಡುತ್ತಿದ್ದವು. ಹೀಗೆ ಒಳಗೆ ಹೋದವು ಒಳಗೇ ಇದ್ದುದನ್ನು ನೋಡಿ ಸಿದ್ದ ಸನ್ನೆ ತಂತಿ ಎಳೆದ. ಬೋನಿನ ಬಾಗಿಲು ಮುಚ್ಚಿಕೊಂಡಿತು. ಸಿದ್ದ ಬಂದು ನೋಡುತ್ತಾನೆ, ಬೋನ್ ತುಂಬಾ 25-30 ಮಂಗಗಳು ಇದ್ದವು. ಮಧ್ಯದ ಬಾಗಿಲು ಎತ್ತಿದ. ದೊಣ್ಣೆ ತಗೆದುಕೊಂಡು ಅಲ್ಲಿದ್ದ ಮಂಗಗಳನ್ನೆಲ್ಲ ಸೇರಿಸಿ ಮಧ್ಯದ ಬಾಗಿಲು ಹಾಕಲು ತನ್ನ ಸಹಾಯಕ್ಕಿದ್ದ ಗಾರ್ಡ್‌ಗೆ ಹೇಳಿದ. ಮಧ್ಯದ ಬಾಗಿಲು ಮುಚ್ಚಿದ ಮೇಲೆ ಮುಂದಿನ ಬಾಗಿಲು ಎತ್ತಿಟ್ಟ. ಅಷ್ಟೊತ್ತಿಗೆ ಕತ್ತಲಾಗಿತ್ತು.

ಸಿದ್ದನ ಯೋಜನೆ ಯಶಸ್ವಿಯಾಗಿತ್ತು "ಮೊದಲ ದಿನದ ಕಾರ್ಯಾಚರಣೆ ಯಶಸ್ವಿ. ಸುಮಾರು ಮೂವತ್ತಕ್ಕೂ ಹೆಚ್ಚು ಮಂಗಗಳ ಸೆರೆ..." ಅಂತ ಟಿವಿಗಳಲ್ಲಿ ಸುದ್ದಿ ಬಿತ್ತರಗೊಳ್ಳುತ್ತಿತ್ತು.

ಅರಣ್ಯ ಇಲಾಖೆಯ ಸಿಬ್ಬಂದಿ ಬೋನಿಗೆ ಬಿದ್ದಿದ್ದ ಮಂಗಗಳನ್ನು ಮತ್ತೊಂದು ಕಂಪಾರ್ಟ್‌ಮೆಂಟ್‌ಗೆ ಸರಿಸಿ ರಾತ್ರಿ ಅವನ್ನೆಲ್ಲ ಮೆಶ್ ಸುತ್ತಿದ್ದ ಹುಲಿ ಬೋನಿಗೆ ತುಂಬಿ ಲಾರಿಯಲ್ಲಿ ಆ ಬೋನನ್ನು ತೆಗೆದುಕೊಂಡು ಅಭಯಾರಣ್ಯಕ್ಕೆ ಹೋಗಿ ಮಂಗಗಳನ್ನು ಬಿಟ್ಟು ಬಂದರು. ಹೀಗೆ ಹೆಚ್ಚುಕಡಿಮೆ ಮಠದಲ್ಲಿ ಮತ್ತು ಊರಿನಲ್ಲಿ ಇದ್ದ ಎಲ್ಲಾ ಮಂಗಗಳನ್ನು ಹಿಡಿದು ಅಭಯಾರಣ್ಯ ಎಂದು ಘೋಷಿಸಲಾಗಿದ್ದ ಜಾಗಕ್ಕೆ ಬಿಡಲಾಯಿತು.

ಆದರೆ ಅಷ್ಟು ದಿನ ಪೇಟೆಯಲ್ಲಿ ತಿಂದು ಕೊಬ್ಬಿದ್ದ ಮಂಗಗಳು ಆಸುಪಾಸಿನ ರೈತರ ಜಮೀನುಗಳಿಗೆ ನುಗ್ಗಿದವು. ನಾಯಿ, ಕೋವಿ ಯಾವುದಕ್ಕೂ ಜಗ್ಗದ ಮಂಗಗಳು ಬಾಳೆಗೊನೆ, ಬಾಳೆಗಿಡ, ತರಕಾರಿ, ಭತ್ತ ಕೊನೆಗೆ ಎಳೆ ಅಡಿಕೆಕಾಯಿಯನ್ನೂ ಕಿತ್ತು ಚೀಪಿ ಬಿಸಾಡಲು ಶುರು ಮಾಡಿದವು.

ಅಲ್ಲಿಯತನಕ ಸರ್ಕಾರದ ಯಾವ ಬೆದರಿಕೆಗೂ ಬಗ್ಗದೆ, ಸರ್ಕಾರ ನೀಡಲು ಮುಂದಾದ ಪರಿಹಾರದ ಪ್ಯಾಕೇಜನ್ನೂ ಒಪ್ಪಿಕೊಳ್ಳದೆ "ಪ್ರಾಣ ಹೋದರು ಸೈ ಆದರೆ ನಮ್ಮ ಭೂಮಿಯನ್ನು ಮಾತ್ರ ಬಿಡುವುದಿಲ್ಲ. ಇದು ನಮ್ಮ ನೆಲ, ನಮ್ಮ ಜಲ" ಎನ್ನುತ್ತಿದ್ದ ರೈತರು ಮಂಗನ ಹಾವಳಿಗೆ ಬೇಸತ್ತು ಆ ಬ್ರಾಹ್ಮಣನಂತೆ ಕಾಡನ್ನು ಬಿಟ್ಟು ನಾಡಿಗೆ ಹೊರಟು ನಿಲ್ಲಲಾರಂಭಿಸಿದರು.

ಅವತ್ತು ಬಸ್ಸಿನಲ್ಲಿ ಸಿಕ್ಕಿದ್ದ ಬ್ರಾಹ್ಮಣರು ಹೇಳಿದ್ದ ಮಾತು ಎಂತಹ ನೋವಿನಿಂದ ಕೂಡಿತ್ತೆಂದರೆ ಮಂಗಗಳ ಬ್ಯಾಟೆ ಬಗ್ಗೆ ಇಷ್ಟೆಲ್ಲ ನೆನಪುಗಳನ್ನು ಕೆರಳಿಸಿತು. ಇದು ಹೀಗೆಯೇ ಮುಂದುವರೆದರೆ ಮಲೆನಾಡಿನ ಭವಿಷ್ಯವೇನು....?

(ಮುಗಿಯಿತು)



ರಾಜೇಶ್ವರಿಯವರ ತೇಜಸ್ವಿಯಾನ

ಕನ್ನಡ ಸಾಂಸ್ಕೃತಿಕ ಜಗತ್ತಿನ ನೂರಿನ್ನೂರು ವರ್ಷಗಳ ಇತಿಹಾಸದಲ್ಲಿ ತೇಜಸ್ವಿಯದ್ದು ಬಹಳ ಕಲರ್‌ಫುಲ್ ಬದುಕು. ಕೇವಲ ಬರಹಗಳಿಂದಷ್ಟೇ ತೇಜಸ್ವಿಯನ್ನು ಕಂಡಿರುವವರಿಗೆ, ಅವರ ಬಗ್ಗೆ ಇನ್ನಷ್ಟು ತಿಳಿಯಲು, ಆರಾಧಿಸಲು ಹಾಗೂ ವಿಮರ್ಶಿಸಲೂ ಕೂಡಾ ಈ ಪುಸ್ತಕ ಒಂದು ಚೆನ್ನದ ಗಣಿಯಂತಿದೆ.


ಸಮೃದ್ಧ ಜೀವನಾನುಭವ ಅಂತದನ್ನು ದಾಖಲಿಸುವ ಸಂದರ್ಭ ಹಾಗೂ ಅನಿವಾರ್ಯತೆ ಎಲ್ಲವೂ ಮೇಳೈಸಿ ಬಂದು ರಾಜೇಶ್ವರಿಯವರೀಗ ಕನ್ನಡದ ಹೊಸ ಬರಹಗಾರ್ತಿ.

'ನನ್ನ ತೇಜಸ್ವಿ' ಅವರ ಮೊದಲ ಪುಸ್ತಕ.

ಬಹುಶಃ 1960 ರ ದಶಕದಲ್ಲಿ ತೇಜಸ್ವಿಗೆ ಬರೆಯುತ್ತಿದ್ದ ಅಸಂಖ್ಯ ಪ್ರೇಮ ಪತ್ರಗಳನ್ನು ಬಿಟ್ಟರೆ ಈ 50 ವರ್ಷಗಳಲ್ಲಿ ಅವರು ಮುಖ್ಯ ಅನಿಸುವ ಬೇರೇನನ್ನೂ ಬರೆದಂತೆ ಕಾಣೆ. ತೇಜಸ್ವಿಯ ಸಂಗಾತಿಯಾಗಿ, ಗೃಹಿಣಿಯಾಗಿ ತಾನು ಸಂತೃಪ್ತಳೆಂದು ಅವರೇ ಹಲವೆಡೆ ದಾಖಲಿಸುತ್ತಾರೆ. ಈ ಅವಧಿಯಲ್ಲಿ ರಾಜೇಶ್ವರಿಯವರ ಆಸಕ್ತಿಗಳು ಕೃಷಿ, ಕೈತೋಟ, ಪರಿಸರ ಕುರಿತ ವಿವೇಕವಾಗಿ ಆನಂತರ ಪುಸ್ತಕೋದ್ಯಮದ ಹೊಣೆ, ಮುಖಪುಟ ವಿನ್ಯಾಸ ಇತ್ಯಾದಿ ಕುಶಲತೆಯಾಗಿಯೂ ಬೆಳೆದಿವೆ. ತೇಜಸ್ವಿಯ ಅಷ್ಟೊಂದು intense ಆದ ವೈವಿಧ್ಯಮಯ ಬದುಕಿನ ಜೊತೆಗೆ consistent ಆಗಿ ಹೆಜ್ಜೆ ಹಾಕಿದ ರಾಜೇಶ್ವರಿಯವರು ತಮ್ಮ ಐವತ್ತು ವರ್ಷಗಳ ಒಡನಾಟವನ್ನು ಐದುನೂರಾ ಐವತ್ತು ಪುಟಗಳಲ್ಲಿ ನಿರೂಪಿಸಿದ್ದಾರೆ. ಪ್ರಖ್ಯಾತ ಬರಹಗಾರರ ಕುಟುಂಬದೊಂದಿಗೆ ಇದ್ದರೂ ರಾಜೇಶ್ವರಿಯವರು ಯಾರ ಪ್ರಭಾವಕ್ಕೂ ಸಿಗದಂತೆ ತಮ್ಮದೇ ಸರಳ ಆಪ್ತ ಶೈಲಿಯಲ್ಲಿ ಬರೆಯುತ್ತಾರೆ.

ಕನ್ನಡ ಸಾಂಸ್ಕೃತಿಕ ಜಗತ್ತಿನ ನೂರಿನ್ನೂರು ವರ್ಷಗಳ ಇತಿಹಾಸದಲ್ಲಿ ತೇಜಸ್ವಿಯದ್ದು ಬಹಳ ಕಲರ್‌ಫುಲ್ ಬದುಕು. ಕೇವಲ ಬರಹಗಳಿಂದಷ್ಟೇ ತೇಜಸ್ವಿಯನ್ನು ಕಂಡಿರುವವರಿಗೆ, ಅವರ ಬಗ್ಗೆ ಇನ್ನಷ್ಟು ತಿಳಿಯಲು, ಆರಾಧಿಸಲು ಹಾಗೂ ವಿಮರ್ಶಿಸಲೂ ಕೂಡಾ ಈ ಪುಸ್ತಕ ಒಂದು ಚೆನ್ನದ ಗಣಿಯಂತಿದೆ.

1958 ರ ಸುಮಾರಿಗೆ ರಾಜೇಶ್ವರಿಯವರು ಓದಲೆಂದು ಮೈಸೂರಿಗೆ ಹೋಗುವಷ್ಟರಲ್ಲಿ ತೇಜಸ್ವಿ ಆದಾಗಲೇ ಕ್ಯಾಂಪಸ್‌ನ ಹೀರೋ. ತೇಜಸ್ವಿ ಎತ್ತ ಸುಳಿದುಹೋದರೂ ಹುಡುಗಿಯರಿಗೆ ಒಂಥರಾ ರೋಮಾಂಚನ. ಕೊಂಚ ಬಿಗುಮಾನದ ರಾಜೇಶ್ವರಿಯವರಿಗೂ 'ಯಾರೀ ತೇಜಸ್ವಿ, ಒಮ್ಮೆ ನೋಡಬೇಕಲ್ಲ' ಎನ್ನುವ ಕುತೂಹಲ. ಅದು ಬೇಗನೆ ಪರಿಚಯವಾಗಿ, ಪ್ರೇಮವಾಗಿ ಕೊನೆಗೆ ಐದು ದಶಕಗಳ ದೀರ್ಘ ಸಾಹಚರ್ಯವಾಗಿ ಮುಂದುವರೆಯುತ್ತದೆ. ತೇಜಸ್ವಿ ನಿರ್ಗಮಿಸುವ ಕೇವಲ ಹದಿನೈದು ದಿನಗಳ ಹಿಂದೆ ಒಮ್ಮೆ ಹಿಂದಿನದೆಲ್ಲಾ ನೆನೆಯುತ್ತಾ "ನೀನು ನನಗೆ ಕಂಪೆನಿ ಕೊಟ್ಟಲ್ಲೇ ಮಾರಾಯ್ತಿ, ನನಗಂತೂ ಎಲ್ಲವೂ ಆಶ್ಚರ್ಯವಾಗುತ್ತೆ ಇವತ್ತು ಈ ತುದಿಯಲ್ಲಿ ನಿಂತು ನೋಡಿದರೆ, ಭೂತನಕಾಡು... ಹುಣ್ಣಿಮೆ ಚಂದಿರ" ಎಂದೆಲ್ಲಾ ಹೇಳಿರುತ್ತಾರೆ.



ಹೊರಡುವ ಗಳಿಗೆಯನ್ನು ಸೆನ್ಸ್ ಮಾಡುತ್ತಾ, ಹಿಂತಿರುಗಿ ನೋಡಿಕೊಳ್ಳುವ, ಸ್ವಕೇಂದ್ರಿತ ತೇಜಸ್ವಿಯ ವಿಶಿಷ್ಟ ಜೀವನದೃಷ್ಟಿಕೋನಕ್ಕೆ ಇದು ಉದಾಹರಣೆಯಂತಿದೆ.


ರಾಜೇಶ್ವರಿಯವರನ್ನು ರಾಜೇಶ್ ಎಂದೆನ್ನುತ್ತಾ ಪ್ರೇಮಪತ್ರಗಳನ್ನು ಬರೆಯುತ್ತಿದ್ದ ತೇಜಸ್ವಿ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ.

"I hate you if you become formal"

-ಬಹುಶಃ ಆಗಿನ್ನು ತೇಜಸ್ವಿಗೆ ಇಪ್ಪತ್ನಾಲ್ಕರ ವಯಸ್ಸು, ಪ್ರೇಮವನ್ನು ಸಾಂಪ್ರದಾಯಿಕವಾಗಿ ಪರಿಭಾವಿಸುತ್ತಿದ್ದ ತನ್ನ ಗೆಳತಿಯ ರೀತಿ ಕಂಡು ತೇಜಸ್ವಿ ಹಾಗೆಂದಿರಲಿಕ್ಕೂ ಸಾಕು.

ಆದರೆ ಅವರ ಇಚ್ಛೆಯನ್ನು ಮೀರಿ 'ನನ್ನ ತೇಜಸ್ವಿ' ಬರಹ ಬಹುತೇಕ ಕಡೆ ಭಾವಪೂರ್ಣವಾಗಿ ಆದರೆ ಫಾರ್ಮಲ್ ಆಗಿಯೇ ನಿರೂಪಿತಗೊಂಡಿದೆ. ಅರ್ಥಾತ್ ಈ ಬರಹದ ಬಹುದೊಡ್ಡ ಮಿತಿ ಅಂದರೆ ತೇಜಸ್ವಿಯ ಆರಾಧನೆ!

ಅಂದರೆ ಎಲ್ಲಿಯೂ ವಿಮರ್ಶೆಯ ದನಿ ಕಾಣದಿರುವುದು. ತನಗೆ ಸಿಕ್ಕ ತೇಜಸ್ವಿಯೊಂದಿಗಿನ ಸಾಂಗತ್ಯವನ್ನು ತುಸು ಅಂತರ



ದಲ್ಲಿಟ್ಟು ನೋಡಲು ಸಾಧ್ಯವಾಗದಿರುವುದು ಈ ಕೃತಿಯ ಮಿತಿ. ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಮಾಮೂಲಿ ಹುಡುಗನಂತಿರದೆ ವಿಭಿನ್ನವಾಗಿರುತ್ತಿದ್ದ ತೇಜಸ್ವಿ ಸದಾ ಕ್ಷೋಭೆಯ ಮನಸ್ಥಿತಿಯಲ್ಲಿರುತ್ತಿದ್ದರೆಂಬುದು ಕುತೂಹಲಕಾರಿಯಾಗಿ ಕಾಣುತ್ತದೆ. ತನ್ನ ಬದುಕು, ಭವಿಷ್ಯ, ಕಾಯಕ ಹಾಗೂ ಬರಹ ಕುರಿತಂತೆ ಕೆಲ ವರ್ಷ ಅತಂತ್ರ ಸ್ಥಿತಿ ಅನುಭವಿಸಿದ ತೇಜಸ್ವಿಯ ಕ್ಷೋಭೆ ಅಂತಿಮವಾಗಿ ತಹಂಬದಿಗೆ ಬರುವುದೇ ಅವರು ಮೈಸೂರು ಪೇಟೆಯ ಜೀವನ ಬಿಟ್ಟು ಕಾಫಿ ಬೆಳೆಗಾರನಾಗಿ ಮೂಡಿಗೆರೆಗೆ ಹೋದಾಗ. ಅಲ್ಲಿ ಕಾಫಿ ತೋಟ ಮಾಡಲು ಜಮೀನು ಖರೀದಿಸುವ ಸಂದರ್ಭದಲ್ಲಿ ತೇಜಸ್ವಿ "ನಾನೀಗ ಹೇಗೋ ಮಾಡಿ ನಲವತ್ತು ಸಾವಿರ ರೂಪಾಯಿ ಜೋಡಿಸಬಲ್ಲೆ" ಅನ್ನುತ್ತಾರೆ. ಇದಾದದ್ದು 1964 ರ ಸುಮಾರಿನಲ್ಲಿ, ಇವತ್ತಿನ ಲೆಕ್ಕದಲ್ಲಿ ನೋಡಿದರೆ ಅದು 5 ಕೋಟಿ ರೂಪಾಯಿಗೂ ಹೆಚ್ಚು, ಮತ್ತೊಂದೆಡೆ 'ಅಣ್ಣನ ನೆನಪು' ಬರೆಯುವಾಗ ತೇಜಸ್ವಿ ಒಂದು ಕಡೆ "ನಾವು ಬಡತನದಲ್ಲೇ ಹುಟ್ಟಿ ಬಡತನದಲ್ಲೇ ಬೆಳೆದವೆನಿಸುತ್ತದೆ" ಎಂತಲೂ ದಾಖಲಿಸುತ್ತಾರೆ.

ಇದನ್ನು ಓದುಗರು ಒಂದು ವಿಶೇಷ ಅಂಶವೆಂಬಂತೆ ನೋಡುವ ಅಗತ್ಯವಿಲ್ಲ, ಆದರೂ ಉಳಿಯುವ ಪ್ರಶ್ನೆ ಏನೆಂದರೆ

ಬಡತನದ ನಿಜವಾದ ಅಳತೆಗೋಲು ಯಾವುದೆಂಬುದು?

ಮಲೆನಾಡಿಗೆ ಬರುವ ಮುನ್ನ ಆಲ್ಬರ್ಟ್ ಹಕ್ಸ್ಲಿ, ಡಿ.ಎಚ್. ಲಾರೆನ್ಸ್ ಮುಂತಾದವರನ್ನು ಓದಿ ಮಾನವ ಸಮಾಜ ಹಾಗೂ ತತ್ವಶಾಸ್ತ್ರ ಕುರಿತ ಅವರ ಕೆಲವು ಲೇಖನಗಳನ್ನು ಅನುವಾದಿಸುತ್ತಾರೆ ತೇಜಸ್ವಿ. ಅವರ ವ್ಯಕ್ತಿ ವಿಶಿಷ್ಟ ಸಿದ್ಧಾಂತದಲ್ಲಿ ಅವೆಲ್ಲಾ ಚರ್ವಿತಚರ್ವಣವಾಗಿ ದಾಖಲಾಗಿವೆ. ಸದಾ ಸಮಷ್ಟಿಯ ಮಟ್ಟದಲ್ಲೇ ಯೋಚಿಸುತ್ತಾ, ಮನುಷ್ಯನ ಬದುಗಡೆಯ ಹಾದಿ ಯಾವುದೆಂದು ತರ್ಕಿಸುವ ತೇಜಸ್ವಿಗೆ ಇನ್ನೊಂದು ಸ್ತರದಲ್ಲಿ ಮೈಸೂರಿನ ಕಾಲೇಜು ಹುಡುಗಿಯರು 'ತಿಂಗಳಿಗೊಮ್ಮೆ ನೆಟ್ಟಗೆ ಮುಟ್ಟಾಗುವುದನ್ನು ಬಿಟ್ಟರೆ ಜೀವನದ ಇನ್ಯಾವ ತುಮುಲಗಳಿಗೂ ಸಿಕ್ಕದ ಅರಗಾಳಿಗಳಂತೆ' ಕಾಣುತ್ತಾರೆ (ಪುಟ 51).

ಇದನ್ನು ಇಲ್ಲೇಕೆ ಪ್ರಸ್ತಾಪಿಸಬೇಕಾಯಿತೆಂದರೆ ಈ ನೆಟ್ಟಗೆ ಮುಟ್ಟಾಗುವುದು ಮಾತ್ರ ಗೊತ್ತಿದ್ದ ಹುಡುಗಿಯರಿಗೆ ತೇಜಸ್ವಿಗಿದ್ದಂತ previlege ಗಳಾದ ಒಂದಿಡೀ ಸ್ಕೂಟರನ್ನೇ ಬಿಚ್ಚಿ ಹರಡಬಲ್ಲ, ಫೋಟೋಗ್ರಫಿ, ಸುತ್ತಾಟಗಳ ಸೌಲಭ್ಯ ಹೇಗೆ ತಾನೆ ಸಿಗಲು ಸಾಧ್ಯವಿತ್ತು?

ಹಾಗೆ ನೋಡಿದರೆ ರಾಜೇಶ್ವರಿಯವರು ತಮ್ಮ ದಾಂಪತ್ಯ ಜೀವನದ ಆರಂಭದ ದಿನಗಳಿಂದ ಕೆಲ ಕಷ್ಟ, ಬಡತನಗಳ ವಿವರ ನೀಡುತ್ತಾರೆ, ಅದು ನಿಜವಿರಲೂಬಹುದು. ಆದರೆ ತಲೆಮಾರುಗಳ ಲೆಕ್ಕದಲ್ಲಿ, ಜೀವನ ಶೈಲಿಯಲ್ಲಿ ತೇಜಸ್ವಿ ಮಲೆನಾಡಿನ ಶ್ರೀಮಂತ ಕುಟುಂಬದ ವಿದ್ಯಾವಂತ ಯುವಕನಾಗಿದ್ದರು ಎಂಬುದೇ ನಿಜ.

ರಾಜೇಶ್ವರಿಯವರ ಬರಹದಲ್ಲಿ ತೇಜಸ್ವಿಯ ಬರಹಗಳಲ್ಲಿ ಕಾಣಸಿಗದ ಅವರ ಬದುಕಿನ ಹಾಗೂ ಜೀವನಶೈಲಿ ಕುರಿತ ಅನೇಕ ಕುತೂಹಲಕಾರಿ ವಿಚಾರಗಳು ನಿರೂಪಿತವಾಗಿವೆ. ಅವರ ಸರಳ, ಮುಗ್ಧ ಬರವಣಿಗೆಯ ಶೈಲಿ ನಿಜಕ್ಕೂ ಚೇತೋಹಾರಿಯಾಗಿದೆ. ತೇಜಸ್ವಿಗೆ ಹೃದಯಾಘಾತದ ಸಾವಿನ ಸನ್ನಿವೇಶವನ್ನು ದಾಖಲಿಸುತ್ತಾ "ಕಾಡಿನ ಆಕಾಶದೆತ್ತರಕ್ಕೆ ಬೆಳೆದ ದೊಡ್ಡಮರವೊಂದು ಬಿದ್ದ ಸದ್ದಾಯಿತು. 'ಅಯ್ಯೋ, ನಿಮ್ಮಣ್ಣ ಬಿದ್ದರೆಂದು ಕಾಣುತ್ತೆ ಕಣೆ ಈಶಾ' ಎಂದು ಓಡಿದೆ...." ಎನ್ನುತ್ತಾರೆ. ಕೊನೆಗೆ "ನನ್ನ ತೇಜಸ್ವಿ ಕಾಡಿನ ಉಸಿರಲ್ಲಿ ಉಸಿರಾಗಿ ಹೋದರು. ಅವರು ನನಗೆ ಬೇಕು" ಎನ್ನುವ ವಾಕ್ಯ ಓದುತ್ತಿದ್ದಂತೆ ಓದುವವರ ಕಣ್ಣಲ್ಲೂ ನೀರು ಬಾರದಿರದು.

ತೇಜಸ್ವಿಯೆಂಬ ವಿಶಿಷ್ಟ ಜಗತ್ತಿನಲ್ಲೊಂದು ಯಾನ ಮಾಡಿ ಬಂದಂತೆ ಭಾಸವಾಗುವ ಈ ಪುಸ್ತಕದ ಓದು ಒಂದು ಹೃದಯಸ್ಪರ್ಶಿ ಅನುಭವ ನೀಡುತ್ತದೆ. ಅವರ ಬಗ್ಗೆ ಇನ್ನಷ್ಟು ಪ್ರೀತಿ ಅಭಿಮಾನವನ್ನು ಪೋಷಿಸುವಂತಿದೆ. ಆದರೆ ಅದೇ ವೇಳೆಯಲ್ಲಿ ತೇಜಸ್ವಿಯ ಗೊಂದಲದ ಸೈದ್ಧಾಂತಿಕ ನಿಲುವುಗಳು, ಪೆದ್ದು ರಾಜಕೀಯ ಹೇಳಿಕೆಗಳು, ಈ ಪುಸ್ತಕದಲ್ಲಿ ಚರ್ಚೆಯಾಗುವ ಸಾಧ್ಯತೆಗಳೇನೂ ಇರಲಿಲ್ಲವೆನಿಸುತ್ತದೆ.

ಆದರೂ ಕೆಲವನ್ನಾದರೂ ಇಲ್ಲಿ ಹೇಳಲೇಬೇಕಿದೆ.


1987ರಲ್ಲಿ ಶೃಂಗೇರಿಯಲ್ಲಿ ನಡೆದ ಅಂತರ್ಜಾತಿ ವಿವಾಹಿತರ ಸಮ್ಮೇಳನವು ತೇಜಸ್ವಿ-ರಾಮದಾಸ್ ಮುಂತಾದವರ ಪ್ರೇರಣೆಯಿಂದ ನಡೆಯಿತು ಎನ್ನುವಂತೆ ಇಲ್ಲಿ ದಾಖಲಾಗಿದೆ. ವಾಸ್ತವವಾಗಿ ಆ ಸಮಾವೇಶದ ರೂವಾರಿ ಕಲ್ಕುಳಿ ವಿಠಲ್ ಹೆಗ್ಡೆ. ಆದರೆ ಸ್ವತಃ ತೇಜಸ್ವಿಯೇ ಅದನ್ನೆಂದೂ ನೆನೆಯುತ್ತಿರಲಿಲ್ಲ, ಅದೇ ರೀತಿ ಕುದುರೆಮುಖ ನ್ಯಾಷನಲ್ ಪಾರ್ಕ್ ಹಾಗೂ ಕಬ್ಬಿಣದ ಗಣಿಗಾರಿಕೆ ವಿರೋಧಿ ಹೋರಾಟಗಳು ತೇಜಸ್ವಿಯ ಕೊಡುಗೆ ಎಂಬಂತೆ ದಾಖಲಾಗಿದೆ. ಸಾವಿರಾರು ಜನ ವರ್ಷಾನುಗಟ್ಟಲೆ ಬೀದಿಗಿಳಿದು ಹೋರಾಡಿದ್ದು ನೂರಾರು ಕಾರ್ಯಕರ್ತರು ಅದಕ್ಕಾಗಿ ಶ್ರಮಿಸಿದ್ದನ್ನು ಬಹಳ ನಾಜೂಕಾಗಿ ಮರೆತು ಬಿಡಲಾಗಿದೆ. ಅದಿರಲಿ, ಈ ತೇಜಸ್ವಿ ಆಗ ಎಷ್ಟು ಕೆಟ್ಟ ನಿಲುವು ತಾಳಿದ್ದರೆಂದರೆ ಉಲ್ಲಾಸ ಕಾರಂತ, ನೀರಜ್ ಜೈನ್, ಪ್ರದೀಪ್ ಭಾರ್ಗವ ಮುಂತಾದ ಜನವಿರೋಧಿಗಳ ಜೊತೆ ಸೇರಿ ಹೋರಾಟಕ್ಕೇ ಅನ್ಯಾಯ ಮಾಡಿಬಿಟ್ಟರು.

ಚಳವಳಿ, ಹೋರಾಟಗಳೆಂದರೆ 'ಸಮಸ್ಯೆಗಳನ್ನು ಹುಡುಕಿಕೊಂಡು ಓಡಾಡುವ' ಜನ, ಎನ್ನುವ ಉದ್ಧಟ ನಿಲುವು ತೇಜಸ್ವಿಗಿತ್ತು, ಹಾಗಾಗಿಯೇ ತೇಜಸ್ವಿ ಅದ್ಭುತ ಬರಹಗಾರ ಎನಿಸಿಕೊಂಡರೂ ಅದೇ ವೇಳೆಯಲ್ಲಿ ಹಲವೊಮ್ಮೆ ಪೆದ್ದು ಚಿಂತಕರಾಗಿಯೂ ಇರುತ್ತಿದ್ದರು.

ಪ್ರಖ್ಯಾತ ಶಿಕಾರಿದಾರ, ಪರಿಸರವಾದಿ ಜಿಮ್ ಕಾರ್ಬೆಟ್‌ನ `My India' ಪುಸ್ತಕದ ಜೊತೆ ತೇಜಸ್ವಿ ನೀಡುವ ಜನಜೀವನದ ಬರಹಗಳನ್ನು ಹೋಲಿಸಿ ನೋಡಿದರೆ ಆ ಅಂತರ ಗೊತ್ತಾಗುತ್ತದೆ. ತೇಜಸ್ವಿಯ ಬರಹಗಳು, ಅವುಗಳ content ಆ ಪುಸ್ತಕಗಳ ಬೆಲೆ, ಓದುಗ ವರ್ಗ ಯಾರಾಗಿದ್ದರೆಂಬುದು ಪರಿಶೀಲನಾರ್ಹ.

ಮಲೆನಾಡಿನ ಶ್ರೀಮಂತ ಕುಟುಂಬದ ಹಿನ್ನೆಲೆಯಿಂದ ಬಂದಿದ್ದ ತೇಜಸ್ವಿ ವೈವಿಧ್ಯಮಯ ಜೀವನಾಸಕ್ತಿಗಳನ್ನು ಹೊಂದಿದ್ದವರು. ಅವರ ಸಮಕಾಲೀನ ಇನ್ನಿತರ ಕೆಲ ಬರಹಗಾರರಿಗಿಂತ ಗೊದ್ದು ಜೀವನಶೈಲಿಯೇ ತೇಜಸ್ವಿಯವರನ್ನೂ ಇನ್ನಷ್ಟು ವಿಶಿಷ್ಟವಾಗಿಸಿತ್ತು,

'ನನ್ನ ತೇಜಸ್ವಿ' ಒಂದು ಮಹತ್ವದ, ಚಂದದ ಬರಹ. ರಾಜೇಶ್ವರಿಯವರಿಗೆ ಅಭಿನಂದನೆಗಳು.



ನನ್ನ ಅಜ್ಜ

ಮಾತೆತ್ತಿದರೆ
ನನ್ನ ಹಸಕರ
ಕೋಳಿಕೊಕ್ಕ, ಹೊಲ, ಮನೆ
ಪೈರುಪಚ್ಚೆ ಎನ್ನುತ್ತಿದ್ದ ನನ್ನ ಅಜ್ಜಿ
ಈಗ ಎಲ್ಲಿ?

ಜೋಡಿ ಕಡಗದ ಕೈಯಿಂದ
ಬರಸೆಳೆದು ಮುತ್ತಿಟ್ಟು
ಬಾಯ ತಂಬುಲದ
ಕಮಟು ವಾಸನೆಗೆ
ಮೈತ್ರಿದ ಜೊಲ್ಲಿಗೆ
ಕೊಸರಾಡಿದರೂ ಬಿಡದ
ಅಜ್ಜಿ ಈಗ ಎಲ್ಲಿ?

ಯಾರ ಕಣ್ಣಿಗೂ ಬೀಳದಂತೆ
ಕಾಪಿಟ್ಟು, ಸೆರಗ ಮರೆಯಲ್ಲಿ
ಸೈಗೆ ಮಾಡಿ, ಪಿಸುದನಿಯಿಂದ
ಕರೆದು ಬೆಣ್ಣೆಮುದ್ದೆಯ
ತುತ್ತಿಡುತ್ತಿದ್ದ
ನನ್ನಜ್ಜಿ ಈಗೆಲ್ಲಿ?

ಚಿತ್ರ ವಿಚಿತ್ರ ಒಗಟುಗಳ
ಹಟ್ಟುಹಾಕಿ ಚಿತ್ತು ಮಾಡಿ
ನಕ್ಕು ಗುಟ್ಟು ಬಿಡಿಸುತ್ತಿದ್ದ
ತುಂಟ ಅಜ್ಜಿ ಎಲ್ಲಿ?
ರಂಗುರಂಗಿನ, ಚಿತ್ರ ವಿಚಿತ್ರ
ಚಿತ್ತಾರದಿ, ನೇಯ್ದ
ಬೆರಗು ಭ್ರಮೆಯ
ಕಥೆ ಹೊಸೆಯುತ್ತಿದ್ದ
ಕಿಲಾಡಿ ನನ್ನಜ್ಜಿ ಈಗೆಲ್ಲಿ?

ಮಾದರಿಗೆ ಇಂದಿರಾ ಗಾಂಧಿ
ಭವ್ಯತೆಗೆ ಮೈಸೂರು
ನಗರವೆಂದರೆ ಬೆಂಗಳೂರು,
ಉಳಿದೆಲ್ಲವನೂ ನಿವಾಳಿಸಿ
ಎಸೆ ಎಂದವಳೇ
ಹತ್ಯ ಓದುವಾಗ ಗುಟ್ಟಾಗಿ
ಕಿವಿಗೊಡುತ್ತಿದ್ದ
ಮುಗ್ಧ ನನ್ನಜ್ಜಿ ಎಲ್ಲಿ?

ಮೇಲ್ಕೋಟೆ ಚೆಲುವಂಗೆ
ಜೋಡಿ ತೆಂಗಿನಕಾಯಿ,
ಬೆಟ್ಟದ ಚಾಮುಂಡಿಗೆ
ಚಿಪ್ಪು ಬಾಳೆ,
ತಾಯಿ ಕನ್ನಂಬಾಡಿ,
ಮಗ್ಗುಲ ಪಿರಿಪಟ್ಟದಮ್ಮ
ನಿಮಗೂ ಕೊಡುವೆ ಕೋಳಿ
ಹರಸಿ ನನ್ನ ಕಂದನ್ನ
ಎಂದನವರತ ಮೊರೆಯಿಡುತ್ತಿದ್ದ
ನನ್ನಜ್ಜಿ ಈಗೆಲ್ಲಿ?

ಸತ್ತ ನನ್ನಜ್ಜಿಯ
ತಬ್ಬಿ ಕೆಳಗಿಳಿಸಿ
ಮುಚ್ಚುವಾಗ
ನನ್ನ ಹೊಟ್ಟೆಯ
ಹಸುಗೂಸಿನಂತೆ
ನನ್ನ ಕಣ್ಣ ಹನಿಗೂ
ಜಗ್ಗದೆ ಮಲಗಿದ್ದ
ನನ್ನಜ್ಜಿ ಈಗೆಲ್ಲಿ?

• ಡಾ. ನಿತ್ಯಾನಂದ ಸುಂಡವ

ಈ ಲಿಂಗಾಯಿತ್ರಿಂಗಾದ್ರೆ ಕೇಡುಗಾಲ ಬತ್ತದೆ ಕಂದ್ರ!

ಯಿಬಾಬ ಸತ್ತೋದ್ನಂತೆ" ಎಂದ ಸೀರನ
ವಲ್ಲಿ ಪಕ್ಕದೂರಿನ ಪಟೇಲ ಸತ್ತನಂತೆ ಎಂಬಷ್ಟೇ
ಭಾವವಿತ್ತು. ಸಾಯಿಬಾಬ ತೀರಿಕೊಂಡ ಸುದ್ದಿ
ರಿಗೆ ಗೊತ್ತಿದ್ದರೂ ಸೀರ ಹೊಸ ಸುದ್ದಿಯಂತೆ,
ಸಗೆ ಹಿಡಿದಾಗ್ಲೆ ವಾರಾಗಿತ್ತು. ಇವತ್ತು ವತ್ತರೆಲೆ

ಯು ಉ ಸೀ ಮ

ಟ್ಟೆಪುರಾಣ

▸ಬಿ. ಚಂದ್ರೇಗೌಡ

ಟ್ರಂತೆ, ಅಂತೂ ದೇವಮಾನ್ಯರಿಗೂ ಸಾವು
' ಎಂದ.

ಕ್ಕೆ ಕಾಳಮಾವ "ದೇವರು ಅಂತ ಪೂಜೆ
ರಾಮ ಕೃಷ್ಣನೆ ಸತ್ತರಪ್ಪ, ಇನ್ನ ಸಾಯಿಬಾಬನ್ನು
ಬ್ಯಕ್ನನ್ನ?" ಎಂದ.

ಗರೆ ರಾಮನೂ ಸತ್ತನೇನೊ ಮಾವ?" ಎಂದು
ಅಚ್ಚರಿ ಕಣ್ಣುಬಿಟ್ಟಳು. ಅದಕ್ಕೆ ಉಗ್ರಿ
ಈ ಲೋಕದಲ್ಲಿ ಹುಟ್ಟಿದೋರ್‍ಯೆಲ್ಲ ಸಾಯ್ಲೆಬೇಕು
ರಾಮನು ವಯಸಾದ ಮ್ಯಾಲೆ ಈ ನಮ್ಮ
ನನಂಗೆ ಅರಮನೆ ಹಾಸಗೆ ಮ್ಯಾಲೆ ಕುಂತಿದ್ದು
ಅದರಲ್ಲಿ ಕೃಷ್ಣನ ಸಾವು ಮಾತ್ರ ತೀರ ಕ್ಯಟ್ಟ
ಎಂದ.

ವುನ್ಯಂಗೆ ಸತ್ತ?"

ರುಕ್ಷೇತ್ರ ಯುದ್ದ ಯಲ್ಲ ಮುಗಿತು.
ರು ಇದೇ ಏಡೂರಪ್ಪನ ತರ ರಾಜ್ಯ ಆಳಕ್ಕೆ
ಡಿಕಂಡ್ರು. ಆಗ ಇವತ್ತು ಕಾಂಗ್ರೆಸ್ಸಿನವು ಜಗಳ
ಅದೇ ತರ ಯಾದವರು ವಡದಾಡಿಕೊಂಡು
ಕೃಷ್ಣ ಅಲ್ಲಿದ್ರೂ ಯಾರಿಗೂ ಸಮಾಧಾನ
ಲಿಲ್ಲ. ಹೋಗಿ ಊರೊರಗಿದ್ದ ಒಂದು ಬಸರಿ
ಕ್ಯಳಗೆ ಕಾಲಮ್ಯಾಲೆ ಕಾಲಾಯ್ಕಂಡು ನಿದ್ದೆ
ನಂತೆ. ಕಾಲಮ್ಯಾಲೆ ಕಾಲಾಕಿದ್ದನಲ್ಲಾ ಅದು
ಹುಲ್ಲೆಕರಿನಂಗೆ ಕಾಣ್ತಂತೆ. ಯಾವನೋ ಈ
ವನಂಥೋನು ಬಾಣ ಬುಟ್ಟ. ಅದು ಕಾಲಿಗೆ
ಕು ಗಾಯಾಯ್ತು, ಮದ್ಲೆ ಕೃಷ್ಣನಿಗೆ ಶುಗರಿತ್ತು,
ಗ್ರಿನ್ನಾಗಿ ಅದೇ ನಂಜಲಿ ಸತ್ತನಂತೆ" ಎಂದು

ಹ ಕಿಷ್ಣನಿಗೆ ಸುಗರಿತ್ತು ಅಂತಿಯಲ್ಲಾ,
ಇವ್ನಾ ನೀನು" ಎಂದು ಜುಮ್ಮಿ ಬೈದಳು.

ಥಾ ದೇವರ ಮನುಸ ಸಾಯಿಬಾಬನಿಗೆ
ಬಂದು ಮನಗಿದ್ದ ಅನ್ನದ ನೀನು ಒಪ್ಪಿಗಳ
ಕೃಷ್ಣನಿಗೆ ಶುಗರಿತ್ತು ಅನ್ನದ ಒಪ್ಪಿಗಬೇಕು
ದ.

ರಲ್ಯಲ್ಲ ಈಸ್ಪುರ ಹುಟ್ಟಲೂ ಇಲ್ಲ ಸಾಯಲೂ
ಪುರುಸ ಅವ್ನು" ಎಂದ ಕಾಳಮಾವ.
ಬಾಬ ಮಂಡೆದತ್ರ ಹುಟ್ಟನಂತೆ" ಎಂದ

"ನಿಜವೇನ್ಲ ಉಗ್ರಿ?" ಎಂದು ಜುಮ್ಮಿ ಅನುಮಾನಗೊಂಡಳು.

"ಅಂಗಂತ ಸಾಯಿಬಾಬನೆ ಅಂದನಂತೆ ಕಣೆ. ಅದಕ್ಕೆ ನೋಡು ಈಗಾಗ್ಲೆ ಮಂಡ್ಯ ಜಿಲ್ಲೆಲಿ ಹುಟ್ಟಿರೊ ಮಕ್ಕಳ ಸಾಯಿಬಾಬನ ಅವ್ರುತಾರ ಅನ್ನಂಗೆ ನೋಡ್ತ ಅವ್ರೆ. ಮುಂದೆ ಅವೇನಾರ ಶಿವರಾಮು, ಚಲುವರಾಯಸ್ವಾಮಿ, ಅಂದಾನಿಯಂಗಾದ್ರೆ ಗತಿಯೇನು?"

"ಸಾಯಿಬಾಬ ಇಲ್ಲೇ ಹುಟ್ಟಿದ ಅಂತ ಯಂಗೆ ಕಂಡಿಡಿಯದು?"

"ಅದು ಒಂಥರಾ ಕಷ್ಟ ಕಣಮಾವ. ಹುಟ್ಟಿದೋನಿಗೆ ಸಾಯಿಬಾಬನ ತಲೆಕೂದ್ಲಿರಬೇಕು, ಆಮ್ಯಾಲೆ ಅವ್ನು ಪುಟ್ಟಪರ್ತಿಲಿ ಏನೇನು ಮಾಡಿದೆ ಅಂತ ಹೇಳಬೇಕು. ಅದ ಜನ ನಂಬಬೇಕು. ಅಂತೂ ಬಾಳ ರಗಳೆನೆ ಅದೆ" ಎಂದ ಉಗ್ರಿ.

"ತಿರಗ ಯಾಕುಟ್ಟತನ್ಲ ಅವ್ನು?"

"ಅದ ಅವ್ನನ್ನೆ ಕೇಳಬೇಕಾಗಿತ್ತು ಕಣಮಾವ. ಕೃಷ್ಣ ಎಂಟತ್ತು ಅವ್ರುತಾರ ಎತ್ತಿದಂಗೆ ಇವ್ನೂ ಒಂದೈದಾರವ್ರುತಾರ ಎತ್ತಬವುದು. ಈಗಾಗ್ಲೆ ಯರಡವ್ರುತಾರಾದೂ."

"ಯರಡ್ಯಾವುಲ?"

"ಅದ ನಾನೇಳ್ತಿನಿ ದ್ವಡಪ್ಪ, ಮದ್ಲು ಶಿರಡಿ ಸಾಯಿಬಾಬ ಅಂತ ಇದ್ದ, ಅವ್ನು ಮೂಲತ ಮುಸ್ಲಿಂ. ಅಂದ್ರೆ ಸಾಬಿ. ಆಗಿನಕಾಲದ ಜನಕೆ ಸಾಬಿಯಾದ್ರೇನು ದೋಬಿಯಾದ್ರೇನು ಅದನ್ಯಲ್ಲ ಕೇಳ್ತಿರಲಿಲ್ಲ. ಕುರಿಬಿದ್ದಳ್ಳದಂಗೆ ಕಾಲಿಗೆ ಬೀಳದು, ಎದ್ದು ಬರದು. ಅಂಗೆ ಮಾಡ್ತಿದ್ರು. ಅಂಗಾಗಿ ಶಿರಡಿ ಸಾಯಿಬಾಬ ಮ್ಯರದು ಸತ್ತ, ಇವತ್ತಿಗೂ ಅವ್ನ ಪ್ರಭಾವ ಜಾಸ್ತಿಯಾಯ್ತಾ ಅದೆ. ಅವ್ನೇ ಮುಂದೆ ಸಾಯಿಬಾಬ ಆಗಿ ಹುಟ್ಟಿ ಬಂದನಂತೆ. ಈಗ ಈ ಸಾಯಿಬಾಬ ಇನ್ನ ಹತ್ತು ವರುಸದ ನಂತರ ಕಾವೇರಿ ತೀರದಲ್ಲಿ ಹುಟ್ಟಿ ಬಂದನಂತೆ" ಎಂದ ವಾಟಿಸ್ಸೆ.

"ಅಂಗರೆ ಹತ್ತೋರ್ಸ ಕಾಯಬೇಕೆ ಅವ್ನು ತಿರಗ ಹುಟ್ಟಿ ಬರಕ್ಕೆ."

"ಊ ದ್ವಡಪ್ಪ, ಸಾಯಿಬಾಬ ನಾನು ತೊಂಬತ್ತಾರೊರಸಕ್ಕೆ ಸಾಯ್ತಿನಿ ಅಂದಿದ್ರು. ಹತ್ತೊರ್ಸ ಮದ್ಲೆ ಸತ್ತಿರದ್ರಿಂದ ಇನ್ನ ಹತ್ತೊರಸ ಕಾಯಬೇಕು ದ್ವಡಪ್ಪ."

"ಹತ್ತೊರಸಗಂಟ ಎಲ್ಲಿರತರೆ?" ಎಂದಳು ಜುಮ್ಮಿ.

"ಎಲ್ಲಿರತರೆ ಅಂದ್ರೆ ಏನೇಳನಕ್ಕ, ಬಹುಶಃ ವಳ್ಳೆ ತಂದೆ ತಾಯಿ ಸೆಲೆಕ್ಟ ಮಾಡ್ತ ತಿರಗಬಹುದು."

"ಈಗಿನ ಕಾಲ್ದಲ್ಲಿ ವಳ್ಳೆ ತಂದೆತಾಯಿ ಸಿಗದು ಕಷ್ಟ ಕಂಡ್ರೋ" ಎಂದ ಉಗ್ರಿ.

"ಅದ್ಕೆ ಆಲವೇನೋ ಹತ್ತೊರ್ಸ ಟೈಂ ತಗಂತಿರದು. ರಜನೀಶ್ ಅನ್ನೊ ಒಬ್ಬ ಸೆಕ್ಸ್ ಗುರು ಇದ್ದ. ಅವನು ವಳ್ಳೆ ತಂದೆತಾಯಿ ಹುಡಕಕ್ಕೆ ನೂರಾರು ವರ್ಸ ತಗಂಡನಂತೆ ಗೊತ್ತೆ?"

"ಇವ್ರುರೇಳದ್ಯಲ್ಲ ನಿಜವೇನೊ ಮಾವ?" ಎಂದಳು ಜುಮ್ಮಿ.

"ಯಂಗೆ ಅಂತ ಹೇಳನವ್ವ. ಮದ್ಲೆ ಇವ್ರು ತಲರಟೆ ನನ್ನ ಮಕ್ಕಳು. ನಾವಿಂಗೇಳಿದ್ರೆ ಅವ್ರುರಂಗೇಳ್ತರೆ. ಅಂಗೇಳಿದ್ರೆ ಹಿಂಗೇಳ್ತರೆ. ಯಾವುದು ದಿಟ ಅಂತ ಕಾಣನಾ?"

"ಇಷ್ಟ ತಿಳಕ ದ್ವಡಪ್ಪ ಸಾಕು. ಮನುಷ್ಯ ತಿರಗ ಹುಟ್ಟಬೇಕಾದ್ರೆ ಅವ್ನ ಕೈಲಿ ಅಪ್ಪ ಅವ್ವನ್ನ ಸೆಲೆಕ್ಟ ಮಾಡಿಕಳಕ್ಕಾಗದಿಲ್ಲ. ಅಂಥಾ ಶಕ್ತಿಯೇನಾರ ಇದ್ರೇ ನಾನು ನಿನ್ನ ಹೊಟ್ಟೆಲಿ ಅಥವಾ ದ್ಯಾವೇಗೌಡ್ರ ವಟ್ಟೇಲಿ ಹುಟ್ಟತಿದ್ದೆ" ಎಂದು ವಾಟಿಸ್ಸೆ ನಗಾಡಿದ.

ಜುಮ್ಮಿ "ದ್ಯಾವೇಗೌಡ್ರ ವಟ್ಟೆಲೆ ಯಾಕುಟ್ಟತಿದ್ದ?" ಎಂದಳು.



"ಯಾವುದೇ ಎಜುಕೇಷನ್ ಬ್ಯಾಕ್‌ಗ್ರೌಂಡು ಮತ್ತೆ ಅಷ್ಟೇನು ತಿಳಿವಳಿಕೆ ಇಲ್ದೆಯಿದ್ರೂ ಎಮ್ಮೆಲ್ಲೆಯಾಗ ಬವುದಿತ್ತು, ಮಂತ್ರಿ ಮುಖ್ಯಮಂತ್ರಿಯಾಗಬವುದಿತ್ತು. ಹೆಂಡತಿ ಬೇಜಾರಾದ್ರೆ ಸಿನುಮಾ ನಟಿ ಮದಿವಾಗ ಬವುದಿತ್ತು, ಅವ್ರುಳಿಗೆ ಬೇಕಾದಂತೆ ಬಂಗ್ಲೆ ತಗೊಡಬವು ದಿತ್ತು. ಸಿನಿಮಾ ತಗಿಯಕ್ಕೆ ಅವ್ರುಳಿಗೆ ದುಡ್ಡು ಕೊಡ ಬವುದಿತ್ತು, ನೂರಾರೆಕರೆ ಜಮೀನು, ಕೋಟ್ಯಂತರ ರೂಪಾಯಿ ಆಸ್ತಿಗೆ ಅಧಿಪತಿಯಾಗಿ ಮೆರಿಬವುದಿತ್ತು ಕಣಕ್ಕ."

"ಆಹಹ, ಮುಂಡೆ ಮಗ ಕುಮಾರಸ್ವಾಮಿನ ಆಡಿಕಳ್ತಿರೊದು ನೋಡು."

"ಆಡಿಕಳದಲ್ಲ ಕಣಕ್ಕ. ಮನುಷ್ಯ ಹುಟ್ಟಬೇಕಾದ್ರೆ ತಂದೆ ತಾಯಿ ಸೆಲೆಕ್ಟ ಮಾಡಿಕಳಕ್ಕಾಗದಿಲ್ಲ ಅಂತ ಹೇಳಕ್ಕೆ ಪರೆಗ್‌ಜಾಂಪಲ್ ಕೊಟ್ಟೆ ಅಷ್ಟೆಯ. ಅಂತ ಆಯ್ಕೆ ಏನಾರ ಇದ್ದಿದ್ರೆ ಈ ಉಗ್ರಿ, ನಾನು ಲಿಂಗಾಯಿತ್ರ ಜಾತೀಲಿ ಹುಟ್ಟತಿದ್ನೊ, ಆಗ ಉಗ್ರಿ ಹೆಸರು ಪಂಚಾಕ್ಷರಿ, ನನ್ನೆಸರು ಷಡಾಕ್ಷರಿ ಅಂತ ಇರದು. ಈ ಟೈಮುಲ್ಲಿ ನಮ್ಮನ್ನ ಯಾರು ಮಾತಾಡುಸದಂಗೆ ಮ್ಯರಿತಿದ್ನೊ, ಯಾವನಾರ ನಮ್ಮ ತಂಟೆಗೆ ಬಂದ್ರೆ ಸಿರಿಗೆರೆ ಸ್ವಾಮಿಗೊ, ಸುತ್ತೂರು ಸ್ವಾಮಿಗೊ ಫೋನ್ ಮಾಡಿ ಸರಿಯಾಗಿ ಬುದ್ದಿ ಕಲುಸ್ತಿದ್ನೊ" ಎಂದು ವಾಟಿಸ್ಸೆ ನಕ್ಕ.

"ಅದ್ಯಾಕ್ಲ ಅಂಗೆ ಮಾತಾಡ್ತಿ?" ಎಂದ ಕಾಳಮಾವ.

"ನಾನೀಗ ಮಾತಾಡಕ್ಕೆ ಒಂದು ಕಾರಣ ಅದೆ ದ್ವಡಪ್ಪ, ಈಚೆಗೆ ಸುತ್ತೂರು ಮಠದಲ್ಲಿ ಲಿಂಗಾಯಿತ ರಾಜಕಾರಣಿ ಗಳು, ಕೆಲುವು ಮಠಾಧೀಶರ್‍ಯಲ್ಲ ಸೇರಿ ಸಭೆ ಮಾಡಿದ್ರು. ಯಾವುದೇ ಸಭೆ ನಂತರ ಲಾಸ್ಟಲಿ ಒಂದು ತೀರ್ಮಾನ ತಗತರೆ ಗೊತ್ತೆ?"

"ಊಕಣೇಳ್ಳ."

"ಆ ಸುತ್ತೂರು ಸಭೇಲಿ ಲಿಂಗಾಯಿತ್ರು ಏನು ತೀರ್ಮಾನ ತಗೊಂಡವುರೆ ಅಂದ್ರೇ, ಇನ್ನು ಮುಂದೆ ಲಿಂಗಾಯಿತ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಯಾರಾರ, ಎಲ್ಯಾರ, ಏನಾರ ತೊಂದ್ರೆ ಕೊಟ್ರೆ ಇಡೀ ಜನಾಂಗ ಒಟ್ಟಾಗಿ ಹೆದರಸಬೇಕು ಅಂತ ತೀರಮಾನ ತಗಂಡವುರೆ ದ್ವಡಪ್ಪ."

"ಲಿಂಗಾಯಿತ್ರಿಗೇನೊ ಕೇಡುಗಾಲ ಕಂಡ್ರ" ಎಂದ ಕಾಳಮಾವ.

"ಆಯ್ತಪ್ಪ, ಅವ್ರುರ ತೀರಮಾನಕೆ ಬತ್ತಿನಿ. ಇದೇ ನಮ್ಮೂರಲ್ಲಿ ಬರೇ ಐದು ಮನೆ ಲಿಂಗಾಯಿತ್ರವುರೆ. ಅವ್ರುರಿಗೆ ಯಂಗೋ ನಾನು ತೊಂದ್ರೆ ಕೊಡ್ತಿನಿ. ನನ್ನತ್ರ ಅದೇನು ಶ್ಯಾಟಕಿತಗಂಡರೊ ನಾನು ನೋಡೇಬುಡ್ತಿನಿ ಕಂಡ್ರ" ಎಂದು ಸೀರ ರಾಂಗಾದ.


"ಅದಕ್ಕೆ ಚಿಗಪ ನಿನ್ನನ್ನ ಪೂಲಿಸ್‌ಫೆಲೊ ಅನ್ನದು. ಸುತ್ತೂರಲ್ಲಿ ತಗಂಡಿರೊ ತೀರಮಾನಕ್ಕೆ ನಿಜವಾದ ಲಿಂಗಾಯಿತ್ರೇ ಮಕ್ಕುಗಿತಾ ಅವ್ರುರೆ; ಈ ಎಡೂರಪ್ಪನಿಗೆ ಸಪೋರ್ಟು ಮಾಡಿರೋ ಸ್ವಾಮಿಗಳು ಮೂಲತಃ ಯಾಚಕರು, ತಿಳಿವಳಿಕೆ ಇಲ್ದೋರು, ದಡ್ಡಬಡ್ಡಿ ಮಕ್ಕಳು, ಅಂಥೋರ್‍ನ ನಾವು ಕ್ಷಮಿಸಬವುದೇ ವರತೂ ಇನ್ನೇನೂ ಮಾಡಕ್ಕಾಗಲ್ಲ."

"ಮೇಲ್‌ಜಾತಿಗಳು ಜಾತಿವಾದಿಗಳಾದಾಗ ಅಂತವು ರಿಂದ ಆಗೋ ಅನಾಹುತ ಎದುರಸಕ್ಕೆ ತಯಾರಾಗದ ಬುಟ್ಟು ಇನ್ನೇನು ಮಾಡಕ್ಕಾದತೂ ವಾಟಿಸ್ಸೆ?" ಎಂದ ಉಗ್ರಿ.

"ಇದೇನೋ ಉಗ್ರಿ ದಲಿತರ ತರ ಮಾತಾಡ್ತಿ, ಹಂಡ್ರೆಡ್ ಪರಸಂಟ್ ಸರಿ ಕಣೋ. ಕೀಪಿಟಪ್."

"!?" ●

ಮಾತು ಚಾದಾಗ



ಚಿತ್ರ


ಲಿನ ನನ್ನ ನಂಬಿಕೆಗೆ ಅನೇಕ ಮುಖಗಳಿವೆ. ನನ್ನ
ದೊಡ್ಡ ಬಾಯಿಯ, ಅಸಹ್ಯ ಆಕಾರದ ಒಬ್ಬ ಮನುಷ್ಯ
ೂಟಿ ಬತ್ತಿಹೋಗಲು, ತನ್ನ ಚೈತನ್ಯ ಬಸವಳಿಯಲು
ಸಾರ್ವಜನಿಕವಾಗಿ ಮಾತಾಡಲು ಹಾತೊರೆಯುವವನು
ಮಾತಾಡುತ್ತಾನೆಂದರೆ ಕೊನೆಗೆ ಮಾತಾಡಲು ಅವನಲ್ಲಿ
ಇರುವುದಿಲ್ಲ, ಆದರೆ ಮಾತಾಡುವ ಅಭ್ಯಾಸ
ಬಿಡುವುದಿಲ್ಲ. ಹೀಗೆ ಮಾತು ಯಾವುದೇ
ಸಂಬಂಧವಿಲ್ಲದೆ ಮಾರಾಟವಾಗದ ಸರಕಾಗಿ
ಉಳಿದುಕೊಳ್ಳುತ್ತದೆ.

ಲ್ಲಿ ಡಾ. ಯು.ಆರ್. ಅನಂತಮೂರ್ತಿ ಒಳ್ಳೆಯ
ರು, ಸಂಭಾಷಣಾ ಚತುರರು. ಈ ವ್ಯಕ್ತಿ ಚಿಕ್ಕವರಾಗಿದ್ದಾಗ
ಮಾತುಗಳನ್ನು ಕೇಳುವುದಕ್ಕೆ ಪರಿಚಿತರು ದೂರದ

ಊರುಗಳಿಂದ ಬರುತ್ತಿದ್ದರು. ಗೆಳೆಯರು ಇವರೊಂದಿಗೆ ಮಾತಾಡಲು ಹಾತೊರೆಯುತ್ತಿದ್ದರು. ಮಾತುಗಾರನಲ್ಲದ ನನ್ನಂಥವರಿಗೆ ನಮ್ಮನ್ನು ಸುಮ್ಮನಿರಿಸಿ ಮಾತಾಡಬಲ್ಲವರೆಂದರೆ ತುಂಬ ಇಷ್ಟ. ಅನಂತ ಮೂರ್ತಿ ಸಿಕ್ಕಾಗಲೆಲ್ಲ ಅವರನ್ನು ಮಾತಾಡಲು ಬಿಟ್ಟು ಸುಮ್ಮನಿರುವುದು ನನಗೆ ಇಷ್ಟ.

ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾಗುವಂತೆಯೇ ನಮ್ಮ ಗೆಳೆಯರನ್ನು, ಸೋದರ ಲೇಖಕರನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ. ನಮ್ಮೊಂದಿಗೆ ಬರೆಯು ವವರು, ನಮಗೆ ಸವಾಲೆಸೆಯಬಲ್ಲವರು, ನಮ್ಮ ಅನ್ನಿಸಿಕೆಗೆ ಸಮರ್ಥನೆ ನೀಡಬಲ್ಲವರು ನಮ್ಮ ಗೆಳೆಯರು. ಮೊನ್ನೆ ಅನಂತಮೂರ್ತಿ ಮಾತಾಡಿ ಗಂಟಲು ಕಳೆದುಕೊಂಡರು; ನನಗೆ ಶಾಕ್ ಆಗಿ ಇದಕ್ಕೆ ಕಾರಣಗಳೇನಿರಬಹುದು ಎಂದು ಚಿಂತಿಸಿದೆ. ಹೆಚ್ಚು ಮಾತಾಡುವುದೇ ಇದಕ್ಕೆ ಕಾರಣ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ನನಗಿಂತ ಎರಡು ಮೂರು ವರ್ಷ ಹಿರಿಯರಾದ ಅನಂತಮೂರ್ತಿಯವರಿಗೆ ಹಿಂಜರಿಯುತ್ತಲೇ ಹೇಳಿದೆ: "ಅಷ್ಟೊಂದು ಮಾತಾಡಬೇಡಿ. ಮಾತು ಹೆಚ್ಚಾದಷ್ಟೂ ಸತ್ಯ ನಮ್ಮ ಮಾತುಗಳ ಹೊರಗೆ ಅವಿತುಕೊಳ್ಳತೊಡಗುತ್ತದೆ.

ಆದರೆ ಏನಾಗುತ್ತದೆ ಎಂದರೆ, ಯಾರಾದರೊಬ್ಬ ಚೆನ್ನಾಗಿ ಮಾತಾಡುತ್ತಾನೆ ಎಂದರೆ ಜನ ದುಂಬಾಲುಬಿದ್ದು ಅವರಿಂದ ಮಾತಾಡಿಸಿ ತಮಾಷೆ ನೋಡುತ್ತಾರೆ. ಇದನ್ನೆಲ್ಲ ನೋಡಿದಾಗಲೇ ನನಗೆ ಮೌನಿಯ ಮತ್ತು ಸಂಪನ್ನನ ಶಕ್ತಿಯ ಬಗ್ಗೆ ಕುತೂಹಲವಾಗುತ್ತದೆ. ನೂರಾರು ಜನ ಮಾತಾಡುವಲ್ಲಿ ಸುಮ್ಮನಿರ ಬಲ್ಲವ ಸ್ಫೋಟಕ ಸಾಮರ್ಥ್ಯ ಪಡೆದಿರುತ್ತಾನೆ. ಈಗ ನನಗೆ ಇದ್ದಕ್ಕಿದ್ದಂತೆ ಜಾನ್ ಮಿಲ್ಲಿಂಗ್ಟನ್ ಸಿಂಗ್ ನೆನಪಾಗುತ್ತಾನೆ. ಈ ಶತಮಾನದ ಆದಿಭಾಗದಲ್ಲಿ ನಾಟಕ ಬರೆದ ಈ ಸಿಂಗ್ ಐರ್ಲೆಂಡಿನವನು. ಎಲ್ಲರೂ ನಾಟಕದ ಬಗ್ಗೆ, ಕಲೆಯ ಬಗ್ಗೆ ಉಪನ್ಯಾಸ ಮಾಡುತ್ತಿದ್ದಾಗ ಈತ ಸುಮ್ಮನಿರುತ್ತಿದ್ದ, ಅಪರೂಪಕ್ಕೆ ಬರೆಯುತ್ತಿದ್ದ, ತನ್ನ ಆಳದ ಪ್ರಾಮಾಣಿಕ ಅನ್ನಿಸಿಕೆ ಉಕ್ಕುವವರೆಗೆ ಗಂಟಲು ಕಟ್ಟಿದವನಂತೆ ಮೌನಿಯಾಗಿರುತ್ತಿದ್ದ. ಈತ ಮಾತಾಡಿದಾಗ ಐರ್ಲೆಂಡಿನ ರಂಗಭೂಮಿ ಹೊಸ ಜೀವದಿಂದ ವಿಜೃಂಭಿಸಿತು.



ಹಾಗೆಯೇ ಸ್ಯಾಮ್ಯುಯೆಲ್ ಬೆಕೆಟ್.....

-ಮಾರ್ಚ್ 29, 1995

ಬೂದಿ ವಿಭೂತಿಯಾದ ಪ್ರಸಂಗವು

ದೇವಮಾನವ ಮರಣ ಹೊಂದಿದ್ದಾರೆ. ಅವರ ಪಾರ್ಥೀವ ಶರೀರವನ್ನು ಕೊಂಡೊಯ್ಯಲು ಯಾವುದೇ ವಿಶೇಷ ವಿಮಾನ ಸ್ವರ್ಗದಿಂದಿಳಿದಿದ್ದು ಎಲ್ಲೂ ದಾಖಲಾಗಿಲ್ಲ. ಸಾಮಾನ್ಯ ಮಾನವರಂತೆಯೇ ಅವರೂ ಸತ್ತರು. ಸತ್ತವರ ಕುರಿತು ಏನೂ ಕೆಟ್ಟದ್ದನ್ನು ಆಡದಿರುವುದು ಸತ್‌ಸಂಪ್ರದಾಯವಂತೆ. ಖುಷ್ವಂತ ಸಿಂಗ ಅಂತಹವರಿಗೆ ಇದು 'ಸತ್ತ' ಸಂಪ್ರದಾಯವೇ ಪರಂತು ಸತ್‌ಸಂಪ್ರದಾಯ ಅಲ್ಲ ಅನ್ನಿಸಬಹುದು. 'ಒಬ್ಬ ವ್ಯಕ್ತಿ ತೀರಿಕೊಂಡೊಡನೆ ಆತನನ್ನು ಹೊಗಳಿ ಅಟ್ಟಕ್ಕೇರಿಸುವ ಅಗತ್ಯವಿಲ್ಲ; ಗುಣ, ಅವಗುಣ ಎರಡನ್ನೂ ಹೇಳಬಹುದು' ಎಂಬ ನಂಬಿಕೆ ಅಂತಹವರದ್ದು. ಇದನ್ನು ಅಲ್ಲಗಳೆದು ಅಪ್ಪಹಾಕಿದ ಆಲದ ಮರಕ್ಕೆ ನೇತುಹಾಕಿಕೊಳ್ಳುವುದು ಬಹುಜನರಲ್ಲಿ ಜನಪ್ರಿಯ ಆಗಿರುವಂತಿದೆ.

ಇತ್ತೀಚೆಗೆ ಬದುಕಿರುವ ಗಣ್ಯರಿಗೆ 'ಸಂಭಾವನಾ ಗ್ರಂಥ', ಸತ್ತವರಿಗೆ ಅವರ 'ನೆನಪಿನ ಸಂಪುಟ' ಹೇರಳವಾಗಿ ಬರುತ್ತಿವೆ. ಅವುಗಳನ್ನು ಓದುತ್ತಿದ್ದರೆ ದೈವೀ ಪುರುಷನ ಸನ್ನಿಧಿಯಲ್ಲಿದ್ದಂತಹ ಭಾವನೆ ಬರುತ್ತದೆ. ಎಲ್ಲರೂ ಕಳಂಕರಹಿತರು! ಸಮಾಜಸೇವೆಗಾಗಿ ತಮ್ಮ ದೇಹ ಸವೆಸಿದವರು! ಮಾನವ ಸಹಜ ದೌರ್ಬಲ್ಯ ಅವರ ಬಳಿ ಸುಳಿಯುವುದೂ ಇಲ್ಲ. ಅಲ್ಲಿನ ಲೇಖಕರೆಲ್ಲ ಯಾವುದೋ ಜನ್ಮದಲ್ಲಿ ರಾಜರ ಬಳಿ 'ವಂದಿಮಾಗದ'ರಾಗಿ ಸೇವೆ ಸಲ್ಲಿಸಿರಬಹುದು. ಈ ಜನ್ಮದಲ್ಲಿಯೂ ಆ ವಾಸನೆಯೇ ಮುಂದುವರೆಸಿದಾರೆ!

ಹಲವಾರು ಜೀವನಚರಿತ್ರೆಗಳನ್ನ ಕನ್ನಡಮ್ಮನ ಮಡಿಲಿಗೆ ಸೇರಿಸಿದರು ನಾಡೋಜ ದೇಜಗೌ ಅವರು. ಕೆ.ವಿ.ಶಂಕರಗೌಡರ ಜೀವನ ಚರಿತ್ರೆ ಬರೆಯುತ್ತಿದ್ದ ಸಂದರ್ಭದಲ್ಲಿ ಅವರು ಮಂಡ್ಯ ನಗರಕ್ಕೆ ಬಂದಿದ್ದರು. ನಾಲ್ಕೈದು ಗೆಳೆಯರೊಡನೆ ಸಮಾಲೋಚನೆ, ವಿಚಾರವಿನಿಮಯ ಮಾಡುತ್ತಿದ್ದರು. ದಿನಚರಿ ವಿಷಯ ಪ್ರಸ್ತಾಪಕ್ಕೆ ಬಂತು-ಗೌಡರಿಗೆ ದಿನಚರಿ ಬರೆಯುವ ಅಭ್ಯಾಸ ಇರಲಿಲ್ಲ. ಎಸ್.ನಿಜಲಿಂಗಪ್ಪನವರಿಗೆ ಅದು ಇತ್ತಂತೆ. ಅವರ ಜೀವನಚರಿತ್ರೆಯನ್ನು ಬರೆಯುವಾಗ ಅದನ್ನು ನೋಡುವ ಅವಕಾಶ ದೊರಕಿತಂತೆ. ಅದರಲ್ಲಿನ ಒಂದು ಸ್ವಾರಸ್ಯಕರ ಘಟನೆ ವಿವರಿಸಿದರು. ಅದು ಸಂಕ್ಷಿಪ್ತವಾಗಿ ಹೀಗಿದೆ:

ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಮಯದಲ್ಲಿ ಒಮ್ಮೆ ಧಾರವಾಡಕ್ಕೆ ಬಂದಿದ್ದರಂತೆ. ಅಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಿದ್ದರಂತೆ. ಅವರಿಗೆ ಮುಂಜಾನೆ ವಾಕಿಂಗ್ ಹೋಗುವ ಅಭ್ಯಾಸ ಇತ್ತಂತೆ. ಅವತ್ತೂ ಹಾಗೇ ಮಾಡಿದರಂತೆ. ಬರುಸಿನ ನಡಿಗೆಯಲ್ಲಿ ಅವರು ಹೋಗುತ್ತಿದ್ದಾಗ ಅವರ ಮುಂದೆ ಸ್ವಲ್ಪದೂರದಲ್ಲಿ ಎನ್‌ಸಿಸಿ ಕೆಡೆಟ್‌ಗಳು ಶಿಸ್ತಿನಿಂದ ನಡೆದು ಹೋಗುತ್ತಿರುವುದು ಕಾಣಿಸಿತಂತೆ. ಮಹಿಳಾ ಕೆಡೆಟ್‌ಗಳ ಹಿಂಭಾಗ ಬಹಳ ಆಕರ್ಷಣೀಯವಾಗಿ ಕಂಡಿತಂತೆ. ಹಿಂಬದಿಯಿಂದಲೇ, ಇಷ್ಟೊಂದು ಮನಮೋಹಕವಾಗಿದ್ದಾರಲ್ಲ ಇನ್ನು ಮುಂದಿನಿಂದ ಹೇಗೆ ಕಾಣಿಸಬಹುದು ಎಂಬ ಕುತೂಹಲ ಆಯಿತಂತೆ. ಮನಸ್ಸು ಚಂಚಲ ಆಯಿತಂತೆ. ಅದನ್ನು ನೋಡಿ ಅನುಭವಿಸಲೇಬೇಕು ಎಂಬ ನಿರ್ಧಾರಕ್ಕೆ ಬಂದರಂತೆ. ಅಡ್ಡದಾರಿಯಲ್ಲಿ ಸರಸರ ಹೆಜ್ಜೆ ಹಾಕಿದರಂತೆ. ಸಾಹಸ ಮಾಡಿ ಕೆಡೆಟ್‌ಗಳ ಎದುರಿನಿಂದ ಬಂದರಂತೆ. ಅವರ ದೇಹಸಿರಿಯನ್ನು ವಾರೆಗಣ್ಣಿನಲ್ಲೇ ಸವಿದರಂತೆ. ಅದೇ ಗುಂಗಿನಲ್ಲಿ ತಮ್ಮ ಕೊಠಡಿ ಸೇರಿದರಂತೆ. ಇದ್ದಕ್ಕಿದ್ದಂತೆ ಪಾಪಪ್ರಜ್ಞೆ ಕಾಡಲಾರಂಭಿಸಿತಂತೆ. ಇವರೆಲ್ಲ ನನ್ನ ಮೊಮ್ಮಕ್ಕಳ ವಯಸ್ಸಿನವರು. ಇಂತಹವರನ್ನು ಪಾಪದೃಷ್ಟಿಯಿಂದ ನೋಡಿದೆನಲ್ಲ ನಾನೆಂತ ನೀಚ ಎಂದೆಲ್ಲ ಪರಿತಪಿಸಿದರಂತೆ. ಇದನ್ನೆಲ್ಲ ತಮ್ಮ ದಿನಚರಿಯಲ್ಲಿ ದಾಖಲಿಸುವ ಪ್ರಾಮಾಣಿಕತೆಯನ್ನು ತೋರಿದರಂತೆ ನಿಜಲಿಂಗಪ್ಪನವರು.

ಯಾವುದೊ ಒಂದು ದೌರ್ಬಲ್ಯದ ಕ್ಷಣದಲ್ಲಿ ಎಡವಿದರೂ ಆ ಅಪರಾಧಕ್ಕಾಗಿ ಪಶ್ಚಾತ್ತಾಪಪಟ್ಟ ಆ ಹಿರಿಯರ ಬಗೆಗಿನ ಗೌರವ ಹೆಚ್ಚಾಯಿತು. ಈ ಘಟನೆಯನ್ನು ಅವರ ಜೀವನಚರಿತ್ರೆಯಲ್ಲಿ ದಾಖಲಿಸಿದ್ದರೆ ಅವರ ವ್ಯಕ್ತಿತ್ವಕ್ಕೆ ಒಂದು ಮೆರುಗು ಇರುತ್ತಿತ್ತು ಘನತೆ ಇರುತ್ತಿತ್ತು. ನಿಜಲಿಂಗಪ್ಪನವರಂತಹ ದೊಡ್ಡ ಮನುಷ್ಯರು ಹರೆಯದ ಹುಡುಗಿಯರನ್ನು ನೋಡಬಾರದಂತಹ ದೃಷ್ಟಿಯಿಂದ ನೋಡಿದ್ದು ಅವರ ವ್ಯಕ್ತಿತ್ವಕ್ಕೆ ಕಳಂಕ ಎಂದು ಭಾವಿಸಿಯೋ ಏನೋ? ಇದನ್ನು ದಾಖಲಿಸಿಲ್ಲ! ಈ ಅದಾಖಲೀಕರಣ ಪ್ರಕ್ರಿಯೆ ನಿಜಲಿಂಗಪ್ಪನವರ ವ್ಯಕ್ತಿತ್ವಕ್ಕೆ ಮಾಡಿದ ಅಪಚಾರ.

ದೌರ್ಬಲ್ಯ ಮಾನವ ಸಹಜ. ಆ ಕ್ಷಣದಲ್ಲಿ ಅವರ ಭಾವನೆ ಹೇಗಿತ್ತು? ಹೇಗೆ ಎದುರಿಸಿದರು? ಈ ಅಪರಾಧಿ ಮನೋಭಾವದಿಂದ ಹೇಗೆ ಪಾರಾಗಲು ಪ್ರಯತ್ನಿಸಿದರು? ಇದು ಬಹಳ ಮುಖ್ಯ ಎನಿಸುತ್ತದೆ. ನಮ್ಮ ಜೀವನಚರಿತ್ರೆ ರಚನಾಕಾರರು, ಸಂಭಾವನಾ ಗ್ರಂಥಪ್ರಿಯರು ಇಂತಹವರುಗಳೆಲ್ಲ ತಮ್ಮ ನಾಯಕನ ದೌರ್ಬಲ್ಯ ಕುರಿತು ಹೇಳುವುದೇ ಘನ ಘೋರ ಅಪರಾಧ ಎಂದು ಪರಿಗಣಿಸಿರುವುದು ಬಹುದೊಡ್ಡ ದುರಂತ.



ಸತ್ಯಸಾಯಿಬಾಬಾ ಅವರನ್ನು ದೇವರು ಎಂದೇ ಹಲವರು ನಂಬಿದ್ದಾರೆ. ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಅವರ ಕೊಡುಗೆಯನ್ನು ಅಲ್ಲಗಳೆಯುವಂತಿಲ್ಲ. ಸಾವಿರಾರು ಸಾಯಿಭಕ್ತರು ಸಾಯಿ ಆಸ್ಪತ್ರೆಯಲ್ಲಿ ಸೇವಾ ಮನೋಭಾವದಿಂದ ತಿಂಗಳುಗಟ್ಟಲೇ ಸೇವೆ ಸಲ್ಲಿಸುತ್ತಿರುವುದನ್ನು ಕಂಡು ಚಕಿತನಾಗಿದ್ದೇನೆ. ಸತ್ಯಸಾಯಿಬಾಬಾ ಕುರಿತು ಹಲವು ಪುಸ್ತಕಗಳು ಬಂದಿವೆ. ಇನ್ನು ಹಲವು ಬರುವುದರಲ್ಲಿ ಸಂಶಯ ಇಲ್ಲ. ಬಾಬಾ ಅವರ ಪವಾಡದಿಂದ ಹೇಗೆ ಪ್ರಭಾವಿತನಾದೆ ಎಂಬುದೇ ಬಹಳ ಲೇಖನಗಳ ಸಾರಾಂಶ ಇರಬಹುದು. ನನ್ನ ಒಂದು ಅನುಭವವನ್ನು ಹಂಚಿಕೊಳ್ಳಲು ಬಯಸುತ್ತೇನೆ.

1976-77ರ ಸಮಯ. ಇದ್ದಕ್ಕಿದ್ದಂತೆ ಪವಾಡ ಪುರುಷರು ಈ ಪುಣ್ಯಭೂಮಿಯಲ್ಲಿ ಅವತರಿಸಿದರು. ಅವರ ಪ್ರಭಾವ ಎಲ್ಲೆಡೆಗೂ ಪ್ರಸರಿಸುತ್ತಿತ್ತು. ಜನಸಾಮಾನ್ಯರು ಮಾತ್ರ ಅಲ್ಲ, ಹಲವು ಮೇಧಾವಿಗಳೂ ಅವರ ಬಾಲಬಡುಕರಾಗಿದ್ದರು. ಇಂತಹ ಪರ್ವ ಕಾಲಘಟ್ಟದಲ್ಲಿ ಸಿಲೋನಿನಲ್ಲಿದ್ದ ಅಬ್ರಹಾಂ ಟಿ.ಕೋವೂರ್ 'ಇವರೆಲ್ಲ ಬುರುಡೆ ಬಾಬಾಗಳು ಅಲ್ಲಿ ಯಾವುದೇ ಪವಾಡ ಇಲ್ಲ, ಕೇವಲ ಯಕ್ಷಿಣಿ ಅಷ್ಟೆ' ಎಂದು ಸಾರಿದರು. ಪವಾಡಪುರುಷರ ವಂಚನೆಗಳ ಕುರಿತು ಲೇಖನ ಬರೆದರು. ಬಾಬಾಗಳಿಗೆ ಜನ ಮರಳಾಗುವುದು ನಿಲ್ಲಲಿಲ್ಲ.

ಜನಜಾಗೃತಿ ಉಂಟುಮಾಡಲು, ಮೌಢ್ಯ ಪ್ರಚಾರಕ್ಕೆ ತಡೆ ಒಡ್ಡಲು ಪುಂಡ ಬಾಬಾಗಳ ನಕಲಿ ವೇಷವನ್ನು ಕೀಳಲು ಕರ್ನಾಟಕಕ್ಕೆ ಬಂದರು. ಹಲವು ಕಡೆ ಪವಾಡ ಬಯಲು ಕಾರ್ಯಕ್ರಮ ಹಮ್ಮಿಕೊಂಡರು. ಮಂಡ್ಯದಲ್ಲೂ ಅದು ಇದ್ದಿತ್ತು. ಕೆಲವು ಸ್ನೇಹಿತರು ಸೇರಿ ಇದನ್ನು ಆಯೋಜಿಸಿದ್ದರು. ಕೋವೂರ್ ಅವರಿಗೆ ಸಂಭಾವನೆ ನೀಡುವ ಅವಶ್ಯಕತೆ ಇರಲಿಲ್ಲ. ಆದರೆ ಅವರ ಖರ್ಚನ್ನು ಸರಿದೂಗಿಸಬೇಕಾಗಿತ್ತು. ಕಾರ್ಯಕ್ರಮ ದಿನಾಂಕ ಖಚಿತವಾಯಿತು. ಪ್ರವೇಶ ದರ ಹತ್ತು ರೂಪಾಯಿ ಎಂದ ನಿಗದಿಪಡಿಸಿದರು.

ಅಲ್ಲಿಂದ ಸಮಸ್ಯೆ ಪ್ರಾರಂಭ ಆಯಿತು. ಕಚೇರಿಯಿಂದ ಕಚೇರಿಗೆ, ಕಾಲೇಜಿನಿಂದ ಕಾಲೇಜಿಗೆ, ಮನೆಯಿಂದ ಮನೆಗೆ ಟಿಕೆಟ್ ಮಾರಲು ಅಲೆದರು. ಎಲ್ಲಿ ಹೋದರೂ ತಾರಮ್ಮಯ್ಯ ಅನ್ನುವವರೆ. ಟಿಕೆಟುಗಳ ಮಾರಾಟ ಆಗಲೇ ಇಲ್ಲ. ನಾಳೆಯೇ ಕಾರ್ಯಕ್ರಮ. ಅದನ್ನು ರೂಪಿಸುವುದಕ್ಕಿಂತ ಕೋವೂರ್ ಅವರಿಗೆ ಖರ್ಚನ್ನು ಹೇಗೆ ಸರಿದೂಗಿಸುವುದು ಎಂಬುದೇ ಬೃಹತ್ ಸಮಸ್ಯೆಯಾಗಿತ್ತು.

ಕಾರ್ಯಕ್ರಮದ ದಿನ ಒಂದು ಪವಾಡ ಸದೃಶ ಘಟನೆ ನಡೆಯಿತು. ಸಾಯಿಬಾಬಾ ಅವರಿಗೆ ತಮ್ಮ ಎದುರು ಪವಾಡ ತೋರಿಸಲು ಕೋವೂರ್ ಹಲವು ಕಾಗದಗಳನ್ನು ಬರೆದಿದ್ದರೂ ಬಾಬಾ ಉತ್ತರಿಸಿರಲಿಲ್ಲ. ಕೋವೂರ್ ಅವರೇ ಅವರನ್ನು ಬಲವಂತವಾಗಿ ನೋಡಲು ಇಚ್ಛಿಸಿದರು. ಅವತ್ತು ಬಾಬಾ ವೈಟ್‌ಫೀಲ್ಡ್‌ನಲ್ಲಿ ಆಶ್ರಮದಲ್ಲಿರುವುದು ತಿಳಿಯಿತು. ಬೆಳಗ್ಗೆಯೇ ಆಶ್ರಮಕ್ಕೆ ತೆರಳಿದರು. ಬಾಬಾ ರಾತ್ರೋರಾತ್ರಿ ಅಲ್ಲಿಂದ ಪರಾರಿಯಾಗಿದ್ದರು! ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ಒಂದು ಫೋಟೋ ಇತ್ತು. ಆಶ್ರಮದ ನಾಮಫಲಕ, ಕೋವೂರ್ ಪ್ರವೇಶ ಎರಡೂ ಎದ್ದು ಕಾಣುವಂತೆ ಹಿಂಬದಿಯಿಂದ ತೆಗೆದಿದ್ದ ಅದ್ಭುತ ಫೋಟೋ ಅದು. ಆ ಫೋಟೋ ಹಾಗೂ ಪುಟ್ಟ ವರದಿಯಿಂದಾಗಿ ಮಂಡ್ಯದ ಜನರಲ್ಲಿ ಕೋವೂರ್ ಬಗ್ಗೆ ಇದ್ದ ನಿರಾಸಕ್ತಿ ಆಸಕ್ತಿಯಾಗಿ ಪರಿವರ್ತನೆಯಾಯಿತು. ಅದು ಉಂಟುಮಾಡಿದ ಮೋಡಿಯಿಂದಾಗಿ ಜನರು ಟಿಕೆಟ್‌ಗಾಗಿ ಅಲೆಯಲಾರಂಭಿಸಿದರು. ಪ್ರಭಾವದ ಅರಿವು ಅವತ್ತು ಆಯಿತು.

ಈಗಲೂ ಪ್ರಜಾವಾಣಿ ಪತ್ರಿಕೆಯ ಪ್ರಭಾವ [illegible] ಪರಿಣಾಮಕಾರಿಯಾಗಿರುವುದು ಅನುಮಾನ. ವರದಿಗಳೇನೋ ಇರುತ್ತವೆ. ಶೋಭಾ ಕರಂದ್ಲಾ[illegible] ಎಸೆದದ್ದು ಯಡ್ಯೂರಪ್ಪ ಬ್ಯಾಟು ಬೀಸಿದ್ದು [illegible] ಮಹತ್ತರ ಸುದ್ದಿಗಳು. ಆಗತಾನೇ ಬ್ಯಾಟು [illegible] ಹಿಡಿದವರಂತೆ ಟಿವಿಗಳಲ್ಲಿ ಕಾಣುವ ಅವರು ವರ[illegible] ನುರಿತ ಆಟಗಾರರಾಗಿ ತೋರುವ ಪವಾಡ [illegible] ಸಾಮಾನ್ಯವಾಗಿ ಒಂದು ಜಿಲ್ಲೆಯ ಸುದ್ದಿ ಪ[illegible] ಜಿಲ್ಲೆಗೆ ತಿಳಿಯದಿರುವಂತೆ ಪತ್ರಿಕೆಗಳು ನಿಗಾವ[illegible] ಪ್ರಮುಖ ಸುದ್ದಿಯಾದರೆ ಅದನ್ನು ರಾಜ್ಯ ಸುದ್ದಿ



ಎಚ್.ಎಲ್. ಕೇಶವಮೂರ್ತಿ

ಅಣಕ

ಮಾಡುತ್ತಾರೆ. ಬಾಲಿಶವಾಗಿ ಚೆಂಡಾಡುವುದೂ ರಾ[illegible] ಸುದ್ದಿಯಾದಾಗ... ಪ್ರಭಾವ...

ರೈತ ಸಭಾಂಗಣದಲ್ಲಿ ಪವಾಡ ಬಯಲು ಕಾ[illegible] ಇತ್ತು. ಕೋವೂರ್ ಅವರು ಸರಳ ಇಂ[illegible] ಮಾತನಾಡಿದರು. ಕನ್ನಡ ಅನುವಾದವೂ ಇತ[illegible] ಹಾಸ್ಯಮಯ ಮಾತು ಸಭಾಂಗಣವನ್ನು ನ[illegible] ತುಂಬಿತ್ತು 'ಬಾಬಾ ವಿಭೂತಿ ಕೊಡುವುದು ಬರಿ[illegible] ನಾನೂ ಅದನ್ನು ಕೊಡಬಲ್ಲೆ, ತೆಗೆದುಕೊಳ್ಳಿ' ಭಸ್ಮ ಹಂಚುತ್ತಾ 'ಇದು ನಿಮ್ಮ ಊರಿನ ಬೆರ[illegible] ಮಾಡಿದ ಬೂದಿ. ಇದರಲ್ಲಿ ಯಾವ ದೈವಿ[illegible] ಇಲ್ಲ' ಎಂದು ವಿವರಿಸುತ್ತಲೇ ಇದ್ದಾಗ... ಬೆರ[illegible] ಬೂದಿ ತೆಗೆದುಕೊಂಡ ಹಲವರು ಭಯಭಕ್ತಿಗಳಿ[illegible] ಒತ್ತಿಕೊಂಡು ಹಣೆಗೆ ಇಟ್ಟುಕೊಂಡರು!

ಪ್ರೇಮ ಸಾಯಿ!

'ಮಂಡ್ಯದ ಕಾವೇರಿ ನದಿದಡದಲ್ಲಿ ನನ್ನ [illegible] ಜನನ' ಎಂದಿದ್ದರಂತೆ ಸಾಯಿಬಾಬಾ.

ಅಲ್ಲಿ ಅವರು ನಿಧನರಾದರು. ಇಲ್ಲಿ ಗಂಡ[illegible] ಜನನ ಆಯಿತು!

ಬಾಬಾ ಪುನರ್‌ಜನ್ಮ ತಾಳಿದ್ದಾರೆ!

ಜನರಿಗೆ ಕುತೂಹಲ. ಜಿಲ್ಲೆ ತುಂಬ ಅ[illegible] ಪ್ರೇಮ ಸಾಯಿ ದರ್ಶನಕ್ಕೆ ಕಾತುರ.

ಸಾಯಿಬಾಬಾ ಹೇಳಿದಂತೆ ಎಲ್ಲವೂ ನ[illegible] ಎಂಬುದು ಭಕ್ತರ ನಂಬಿಕೆ. 96 ವರ್ಷ ಬದುಕು[illegible] ಹೇಳಿದ್ದ ಬಾಬಾ 86 ವರ್ಷಕ್ಕೆ ಸಾವನ್ನಪ್ಪಿದ[illegible] ಇದಕ್ಕೂ ಕಾರಣ ಇದೆಯಂತೆ. ಅತ್ಯಾಧುನಿ[illegible] ಆಸ್ಪತ್ರೆಯಲ್ಲಿ ಅವರನ್ನು ಇಟ್ಟದ್ದರಲ್ಲ ಕೊಠಡಿ ಅ[illegible] ಸರಿ ಇಲ್ಲವಂತೆ! ಆದಕ್ಕೆ ನಿಗದಿತ ಸಮಯಕ್ಕೆ [illegible] ಮರಣ ಹೊಂದಬೇಕಾಯಿತಂತೆ!


ಪ್ರೇಮಸಾಯಿ ಜನಿಸಿರುವುದು ಖಚಿತ ಎಂ[illegible] ಒಂದು ಸಣ್ಣ ಅನುಮಾನ. ಜೀವಾಂಕುರ [illegible] ಅಂಡಾಣು ವೀರ್ಯಾಣು ಸಂಯೋಗ ಆದಾಗಲೋ[illegible] ಮಗು ಭೂಮಿಗೆ ಬಂದಾಗಲೋ? ಮೊದ[illegible] ನಿಜವಾದಲ್ಲಿ ಇನ್ನೂ ಒಂಬತ್ತು ತಿಂಗಳು ಕಾ[illegible] ಬಹುದು ಪ್ರೇಮಸಾಯಿ ಬರುವಿಕೆಗೆ.....

ಬಸವ ಮತ್ತೊಮ್ಮೆ ಸಾಯದಿರಲಿ

ವೀರಶೈವ-ಲಿಂಗಾಯತ ಸಮಾವೇಶದ ಸಂದರ್ಭದಲ್ಲಿ ಶ್ರೀ ಟಿ.ಆರ್. ಚಂದ್ರಶೇಖರ್ ಮತ್ತು ಮಾತೇ ಮಹಾದೇವಿಯವರ ವಿಚಾರಪೂರ್ಣ ಬರಹಗಳಿಗೆ ನಿಜಕ್ಕೂ ದೊಡ್ಡ ಅಭಿನಂದನೆ. ನಿಮ್ಮ ಪತ್ರಿಕೆಗೆ ದಿನೇದಿನೇ ನಿಮ್ಮ ತಂದೆಯವರ ಕಾಲದ ಸೊಗಸು ತರುತ್ತಿದ್ದೀರೆಂಬ ಆಶಯ ಮೂಡುತ್ತಿದೆ. ಬಸವ ಧರ್ಮದ ಆಶಯಗಳಿಗೆ ಕೊಡಲಿ ಪೆಟ್ಟುಕೊಡುತ್ತಿರುವ ರಾಜಕೀಯ ನಾಯಕ ಮತ್ತು ಢೋಂಗಿ ಮಠಾಧಿಪತಿಗಳ ಸಂಬಂಧವನ್ನು ಬಹಳ ಚೆನ್ನಾಗಿ ಅನಾವರಣಗೊಳಿಸಿದ ಪತ್ರಿಕೆಗೆ ಅಭಿನಂದನೆಗಳು.

ಬಸವ ಅನುಯಾಯಿಗಳು ಎಚ್ಚರದಿಂದ ಹೆಜ್ಜೆಯಿಡಬೇಕು-ಇಲ್ಲದಿದ್ದರೆ ಮತ್ತೊಮ್ಮೆ ಬಸವ ಸಾಯುವುದನ್ನು ತಪ್ಪಿಸಲಾಗದು.

- ಎನ್.ಶರವಣ, ಬೆಂಗಳೂರು





ಏಪ್ರಿಲ್ 27 ರ ಸಂಚಿಕೆಯ ಮುಖಪುಟ ನನ್ನಲ್ಲಿ ತುಂಬ ಕೋಪ ಮತ್ತು ಬೇಸರ ತಂದಿತು. ಕಾರಣ ಮುಖಪುಟದಲ್ಲಿ ಕಾಣಿಸಿದ 'ದಿಕ್ಕೆಟ್ಟ ಅಣ್ಣಾ' ಎಂಬ ಶೀರ್ಷಿಕೆಗೂ, ಗೌರಿ ಮತ್ತು ಶಿವಸುಂದರ್ ಬರೆದ ಪೂರಕ ಲೇಖನಕ್ಕೂ ಯಾವ ಸಂಬಂಧವೂ ಇಲ್ಲದಿದ್ದದ್ದು, ನಿಮ್ಮ ಆ ಲೇಖನದಲ್ಲಿ ಅಣ್ಣಾ ಹಜಾರೆ ಯಾವ ರೀತಿ ದಿಕ್ಕೆಟ್ಟಿದ್ದಾರೆ ಎಂಬ ಬಗ್ಗೆ ಯಾವ ಸಮರ್ಥನೆಯೂ ಇಲ್ಲ, ಬದಲಿಗೆ ಹಳಸಿದ ರಾಜಕೀಯ ಮತ್ತು ಇತರ ಚರ್ವಿತಚರ್ವಣ ವಿಷಯಗಳ ದಾಖಲೆ ಇದೆ. ಆದ್ದರಿಂದ ನೀವು ಮುಖಪುಟದ ಮೇಲೆ ಹಾಕಿದ 'ದಿಕ್ಕೆಟ್ಟ ಅಣ್ಣಾ' ಎಂಬುದು ಓದುಗರನ್ನು ದಿಕ್ಕೆಡಿಸುವುದೇ ಆಗಿದೆ ಎಂದೆನಿಸಿತು. ಒಂದು ವೇಳೆ ಅಣ್ಣಾ ದಿಕ್ಕೆಟ್ಟಿದ್ದರೆ ಅದು ಅವರು ಉಪವಾಸ ಮಾಡುವ ಮೊದಲು ಇದ್ದಿರಬಹುದು. ಏಕೆಂದರೆ ಎಲ್ಲೆಲ್ಲೂ ಭ್ರಷ್ಟಾಚಾರ ಬೆಳೆದು ನಿಂತಿರುವಾಗ ಅದನ್ನು ನಿರ್ಮೂಲ ಮಾಡಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ಚಿಂತೆಯಿಂದ ದಿಕ್ಕೆಟ್ಟವರಾಗಿದ್ದಿರಬಹುದು. ಆದರೆ ಅವರ ಉಪವಾಸದ ಉದ್ದೇಶವ ಸ್ಪಷ್ಟವಾಗಿಯೇ ಇತ್ತು ಈಗಲೂ ಕೂಡ ಇದೆ. ಅರವತ್ತು ಮೂರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಲೋಕ್‌ಪಾಲ್ ಮಸೂದೆಯನ್ನು ಶಾಸನವನ್ನಾಗಿ ಮಾಡಬೇಕೆಂಬ ಉದ್ದೇಶ ಮತ್ತು ಮಸೂದೆಯನ್ನು ತಯಾರಿಸಲು ಸರ್ಕಾರದ ಪ್ರತಿನಿಧಿಗಳೊಂದಿಗೆ ನಾಗರಿಕರ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕೆಂಬ ಬೇಡಿಕೆ; ಅಣ್ಣಾ ಹಜಾರೆಯವರ ಉಪವಾಸಕ್ಕೆ ಎಲ್ಲೆಡೆಯಿಂದಲೂ ಅಭೂತಪೂರ್ವವಾದ ನೈತಿಕ ಸಮರ್ಥನೆ ಸಿಕ್ಕಿತು.


ಹಜಾರೆಯವರ ಉಪವಾಸದ ಸಕಾರಾತ್ಮಕ ಪರಿಣಾಮಗಳನ್ನು ಮತ್ತು ಅಂಥ ಒಂದು ಎದೆಗಾರಿಕೆಯ ಕ್ರಮದ ಅಗತ್ಯವನ್ನು ಒ[illegible] ತಿಳಿಸಿ ಹೇಳುವಲ್ಲಿ ವಿಫಲವಾಗಿದ್ದೀರಿ. ಎಲ್ಲವೂ ಭ್ರಮೆ [illegible] ಹೇಳುತ್ತಾ ಭ್ರಷ್ಟಾಚಾರ ವಿರುದ್ಧದ ಹೋರಾಟಕ್ಕೆ ನೀವು ವಿಮು[illegible] ನಿಂತಿದ್ದೀರಿ. ಮುಖಪುಟದ ಶೀರ್ಷಿಕೆಗೂ, ಆದಕ್ಕೆ ಸಂಬ[illegible] ಲೇಖನಕ್ಕೂ ಯಾವ ಸಂಬಂಧವೂ ಇಲ್ಲದಿರುವಾಗ ಜ್ವಲಂತ ವಿ[illegible] ನಾಯಕನು ದಿಕ್ಕೆಟ್ಟಿದ್ದಾನೆ ಎಂದು ಬರೆದು ಓದುಗರನ್ನು ದಿಕ್[illegible] ಮತ್ತು ಪತ್ರಿಕೆಯ ಹೆಚ್ಚಿನ ಪ್ರಸಾರಕ್ಕೆ ಅದನ್ನು ಬಳಸಿಕೊ[illegible] ನೀವು ಮಾಡಿದ ಭ್ರಷ್ಟಾಚಾರವಲ್ಲವೆ?

-ಸುರೇಂದ್ರ ಕೌಲಗಿ, ಮೇಲು[illegible]

'ಭಗವಾನ್' ಶ್ರೀ ಸಾಯಿಬಾಬಾ ಆಸ್ಪತ್ರೆಗೆ ದಾಖಲ[illegible] ಎಂಬ ಸುದ್ದಿಯನ್ನು ಟಿವಿಯಲ್ಲಿ ನೋಡಿದಾಗ ಸಹಜವಾಗೇ [illegible] ಬೇಸರವಾಯಿತು. ಆಗ ನನಗೆ ಈ 'ದೇವಮಾನವನ' ಚರಿತ್ರೆ ತಿಳಿ[illegible] ಏಪ್ರಿಲ್ 20 ರ 'ಗೌರಿ ಲಂಕೇಶ್' ಪತ್ರಿಕೆಯನ್ನು ಓದಿದ ನಂ[illegible] ಬಾಬಾನ 'ಪವಾಡ' ತಿಳಿಯಿತು. 'ಕಂಡಹಾಗೆ' ಅಂಕಣದಲ್ಲಿ ಸಾಯಿ[illegible] ಚಿನ್ನದ ಸರವನ್ನು ಸೃಷ್ಟಿಸಿಕೊಟ್ಟಿದ್ದು ಸರ್ಕಾರ್‌ರವರಿಗೆ 'ಸಂದೇಶ್' ತಿಂ[illegible] ನೀಡಿದ್ದು, ಸಾಯಿಬಾಬಾರ ವಿರುದ್ಧ ಕೇಳಿಬಂದಿರುವ ಲೈಂಗಿಕ ಶೋ[illegible] ಆರೋಪಗಳನ್ನು ಓದಿದ ನಂತರ ಸಾಯಿಬಾಬಾ ಆಸ್ಪತ್[illegible] ಮರಣಶಯ್ಯೆಯಲ್ಲಿರುವಾಗ ಆತನ ಭಕ್ತರು ಪಟ್ಟ ಪಾಡನ್ನು [illegible] 'ಹಾದರಗಿತ್ತಿ ಹಬ್ಬ ಮಾಡಿದರೆ ಮನೆ ಗಂಡ ಉಪವಾಸ ಬಿದ್ದ' [illegible] ಗಾದೆ ಮಾತು ನೆನಪಿಗೆ ಬಂತು.

-ಉದಯ್, ಮ[illegible]

...ಪ್ಯಾಟೆ ಹುಡುಗೀರು ಬೀದಿಗೆ ಬಿದ್ರು!



ಪ್ಯಾಟೆ ಹುಡ್ಗೀರು ಈಗ ಸುವರ್ಣ ವಾಹಿನಿ ... ಮುರಕೊಂಡು ಬದ್ದಿದ್ದಾರೆ.

... ರಿಯಾಲಿಟಿ ...ಲ್ಲಿ ಭಾಗವಹಿಸುವ ... 'ಯಾವ ಕಾರಣಕ್ಕೂ ...ರ್ ವಿರುದ್ಧ ...ಗೋಷ್ಠಿ ...ಾರದು. ಇಲ್ಲಿ ಏನೇ ...ರೂ ಅದನ್ನು ...ಾಗಿಟ್ಟುಕೊಳ್ಳಬೇಕು!' ... ಷರತ್ತಿಗೆ ಒಪ್ಪಿ ...ಂಟಿಗೂ ಸಹಿ ಹಾಕಿ ... ಹುಡ್ಗೀರ್ ಹಳ್ಳಿ ... ಸೀಜನ್-2ನಲ್ಲಿ ...ಹಿಸಿದ್ದ ಅಕ್ಷತಾ ಎಂಬ ...ಗಿ ಮೊನ್ನೆ ...ರಿನಲ್ಲಿ ಪತ್ರಿಕಾಗೋಷ್ಠಿ ... ಸುವರ್ಣ ಚಾನೆಲ್‌ನ ... ಮರ್ಯಾದೆಯನ್ನು ... ಬಿಸಾಡಿದ್ದಾಳೆ.



... ಶೋ ಮೂಲಕ ...ಅನುಭವಿಸಿದ ಮಾನಸಿಕ ಹಾಗೂ ದೈಹಿಕ ...ು ಬಗ್ಗೆ ಮಹಿಳಾ ಆಯೋಗಕ್ಕೆ ದೂರು ...ವುದಾಗಿ ಹೇಳಿರುವ ಅಕ್ಷತಾ ಚಾನೆಲ್ ...ಸ್ಥರ ಕುರಿತು ಆರೋಪಗಳ ಸುರಿಮಳೆಯನ್ನೇ ...ದ್ದಾಳೆ.

...ಿಯಾಲಿಟಿ ಶೋನಲ್ಲಿ ಭಾಗವಹಿಸಬೇಕು. ಆ ...ಕ ಟಿವಿಯಲ್ಲಿ ಕಾಣಿಸಿಕೊಳ್ಳಬೇಕು ಎಂಬ ...ಕ್ಕೆ ಭಾಗವಹಿಸಿದ್ದ ನನಗೆ ಕಾರ್ಯಕ್ರಮದ ...ಕ ಅಕುಲ್ ಮತ್ತು ನಿರ್ದೇಶಕರ ತಂಡ ...ಕ ಹಾಗೂ ದೈಹಿಕ ಹಿಂಸೆ ನೀಡಿದ್ದಾರೆ. ...ರ್ಯಾದಸ್ಥ ಕುಟುಂಬದ ಹೆಣ್ಣು ಮಕ್ಕಳು ಯಾರೂ ಸಹ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಬಾರದು ಎಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಮಾನ, ಮರ್ಯಾದೆ ಎಲ್ಲವನ್ನು ಬಿಟ್ಟು ಬಟ್ಟೆ ಬಿಚ್ಚಿ ಕುಣಿಯುವವರಿಗೆ ಮಾತ್ರವೇ ಅಲ್ಲಿ ಅವಕಾಶ. ಒಬ್ಬರನ್ನು ಮಾತ್ರ ಚಿತ್ರೀಕರಿಸುವ ಮತ್ತು ಅವರಿಗೆ ಮಾತ್ರ ಹೆಚ್ಚು ಅವಕಾಶ ನೀಡುವ ಮೋಸದ ಕಾರ್ಯಕ್ರಮವಿದು. ನಾನು ಮತ್ತು ಮಂಡ್ಯದ ಹುಡುಗಿ ಪೂರ್ಣಿಮಾ ಇಬ್ಬರೂ ರಿಯಾಲಿಟಿ ಶೋನಿಂದ ತಪ್ಪಿಸಿಕೊಳ್ಳಲು ಯತ್ನಿಸಿದೆವು ಎಂಬ ಕಾರಣಕ್ಕೆ ನಮ್ಮನ್ನು ಎಲಿಮಿನೇಟ್ ಮಾಡಲಾಗಿದೆ. ಮೂಲತಃ ಪೂರ್ಣಿಮಾ ಲೋ ಕ್ಲಾಸ್ ಕನ್ನಡ ಮಾತನಾಡುತ್ತಾಳೆ, ಹಳ್ಳಿ ಗುಗ್ಗು ಎಂದೆಲ್ಲಾ ಪ್ರತಿಸ್ಪರ್ಧಿ ಹುಡುಗಿಯರು ನಿಂದಿಸಿದರೂ ಅವರ ವಿರುದ್ಧ ಯಾರೂ ಕ್ರಮ ಕೈಗೊಳ್ಳುವುದಿಲ್ಲ.

ಕುಸ್ತಿ ಪಂದ್ಯಾವಳಿಯೊಂದರ ಚಿತ್ರೀಕರಣ ನಡೆಯುವಾಗ ಕುಮುದ ಎಂಬಾಕೆ ನನ್ನ ಕಪಾಳಕ್ಕೆ ಹೊಡೆದಿದ್ದಳು. ಆಗ ನನಗೆ ತೀವ್ರ ರಕ್ತಸ್ರಾವವಾಗಿತ್ತು. ಆದರೆ ಟಿವಿಯಲ್ಲಿ ಕಾರ್ಯಕ್ರಮ ಪ್ರಸಾರವಾದಾಗ ಅದನ್ನು ಮರೆಮಾಚಲಾಗಿತ್ತು. ಚಿತ್ರೀಕರಣ ನಡೆಯುವಾಗ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ ಹೆಣ್ಣು ಮಕ್ಕಳಿಂದಲೇ ಮದ್ಯ ಪೂರೈಕೆ ಮಾಡಿಕೊಂಡು ಅವರ ಜೊತೆಯಲ್ಲಿಯೇ ಕುಡಿಯುತ್ತಾರೆ. ಯಾರೋ ಕೆಲವು ಹೆಣ್ಣು ಮಕ್ಕಳು ಈ ಕೆಲಸ ಮಾಡಬಹುದು. ಆದರೆ ಮರ್ಯಾದಸ್ಥ ಕುಟುಂಬದ ಮಕ್ಕಳಿಂದ ಇದು ಸಾಧ್ಯವಿಲ್ಲ. ರಿಯಾಲಿಟಿ ಶೋನ ಎಲ್ಲಾ ನಿಯಮಗಳನ್ನೂ ಸಹ ಗಾಳಿಗೆ ತೂರಿ ನಿರೂಪಕ ಅಕುಲ್ ಮತ್ತು ನಿರ್ದೇಶಕ ರಾಘವೇಂದ್ರ ಹುಣಸೂರರ ಮಾತು ಕೇಳುವವರಿಗೆ ಮಾತ್ರ ಅಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ಕಾರ್ಯಕ್ರಮ ಆರಂಭವಾಗುವ ಮುನ್ನ ನಾವು ಸಹ ಒಂದು ಒಪ್ಪಂದಕ್ಕೆ ಸಹಿ ಹಾಕಿ ರಿಯಾಲಿಟ್ ಶೋ ಕುರಿತು ಪತ್ರಿಕಾಗೋಷ್ಠಿ ನಡೆಸುವುದಿಲ್ಲ ಎಂದು ಒಪ್ಪಿಗೆ ನೀಡಿದ್ದೆವು. ಆದರೆ ಅಲ್ಲಿ ನಡೆಯುತ್ತಿರುವ ಅನ್ಯಾಯ, ಅಶ್ಲೀಲತೆಯಿಂದ ಬೇಸತ್ತು ಹೊರಬಂದಿದ್ದೇವೆ" ಎಂದು ಅಕ್ಷತಾ ದೊಡ್ಡ ಬಾಂಬನ್ನೇ ಸಿಡಿಸಿದ್ದಾಳೆ.

'ಲಂಕೇಶ್' ಈ ರಿಯಾಲಿಟಿ ಶೋಗಳ ಬಗ್ಗೆ - ಅದರಲ್ಲೂ 'ಹಳ್ಳಿ ಹುಡ್ಗೀರ್' ಕಾರ್ಯಕ್ರಮದ ಬಗ್ಗೆ - ಈ ಹಿಂದೆ ವರದಿ ಮಾಡಿತ್ತು. ಕೆಲ ದಿನಗಳ ಹಿಂದೆ ಕುಮುದಾ ಎಂಬ ಹುಡುಗಿಗೆ ಬ್ಯಾಡಗಿ ಮೆಣಸಿನಕಾಯಿ ತಿನ್ನಿಸಿ ಅನಾಹುತಕಾರಿ ಕೃತ್ಯವೆಸಗಿದ್ದರು. ಟಾಸ್ಕ್‌ನಲ್ಲಿ ಸೋತವರಿಗೆ ಹಸುವಿನ ಗುದದ್ವಾರಕ್ಕೆ ಮುತ್ತಿಕ್ಕುವ ವಿಕೃತ ಶಿಕ್ಷೆ ವಿಧಿಸಿ ತಮ್ಮ ಅಭಿರುಚಿ ಎಂಥದ್ದು ಎಂಬುದನ್ನು ತೋರಿಸಿಕೊಟ್ಟಿದ್ದರು. ಈಗ ಈ ಶೋ ತಂಡದ ಕಾಟ ತಡೆಯಲಾರದೆ ತಪ್ಪಿಸಿಕೊಳ್ಳಲು ನೋಡಿದ ಅಕ್ಷತಾ ಮತ್ತು ಪೂರ್ಣಿಮಾಳನ್ನು 'ಗೃಹಬಂಧನ'ದಲ್ಲಿಟ್ಟು ಕೊಡಬಾರದ ಹಿಂಸೆ ಕೊಟ್ಟಿದ್ದಾರೆ. ಆಗ ಇವರಿಬ್ಬರು ದೊಡ್ಡ ರಂಪಾಟ ಆರಂಭಿಸಿದ್ದರು. ಕಡೆಗೆ 'ಇನ್ನೇನು ಯಡವಟ್ಟಾಗುತ್ತೋ' ಎಂದು 'ನಾವು ಶೋ ನಡೆಸೋದೇ ಹೀಗೆ. ನಿಮಗಿಷ್ಟ ಇಲ್ಲ ಅಂದ್ರೆ ಮೊದಲು ಇಲ್ಲಿಂದ ಜಾಗ ಖಾಲಿ ಮಾಡಿ' ಎಂದು ನಿರ್ದೇಶಕ ರಾಘವೇಂದ್ರ ಹುಣಸೂರು ನಡುರಾತ್ರಿಯಲ್ಲಿ ಈ ಹುಡುಗಿಯರನ್ನು ಹೊರದಬ್ಬಿದ್ದಾನೆ. ಅಕ್ಷತಾ ಎಂಬ ಹುಡುಗಿ ಅಲ್ಲಿನ ಹಿಂಸೆ ತಾಳಲಾರದೆ ಶೋನಿಂದ ಹೊರಬರುವ ಮುನ್ನ ನೀನೇನಾದರೂ ಬೆಂಗಳೂರಿಗೆ ಹೋಗಿ ಮೀಡಿಯಾದವರಿಗೆ ಇಲ್ಲಿನ ಸುದ್ದಿ ತಿಳಿಸಿದರೆ ಸುವರ್ಣ ಚಾನೆಲ್‌ನಲ್ಲಿ ನಿನ್ನ ಬಗ್ಗೆ ಕೆಟ್ಟದಾಗಿ ತೋರಿಸಿ ನಿನ್ನ ಇಮೇಜ್ ಡ್ಯಾಮೇಜ್ ಮಾಡಿಬಿಡ್ತೀವಿ ಎಂದು ಅಕುಲ್ ಧಮಕಿ ಹಾಕಿ ಕಳಿಸಿದ್ದಾನೆ.



ಅಕುಲ್ ಬಾಲಾಜಿಯೆಂಬ ಅರೆಬೆಂದ ನಟ ಈ ಕೊಳಕು ಕಾರ್ಯಕ್ರಮದ ನಿರೂಪಕ. ಮಾತು-ವರ್ತನೆ ಯಾವುದೂ ನೆಟ್ಟಗಿಲ್ಲದ ಈತನಿಗೆ ತಾನೇನೋ ಘನಂದಾರಿ ಶೋ ನಡೆಸಿಕೊಡುತ್ತಿದ್ದೇನೆಂಬ ಭೀಕರ ಭ್ರಮೆ. ಇದೇ ಪಿತ್ಥದಲ್ಲಿ ತನಗೆ 'ಸಹಕರಿಸದ' ಹುಡುಗಿಯರ ಮೇಲೆ ರೇಗಾಡುತ್ತಾ, ಫನಿಶ್‌ಮೆಂಟುಗಳ ಹೆಸರಲ್ಲಿ ವಿಕೃತತೆ ಮೆರೆಯುವ ಈತ ಹೆಜ್ಜೆಹೆಜ್ಜೆಗೂ ಅಸಹ್ಯ ಹುಟ್ಟಿಸುತ್ತಾನೆ. ಇಂಥ ಗಲೀಜು ಕಾರ್ಯಕ್ರಮವನ್ನು ತನ್ಮಯರಾಗಿ ನೋಡೋ ಜನರಿಗೆ ಅದ್ಯಾವ ಗರ ಬಡಿದಿದೆಯೋ ತಿಳಿಯುತ್ತಿಲ್ಲ.

ಹಾಗೆಂದು ಇಲ್ಲಿ ಸ್ಪರ್ಧಿಸಿರುವ ಹುಡುಗಿಯರೇನು ಸಾಚಾಗಳಲ್ಲ. ಹದಿನೈದು ಲಕ್ಷ ರೂಪಾಯಿಯ ಭರ್ತಿ ಹಣ ಕೈಸೇರುತ್ತದೆ ಎಂಬ ದುರಾಸೆಗೆ ಬಿದ್ದು, ಟೀವಿಯಲ್ಲಿ ಕಾಣಿಸಿಕೊಳ್ಳಬಹುದು ಎಂಬ ಸಿಲ್ಲಿ ಬಯಕೆಯಿಂದ ಈ ಶೋನಲ್ಲಿ ಹಲವರು ಭಾಗವಹಿಸಿದ್ದೂ ನಿಜ.


ಈಗ ಅವರಲ್ಲಿ ಇಬ್ಬರು ಈ ಕಾರ್ಯಕ್ರಮದ ವಿರುದ್ಧ ಬಂಡೆದ್ದು ನಿಂತಿದ್ದಾರಷ್ಟೇ.

• ಅರುಣ್

...ದೇಹಮಾತ್ರವಲ್ಲ ಕನಸೂ ದೊಡ್ಡದು!

...ಯುವಕನ ದೇಹದ ತೂಕ ಬರೋಬ್ಬರಿ ನೂರ ನಲವತ್ತು ಕೆ.ಜಿ ...ತ್ತದೆ!

... ಪಾಟ ಸ್ಥೂಲ ಕಾಯ ಹೊಂದಿದ್ದರೂ ಆತ ಅರೆಕ್ಷಣವೂ ಸುಮ್ಮನೆ ...ವುದಿಲ್ಲ. ಇತ್ತಿಂದತ್ತ, ಅತ್ತಿಂದಿತ್ತ ಓಡಾಡುತ್ತಾ ಚುರುಕಾಗಿ ಕೆಲಸ ...ಮುತ್ತಿರುತ್ತಾನೆ. ಆತ ರಂಗಭೂಮಿ ಮತ್ತು ಕಿರಿತೆರೆ ನಟ. ಮಾತ್ರವಲ್ಲ ...ಕ ನಿರ್ದೇಶಕನೂ ಹೌದು. ಹೆಸರು ನಂದಕಿಶೋರ್.



...ದೀಪ್ ನಿರ್ದೇಶನದ '73 ಶಾಂತಿನಿವಾಸ', ...ಗೌಡ', ಎಂಎಸ್ ರಮೇಶ್ ಅವರ 'ತಾಕತ್', ...ಲೆ' ಸೇರಿದಂತೆ ಒಂದಷ್ಟು ಕನ್ನಡ ಚಿತ್ರಗಳಿಗೆ ...ಯೇಟ್ ಆಗಿ ದುಡಿದಿರುವ ನಂದ ನಲವತ್ತಕ್ಕೂ ... ಚಿತ್ರಗಳಲ್ಲಿ ಪೋಷಕ ಕಲಾವಿದನಾಗಿಯೂ ...ದ್ದನೆ.

...ಥ ನಂದನಿಗೆ ಸ್ವತಂತ್ರ ನಿರ್ದೇಶಕನಾಗಬೇಕೆಂಬ ... ಎಲ್ಲ ಸರಿಹೋಗಿದ್ದರೆ ಈ ಹೊತ್ತಿಗೆ ನಂದ ...ಶಕನಾಗಿ ಪರಿಚಯಗೊಂಡುಬಿಡುತ್ತಿದ್ದ. ಕಷ್ಟಪಟ್ಟು ... ಸಿದ್ಧಪಡಿಸಿಕೊಂಡು, ಅನಿವಾಸಿ ...ಯರೊಬ್ಬರನ್ನು ಅಪ್ರೋಚ್ ಮಾಡಿದ್ದ. ಅವರೂ ...ರ್ಮಿಸಲು ಒಪ್ಪಿ ಆದಾಗಲೇ ಒಂದೂಕಾಲು ... ರೂಪಾಯಿಗಳನ್ನು ನಂದನ ಖಾತೆಗೆ ಜಮೆ ...ಸೂ ಆಗಿತ್ತು. ಆ ನಿರ್ಮಾಪಕರು ವಿದೇಶದಿಂದ ... ಅಗ್ರಿಮೆಂಟಿಗೆ ಸಹಿ ಹಾಕುವುದೊಂದೇ ...ತ್ತು. ದೂರದ ದುಬೈನಿಂದ ಹೊರಟುಬಂದ ...ಪಕ ಇನ್ನೇನು ಮಂಗಳೂರಿನಲ್ಲಿ ಬಂದು ...ಬೇಕು. ಆಗ ವಿಮಾನ ದುರಂತಕ್ಕೀಡಾಗಿ ...ಪಕ ಸಹಿತ ನೂರಾರು ಪ್ರಾಣಬಿಟ್ಟರು.

...ಮಾ ಆರಂಭವಾಗೇಹೋಯ್ತು ಎಂಬ ಸಂಭ್ರಮದಲ್ಲಿದ್ದ ನಂದನಿಗೆ ... ಪ್ರಪಂಚ ಮಗುಚಿಬಿದ್ದ ಹಾಗಾಯಿತು. ಆಗ ಈ ಬದುಕೇ ಬೇಡ ...ದ ಮಟ್ಟಿಗೆ ಹತಾಶೆ ಆತನನ್ನು ಆವರಿಸಿತ್ತು. ನೂರಾರು ಕನಸು ಹೊತ್ತಿದ್ದ ... ಮುಂದಿನ ದಾರಿ ಕಾಣದೆ ಭ್ರಮನಿರಸನಗೊಂಡಿದ್ದ. ಅದೇ ಹೊತ್ತಿಗೆ ...ನೆಯಲ್ಲಿ 'ಸ್ಯಾಂಡಲ್‌ವುಡ್'ನವರ ಕ್ರಿಕೆಟ್ ಟೂರ್ನಮೆಂಟ್ ಆರೇಂಜ್ ... ಅಲ್ಲಿ ನಂದನನ್ನು ಭೇಟಿಯಾದ ಸುದೀಪ್ 'ಈಗೇನ್ ಮಾಡ್ತಿದೀಯ?' ...'ಏನೂ ಮಾಡದೇ ಹಾಗೇ ಇದ್ದೀನಿ' ಎಂದ ನಂದ. 'ಬಾ ನನ್ನೊಟ್ಟಿಗೆ' ...ನಂದನನ್ನು ಕರೆದುಕೊಂಡು ಬಂದ ಸುದೀಪ್ ಆತನನ್ನು ತಮ್ಮ 'ಕೆಂಪೇಗೌಡ' ...ಸಹಾಯಕನಾಗಿ ನೇಮಿಸಿಕೊಂಡರು. ಇತ್ತ ನಿರ್ದೇಶನ, ಅತ್ತ ನಟನೆ ... ಜವಾಬ್ದಾರಿ ಹೊತ್ತಿದ್ದ ಸುದೀಪ್‌ಗೆ ನಂದ ಹೆಗಲಿಗೆ ಹೆಗಲು ಕೊಟ್ಟು ... ಹಗಲೂ ರಾತ್ರಿಯೆನ್ನದೆ ನಿದ್ರೆಗೆಟ್ಟು ಸಿನಿಮಾ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ. ಎಲ್ಲರ ಪರಿಶ್ರಮಕ್ಕೆ ಫಲವೆಂಬಂತೆ ಸಿನಿಮಾ ಈಗ ಸೂಪರ್ ಹಿಟ್ ಆಗಿದೆ.

ಸಿನಿಮಾ ಈ ಮಟ್ಟಕ್ಕೆ ಬರಲು ಹೆಚ್ಚು ಶ್ರಮ ವಹಿಸಿದ ನಂದನ ಸಿನಿಮಾ ಪ್ರೀತಿ, ಉತ್ಸಾಹ, ವೃತ್ತಿಪರತೆಯನ್ನು ಕಂಡು ಸುದೀಪ್ ಮತ್ತು ಆ ಚಿತ್ರದ ನಿರ್ಮಾಪಕ ಶಂಕರ್ ಗೌಡ ಅವರು ಈಗ ನಂದನಿಗೆ ನಿರ್ದೇಶಕ ಸ್ಥಾನಕ್ಕೆ ಬಡ್ತಿ ನೀಡಿದ್ದಾರೆ. 'ಪ್ರೀತಂ-ತುಂಬ ಖುಷಿ, ಸ್ವಲ್ಪ ಗಮ್' ಅನ್ನೋ ಚಿತ್ರವನ್ನು ನಂದ ನಿರ್ದೇಶಿಸುತ್ತಿದ್ದಾನೆ. ಇದೇ ವಾರ ಚಿತ್ರೀಕರಣ ಕೂಡ ಆರಂಭವಾಗಿದೆ.

ಹೀಗೆ ಎಲ್ಲ ಅಡ್ಡಿ ಆತಂಕಗಳನ್ನೂ ಮೀರಿ ನಿರ್ದೇಶನದ ಬಯಕೆಯ ಬೆನ್ನೇರಿ ಹೊರಟಿರುವ ಈ 'ದೈತ್ಯ' ಪ್ರತಿಭೆ ನಂದ ಮತ್ಯಾರೂ ಅಲ್ಲ, ಕನ್ನಡ ಚಿತ್ರರಂಗ ಕಂಡ ಅಪ್ರತಿಮ ಖಳನಟ ಸುಧೀರ್ ಅವರ ಹಿರಿ ಮಗ!

ಹೀರೋ ಆಗುವ ಪ್ರಯತ್ನ ಮಾಡಿ ವಿಫಲವಾಗಿ ಈಗ ಸಪೋರ್ಟಿಂಗ್ ಕ್ಯಾರೆಕ್ಟರ್‌ಗಳಿಗೆ ಸೀಮಿತವಾಗಿರುವ ಸಹೋದರ ತರುಣ್‌ನನ್ನೂ ನಂದ ತನ್ನ ಚಿತ್ರದ ಕ್ರಿಯೇಟಿವ್ ಟೀಮ್‌ನಲ್ಲಿರಿಸಿಕೊಂಡಿದ್ದಾನೆ. ಸುಧೀರ್ ಪತ್ನಿ ಮಾಲತಿ ಸಹ ರಂಗಭೂಮಿ ನಟಿ. ಸುಧೀರ್ ಅವರು ಸ್ಥಾಪಿಸಿದ 'ಕರ್ನಾಟಕ ಕಲಾ ವೈಭವ ಸಂಘ' ನಾಟಕ ಸಂಸ್ಥೆ ಇವತ್ತಿಗೂ ಜೀವಂತವಾಗಿದೆ. ಬೆಂಗಳೂರಿನ ಗುಬ್ಬಿವೀರಣ್ಣ ರಂಗಮಂದಿರದಲ್ಲಿ ನಾಟಕಗಳ ಪ್ರದರ್ಶನಗಳನ್ನು ನಡೆಸುತ್ತಲೇ ಬಂದಿದ್ದಾರೆ. ತಾಯಿಯೊಟ್ಟಿಗೆ ರಂಗಭೂಮಿಯಲ್ಲಿದ್ದುಕೊಂಡು ನಟನೆ ಮಾತ್ರವಲ್ಲದೆ, ಸ್ಟೇಜ್ ಜೋಡಿಸುವುದರಿಂದ ಹಿಡಿದು ಟಿಕೆಟು ಹರಿಯುವುದರ ತನಕ ಎಲ್ಲ ಕೆಲಸವನ್ನೂ ನಿಭಾಯಿಸಿರುವ 'ರಂಗಕರ್ಮಿ' ಈ ನಂದಕಿಶೋರ. ಈತನ ವಯಸ್ಸಿನ್ನೂ ಮೂವತ್ತೊಂದು. ತಂದೆ ಸುಧೀರ್ ತೀರಿಕೊಂಡಾಗ ಮನನೊಂದ ನಂದ ಎರಡು ವರ್ಷಗಳ ಕಾಲ ಮನೆಯಿಂದ ಹೊರಕ್ಕೆ ಕದಲದ ಕಾರಣ ಆತನ ದೇಹ ಎರ್ರಾಬಿರ್ರಿ ಉಬ್ಬಿಹೋಗಿದೆ. ಆದರೆ ಆತನ ಮಾತು, ನಡೆ, ವಿನಯ ಎಂಥವರನ್ನೂ ಆಕರ್ಷಿಸುತ್ತದೆ.


'ಹತ್ತರಲ್ಲಿ ಹನ್ನೊಂದನೇ ಸಿನಿಮಾ ಆಗಬಾರದು' ಎಂದು ಗೆಳೆಯ ಮತ್ತು ಕ್ಯಾಮೆರಾಮನ್ ಸತ್ಯ ಹೆಗಡೆ ಆದೇಶದಂತೆ ವಿಭಿನ್ನವಾದ, ಸಾಮಾಜಿಕ ಸಂದೇಶವೊಂದನ್ನು ಸಾರುವ 'ಪ್ರೀತಂ' ಚಿತ್ರವನ್ನು ನಂದ ಆರಂಭಿಸಿದ್ದಾನೆ.

ಮರೆಯಾದ ಕನ್ನಡದ ಖಳನಟರ ಮಕ್ಕಳಾದ ದರ್ಶನ್, ದಿನಕರ್, ಆದಿ ಲೋಕೇಶ್, ವಿನೋದ್ ಪ್ರಭಾಕರ್, ಓಂಪ್ರಕಾಶ್‌ರಂತೆ ನಂದಕಿಶೋರ್ ಸಹ ಚಿತ್ರರಂಗದಲ್ಲಿ ನೆಲೆಗೊಳ್ಳಲಿ... •

ಸಾಯಿಬಾಬಾನೂ ಸಾಯಿಪ್ರಕಾಶರ ಬೂದಿ ಪ್ರಸಾದವೂ

ಸಾಯಿಬಾಬಾರ ಸಾವು ಕನ್ನಡ ಸಿನಿಮಾ ಮಂದಿಯನ್ನೂ ಶೋಕಸಾಗರಕ್ಕೆ ದೂಡಿದೆ.

ಕನ್ನಡ ಚಿತ್ರರಂಗದ ನಟ-ನಟಿಯರಿಗೆ, ತಂತ್ರಜ್ಞರಿಗೆ ಸಾಯಿಬಾಬಾರ ಉಚಿತ ದರ್ಶನ ಮಾಡಿಸುತ್ತಿದ್ದ ಕೀರ್ತಿ ನಿರ್ದೇಶಕ ಸಾಯಿ ಪ್ರಕಾಶ್ ಅವರಿಗೆ ಸಲ್ಲುತ್ತದೆ. ಸಾಯಿಪ್ರಕಾಶ್‌ಗೂ ಪುಟ್ಟಪರ್ತಿಗೂ ಹಳೇ ನಂಟು. ತನ್ನ ಚಿತ್ರತಂಡವನ್ನು ಕರೆದುಕೊಂಡು ಬಾಬಾ ದರ್ಶನ ಮಾಡಿಸುವುದು ಎಂದರೆ ಸಾಯಿಪ್ರಕಾಶ್‌ಗೆ ಪರಮಾನಂದ. ಶಶಿಕುಮಾರ್, ತಾರಾ, ಹೇಮಾಚೌಧುರಿ, ರಾಮ್‌ಕುಮಾರ್ ಅಷ್ಟೇ ಏಕೆ, ಡಾ. ರಾಜ್ ಕುಟುಂಬದ ಅಷ್ಟೂ ಸದ್ಯರನ್ನು ಒಮ್ಮೆ ಬಾಬಾ ಬಳಿ ಕರೆದೊಯ್ದಿದ್ದರು ಸಾಯಿಪ್ರಕಾಶ್. ಕೆಲವೇ ವರ್ಷಗಳ ಹಿಂದೆ ಶಿವರಾಜ್ ಕುಮಾರ್‌ಗೆ ಇದೇ ಸಾಯಿಬಾಬಾ ನವರತ್ನದ ಹಾರವನ್ನೂ ಉಡುಗೊರೆಯಾಗಿ ಕೊಟ್ಟಿದ್ದರು.



ಇಂಥ ಸಾಯಿಬಾಬಾನ ಭಕ್ತ ಸಾಯಿ ಪ್ರಕಾಶ್ ಆರಂಭದಲ್ಲಿ ಕಾರ್ಮಿಕನಂತೆ ಖಾಕಿ ಬಟ್ಟೆ ತೊಟ್ಟು ಸಿನಿಮಾ ನಿರ್ದೇಶಿಸುತ್ತಿದ್ದಾಗ ಅವರ ನಸೀಬು ನೆಟ್ಟಗೇ ಇತ್ತು. ಆದರೆ "ನೀನು ಸದಾ ಬಿಳಿ ಬಟ್ಟೆ ತೊಡು. ಆಗ ನಿನ್ನ ಬದುಕಿನಲ್ಲಿ ಕಷ್ಟಗಳೇ ಬರುವುದಿಲ್ಲ" ಎಂದು ಸಾಯಿಬಾಬಾ ಇವರಿಗೆ ಹೇಳಿದ್ದರಂತೆ. ಅದರಂತೆ ಸಾಯಿಪ್ರಕಾಶ್ ಬಿಳಿ ಬಟ್ಟೆ ತೊಡಲಾರಂಭಿಸಿದ ನಂತರ ಅವರು ನಿರ್ದೇಶಿಸಿದ ಯಾವ ಚಿತ್ರಗಳೂ ಬರ್ಖತ್ತಾಗಲಿಲ್ಲ. ಕಡೆಗೆ ಆತ್ಮಹತ್ಯೆಗೆ ಪ್ರಯತ್ನಿಸುವ ಹಂತಕ್ಕೆ ಸಾಯಿಪ್ರಕಾಶರ ಹಣೆಬರಹ ಖರಾಬಾಗಿಹೋಯ್ತು!

ಆದರೂ ತಮ್ಮ ನಂಬಿಕೆ ತೊರೆಯದ ಸಾಯಿಪ್ರಕಾಶ್ ಇತ್ತೀಚೆಗೆ ಸಾಯಿಬಾಬಾ ಹಾಸಿಗೆ ಹಿಡಿದ ದಿನದಿಂದ ಮೊನ್ನೆಯವರೆಗೂ ತಮ್ಮ ಮನೆಯಲ್ಲಿ ಒಂದು ಮಡಿಕೆ ತುಂಬ ಬೂದಿ ಇಟ್ಟುಕೊಂಡು "ಇದು ಬಾಬಾ ನೀಡಿದ್ದ ಬೂದಿ" ಎಂದು ಹೇಳಿ ಬಂದವರ ಕೈಗೆ ಆ ಬೂದಿಯನ್ನು ತುಂಬಿ ಕಳಿಸುತ್ತಿದ್ದರು. ಅಷ್ಟೇ ಅಲ್ಲ, "ನಾನು ಭಗವಂತನ ಹತ್ರ ಹೇಳಿ ಮಾಡಿದೀನಿ, ಬಾಬಾ ಮತ್ತೆ ಎದ್ದು ಬರ್ತಾರೆ. ನೀವೂ ಹೇಳಿ ಬೇಡಿಕೊಳ್ಳಿ" ಎಂದು ಸಿಕ್ಕವರಿಗೆಲ್ಲಾ ಕಿವಿ ಕಚ್ಚುತ್ತಿದ್ದರು. ಪಾಪ! ಸಾಯಿ ಪ್ರಕಾಶ್ ಹೇಳಿ ಬೇಡಿದ್ದು ಯಾವ ಭಗವಂತನಿಗೂ ಕೇಳಿಸಲಿಲ್ಲವೋ ಏನೋ 'ಬೇಡ ಮಾಡುವ' ಬಾಬಾ ಕಮಕ್ ಕಿಮಕ್ ಅನ್ನದೇ ಮಲಗಿದ್ದಲ್ಲೇ ಉಸಿರು ನಿಲ್ಲಿಸಿಬಿಟ್ಟರು.

RNI No. KARKAN2005/
Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 11-5-2011



I am Sorry ಬೆತ್ತಲಾದನೇ ಪ್ರೇಮ್

"ನೆನಪಿರಲಿ ಪ್ರೇಮ್ ಪೂರ್ತಿ ಬೆತ್ತಲಾಗಿ ನಟಿಸಿದ್ದಾನಂತೆ, ನಿಜಾನಾ?", "ಥೂ... ಅವನಿಗೇನು ಬಂದಿತ್ತು, ನೋಡೋಕೆ ಅಷ್ಟು ಚೆಂದ ಇದ್ದಾನೆ", "ಇಂಥ ಸೀನ್‌ನಲ್ಲಿ ಆಕ್ಟ್ ಮಾಡೋ ಅವಶ್ಯಕತೆಯೇನಿತ್ತು?", "ಈ ಸಿನಿಮಾದವರೇ ಹೀಗೆ... ದುಡ್ಡು ಕೊಟ್ಟರೆ ಏನು ಬೇಕಾದ್ರೂ ತೋರಿಸ್ತಾರೆ..!" ಇಂಥ ಆರೋಪಗಳು ಈಗ ಪ್ರೇಮ್‌ನ 'ಮೈ'ತುಂಬ ಮೆತ್ತಿಕೊಂಡಿವೆ.

ಹಿಂದೆ ಛಾಲೆಂಜಿಂಗ್ ಸ್ಟಾರ್ ದರ್ಶನ್ "ಕಾಸು ಕೊಟ್ಟರೆ ಕಾಚಾದಲ್ಲಿ ಬೇಕಾದ್ರೂ ಆಕ್ಟ್ ಮಾಡ್ತೀನಿ" ಎಂದು ಹೇಳಿ ಎಲ್ಲರಿಂದ ಯಕ್ಕಾಮಕ್ಕ ಉಗಿಸಿಕೊಂಡಿದ್ದರು. ಆದರೆ ಪ್ರೇಮ್ ಯಾವ ಹೇಳಿಕೆಯನ್ನೂ ನೀಡದೇ ದರ್ಶನ್ ಮಾತನ್ನು ನಿಜ ಮಾಡಿ ತೋರಿಸಿದ್ದಾರೆ.

ರವೀಂದ್ರ ನಿರ್ದೇಶನದ 'ಐ ಯಾಮ್ ಸಾರಿ, ಮತ್ತೆ ಬನ್ನಿ ಪ್ರೀತ್ಸೋಣ' ಚಿತ್ರದಲ್ಲಿ ಪ್ರೇಮ್ ಬಾತ್ ರೂಂ ದೃಶ್ಯವೊಂದರಲ್ಲಿ ಸಣ್ಣದೊಂದು ಟವೆಲ್ ಕಟ್ಟಿಕೊಂಡು ನಟಿಸಿದ್ದಾರೆ. ಚಿತ್ರೀಕರಣದ ಸಂದರ್ಭದಲ್ಲಿ ಯಾರೋ ಸೆಟ್ ಹುಡುಗರು ಆ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿ ಅದನ್ನು ಎಮ್ಮೆಮ್ಮೆಸ್ ಮೂಲಕ ಎಲ್ಲೆಡೆ ತೇಲಿಬಿಟ್ಟಿದ್ದಾರೆ. ಜೊತೆಗೆ ಕೆಲ ಕಿಡಿಗೇಡಿಗಳು ಆ ಫೋಟೋಗೆ ಕಂಪ್ಯೂಟರ್ ಗ್ರಾಫಿಕ್ಸ್ ಮಾಡಿ ಪ್ರೇಮ್ ಸಂಪೂರ್ಣ ಬೆತ್ತಲಾಗಿರುವಂತೆ ಬದಲಾಯಿಸಿ ಅದನ್ನು ಇಂಟರ್‌ನೆಟ್ಟಿನಲ್ಲಿ ಅಪ್‌ಲೋಡ್ ಮಾಡಿಬಿಟ್ಟಿದ್ದಾರೆ. ಹೀಗಾಗಿ ಎಲ್ಲರೂ 'ಪ್ರೇಮ್ ಸಂಪೂರ್ಣ ಬೆತ್ತಲಾಗಿ ನಟಿಸಿದ್ದಾರೆ' ಎಂದು ನಂಬಿದ್ದಾರೆ.



ಪ್ರೇಮ್ ಪೂರ್ತಿ ನಗ್ನವಾಗಿ ನಟಿಸಿದ್ದಾರೋ ಇಲ್ಲವೋ ಅನ್ನೋದು ಮುಖ್ಯವಲ್ಲ. ಹಾಗೊಂದು ವೇಳೆ ಕೆಟ್ಟಾಕೊಳಕಾಗಿ ನಟಿಸಿದ್ದರೆ ಆ ದೃಶ್ಯಕ್ಕೆ ಕತ್ತರಿ ಹಾಕಲು ಸೆನ್ಸಾರ್ ಮಂಡಳಿ ಇರುವುದರಿಂದ ಪ್ರೇಕ್ಷಕರು 'ಗಾಬರಿ'ಗೊಳ್ಳುವ ಅಗತ್ಯವಿಲ್ಲ.

ಬಟ್ಟೆ ಬಿಚ್ಚುವ ಖಯಾಲಿ!

ಪ್ರೇಮ್ ಕನ್ನಡ ಚಿತ್ರರಂಗದಲ್ಲಿ ಅತಿಹೆಚ್ಚು ಮಹಿಳಾ ಅಭಿಮಾನಿಗಳನ್ನು ಹೊಂದಿರುವ ನಟ ಎಂಬುದರಲ್ಲಿ ಡೌಟೇ ಇಲ್ಲ. ಈ ಕಾರಣಕ್ಕೇ ಪ್ರೇಮ್ ನಟಿಸಿದ ಚಿತ್ರ ಥಿಯೇಟರಿನಲ್ಲಿ ಓಡದೇ ಇದ್ದರೂ ಅದರ ಛಾನಲ್ ರೈಟ್ಸ್‌ಗೆ ಒಳ್ಳೇ ರೇಟು ಸಿಗುತ್ತದೆ. ತನ್ನನ್ನು ಹುಡುಗಿಯರೇ ಹೆಚ್ಚು ಇಷ್ಟಪಡುವುದನ್ನು ತಪ್ಪಾಗಿ ತಿಳಿದಿರುವ ಪ್ರೇಮ್ ಈಗ ಬಟ್ಟೆ ಬಿಚ್ಚುವ ವಿಚಿತ್ರ ಖಯಾಲಿಗೆ ಬಿದ್ದಿದ್ದಾರೆ. ಹಿಂದಿಯಲ್ಲಿ ಸಲ್ಮಾನ್ ಖಾನ್, ಹೃತಿಕ್ ರೋಷನ್ ಅಂಗಿ ಕಳಚಿದರೆ ಹೆಣ್ಣುಮಕ್ಕಳು ಹುಚ್ಚೆದ್ದು ಕುಣಿಯುತ್ತಾರಲ್ಲಾ? ಹಾಗೇ ತಾನೂ ಬಿಂದರೆ ಇನ್ನೂ ಹೆಚ್ಚಿನ ಹುಡುಗಿಯರು ತನ್ನ ಅಭಿಮಾನಿಗಳಾಗುತ್ತಾರೆ ಎಂಬ ಹುಚ್ಚು ನಂಬಿಕೆ ಪ್ರೇಮ್‌ನದ್ದು!

ಈ ಹಿಂದೆ ದರ್ಶನ್‌ನ 'ಸ್ನೇಹಾನಾ ಪ್ರೀತೀನಾ' ಮತ್ತು 'ಅರ್ಜುನ್' ಎಂಬೆರಡು ಚಿತ್ರಗಳನ್ನು ನಿರ್ದೇಶಿಸಿದ್ದ ಶಾಹುರಾಜ್ ಶಿಂಧೆ 'ಪ್ರೇಮ ಚಂದ್ರಮ' ಎನ್ನುವ ಸಬ್ಜೆಕ್ಟ್ ಅನ್ನು ಸಿದ್ಧಮಾಡಿಕೊಂಡು, ಆ ಚಿತ್ರದ ನಾಯಕನಾಗಿ ಪ್ರೇಮ್‌ನೇ ನಟಿಸಬೇಕೆಂದು ಹಂಬಲಿಸಿ ಆತನ ಮನೆ ಹುಡುಕಿಕೊಂಡು ಹೋಗಿ ಆತನನ್ನು ಒಪ್ಪಿಸಿದ್ದರು. ಈ ಚಿತ್ರದಲ್ಲಿ ನಟಿಸಲು ಪ್ರೇಮ್‌ಗೆ ಹದಿನೆಂಟೂವರೆ ಲಕ್ಷ ರೂಪಾಯಿ ಸಂಭಾವನೆ ಕೊಡಲೂ ಒಪ್ಪಿದ್ದರು. ಮುಹೂರ್ತ ಕೂಡಾ ಫಿಕ್ಸ್ ಆಗಿತ್ತು, ಆದರೆ ಮುಹೂರ್ತದ ಆಹ್ವಾನ ಪತ್ರಿಕೆಯಲ್ಲಿ 'ಶರ್ಟ್ ಹಾಕದೇ ಇರೋ ಫೋಟೋವನ್ನೇ ಹಾಕಬೇಕು' ಎಂದು ಹಠ ಹಿಡಿದ ಪ್ರೇಮ್ ತಾನೇ ಕೂತು ಅದನ್ನು ಡಿಜೈನು ಮಾಡಿಸಿಕೊಂಡಿದ್ದ. ನಿರ್ದೇಶಕ ಶಿಂಧೆ ಅರೆಬೆತ್ತಲೆ ಫೋಟೋವನ್ನು ಇನ್ವಿಟೇಷನ್ನಿಗೆ ಹಾಕೋದು ಬೇಡ ಎಂದು ತೆಗೆಸಿಬಿಟ್ಟಿದ್ದರು. ಇಷ್ಟೇ ಕಾರಣಕ್ಕೆ "ನಿಮ್ಮ ಸಿನಿಮಾದಲ್ಲಿ ನಾನು ನಟಿಸೋದೇ ಇಲ್ಲ" ಎಂದು ಪ್ರೇಮ್ ಹೊರಬಂದಿದ್ದ. ನಂತರ ಆ ಪಾತ್ರಕ್ಕೆ ರಘು ಮುಖರ್ಜಿಯನ್ನು ಹಾಕಿಕೊಂಡು ಸಿನಿಮಾ ಮುಂದುವರೆಸಲಾಗಿತ್ತು.

ಈಗ 'ಐ ಯಾಮ್ ಸಾರಿ' ಚಿತ್ರದಲ್ಲೂ ಮತ್ತದೇ ಬೆತ್ತಲೆ ರಗಳೆ ಆರಂಭವಾಗಿದೆ. ಬರೀ ಬಾತ್‌ರೂಂ ದೃಶ್ಯವಲ್ಲದೇ ನಾಯಕಿ ಕರಿಷ್ಮಾ ತನ್ನಾಳೊಂದಿಗೆ ಪ್ರೇಮ್ ಲಿಪ್ ಲಾಕ್ ದೃಶ್ಯದಲ್ಲಿ ಕಾಣಿಸಿಕೊಂಡಿರುವುದೂ ಈಗ ಬಿಸಿಬಿಸಿ ಚರ್ಚೆಗೆ ಕಾರಣವಾಗಿದೆ. ಪ್ರೇಮ್ ಹೀಗೆ ಅರೆಬರೆ ಬಟ್ಟೆ ಹಾಕಿಕೊಂಡು, ಚುಂಬನ ದೃಶ್ಯಗಳಲ್ಲಿ ನಟಿಸಿರುವುದನ್ನು ಆತನ ಪತ್ನಿ ಜ್ಯೋತಿ ಯದ್ವಾತದ್ವಾ ತರಾಟೆ ತೆಗೆದುಕೊಂಡಿದ್ದಾರಂತೆ. ಹಾಗೆ ನೋಡಿದರೆ ವಿವಾಹಿತ ಹೀರೋಗಳು ಎಲ್ಲಿ ದಾರಿ ತಪ್ಪುತ್ತಾರೋ ಎಂಬ ಭಯಕ್ಕೆ ಪತ್ನಿಯರು ಸದಾ ಅವರ ಬೆನ್ನುಬಿದ್ದಿರುತ್ತಾರೆ. ಆದರೆ ಪ್ರೇಮ್ ಪತ್ನಿ ಯಾವತ್ತೂ ಗಂಡನನ್ನು ಅನುಮಾನಿಸಿದವರಲ್ಲ. ಹಾಗೆಯೇ ಪ್ರೇಮ್ ಕೂಡಾ ಬೇರೆ ಹೀರೋಗಳಂತೆ ಸೆರಗನ್ನು ಹಿಂಬಾಲಿಸಿ ಹೋದವರಲ್ಲ. ಆದರೆ ನಿರಂತರ ಸೋಲಿನಿಂದ ಹೊರಬರಲು ಪ್ರೇಮ್ ಈಗ ಬೆತ್ತಲೆ ದಾರಿ ಹಿಡಿದಿದ್ದಾರೆ ಅನ್ನಿಸುತ್ತದೆ.

ನಾಲಗೆಯೇ 'ಶತ್ರು'!


ಕನ್ನಡ ಚಿತ್ರರಂಗದಲ್ಲಿರುವ ಕೆಲವೇ ಸುಂದರ ನಟರಲ್ಲಿ ಪ್ರೇಮ್ ಕೂಡಾ ಒಬ್ಬರು. ಒಂದಾನೊಂದು ಕಾಲದಲ್ಲಿ ಪ್ರೇಮ್ ಹೊಟ್ಟೆಪಾಡಿಗಾಗಿ ಸಂಪಂಗಿರಾಮನಗರದಲ್ಲಿ ಮಗ್ಗದ ಕೆಲಸ ಮಾಡಿಕೊಂಡಿದ್ದವರು. ಹೀರೋ ಆಗುವ ಬಯಕೆಯಿಂದ ರಂಗಭೂಮಿ ಸೇರಿ, ನಟನೆಯನ್ನು ಕಲಿತು, ಒಂದಷ್ಟು ನಾಟಕಗಳಲ್ಲೂ ಅಭಿನಯಿಸಿ 'ಪ್ರಾಣ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ, 'ನೆನಪಿರಲಿ'ಯಿಂದ ಪ್ರೇಕ್ಷಕರಿಗೆ ಪರಿಚಯವಾದವರು.

ಪ್ರೇಮ್ ಎಂಬ ಮುದ್ದು ಮುಖದ ನಟ 'ನೆನಪಿರಲಿ' ಚಿತ್ರದ ಸಾಧಾರಣ ಯಶಸ್ಸಿನ 'ಜೊತೆಜೊತೆಯಲಿ' ಸಾಗಿ 'ಪಲ್ಲಕ್ಕಿ' ಏರಿದ್ದೇ ಬಂತು, ಆನಂತರ ಸಿಕ್ಕಿದ್ದೆಲ್ಲ ಭರ್ಜರಿ ಸೋಲುಗಳೇ. ಪ್ರೇಮ್ ನಟಿಸಿದ 'ಸವಿಸವಿ ನೆನಪು', 'ಹೊಂಗನಸು', 'ಗೌತಮ್' ಮತ್ತು 'ಗುಣವಂತ' ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ನೆಲಕಚ್ಚಿದ್ದವು.

ಪ್ರೇಮ್‌ನ ಯಡವಟ್ಟುಗಳಿಗೆ ಆತನ ಯದ್ವಾತದ್ವಾ ಮಾತುಗಳೇ ಕಾರಣ ಅನ್ನೋದು ಹಂಡ್ರೆಡ್ ಪರ್ಸೆಂಟ್ ನಿಜ. ಹಿಂದೊಮ್ಮೆ "ನಾನು ಇನ್ನು ಮುಂದೆ ರಿಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ" ಎಂದು ಘಂಟಾಘೋಷವಾಗಿ ಅನೌನ್ಸ್ ಮಾಡಿ ಕೆಲವೇ ದಿನಗಳಲ್ಲಿ ತನ್ನ ಮಾತನ್ನು ತಾನೇ ವಾಪಾಸ್ ಪಡೆದಿದ್ದ. " ನಾನು 'ಗುಣವಂತ' ಚಿತ್ರದಲ್ಲಿ ನಟಿಸಿದ್ದು ದೊಡ್ಡ ಅಪರಾಧ" ಎಂದು ತನ್ನ ಚಿತ್ರದ ಬಗ್ಗೆ ತಾನೇ ಅವಹೇಳನದ ಮಾತಾಡಿದ್ದ. "ರಕ್ಷಣಾ ವೇದಿಕೆ ಮೂಲಕ ಸಮಾಜ ಸೇವೆ ಮಾಡ್ತೀನಿ" ಎಂದು ಹೇಳಿ ನಗೆಪಾಟಲಿಗೊಳಗಾಗಿದ್ದ. 'ಜೊತೆಗಾರ' ಸಿನಿಮಾ ಸಮಯದಲ್ಲಿ "ಸಿನಿಮಾದ ಐಟಂಸಾಂಗ್‌ಗೆ ರಾಖೀ ಸಾವಂತೇ ಬೇಕು" ಎಂದು ಹಠ ಮಾಡಿ ನಿರ್ಮಾಪಕ ಅಶ್ವಿನಿ ರಾಮ್‌ಪ್ರಸಾದ್ ಜೊತೆಗೆ ರಗಳೆ ಮಾಡಿಕೊಂಡಿದ್ದ. ಪ್ರೇಮ್ ಸಿನಿಮಾ ಮೂಲಕ ಹೆಸರು ಮಾಡಿದ್ದಕ್ಕಿಂತ ವಿವಾದಗಳ ಮೂಲಕ ಸುದ್ದಿಯಾಗಿದ್ದೇ ಹೆಚ್ಚು.

ಈಗ ಪ್ರೇಮ್‌ನ ವಿವಾದದ ಪಟ್ಟಿಗೆ 'ಐ ಯಾಮ್ ಸಾರಿ'ಯ ಬೆತ್ತಲೆ ಪ್ರಸಂಗವೂ ಸೇರಿಕೊಂಡಿದೆ.

• ಅರುಣೋದಯ




ಕರೀಷ್ಮಾ
'ಮತ್ತೆ ಪ್ರೀತ್ಸೋಣ'



ಗಾಡ್ ಮದರ್ ಸಿಮ್ರನ್!

ನಾಯಕಿ ಸ್ಥಾನಕ್ಕೆ ಸ್ವಯಂನಿವೃತ್ತಿ ನೀಡಿ, ಮದುವೆಯಾಗಿ ಗಂಡನ ಮನೆ ಸೇರಿದ್ದ ದಕ್ಷಿಣ ಭಾರತದ ಸೆಕ್ಸೀ ನಟಿ ಸಿಮ್ರನ್ ಈಗೀಗ ಮತ್ತೆ ಅಭಿನಯಿಸಲು ಶುರು ಮಾಡಿದ್ದಾಳೆ. ಇತ್ತೀಚೆಗಷ್ಟೇ ಬಂದ ಸೂರ್ಯ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದ 'ವಾರಣಂ ಆಯಿರಂ' ಎಂಬ ತಮಿಳು ಚಿತ್ರದಲ್ಲಿ ಸಿಮ್ರನ್ ವೃದ್ಧೆಯ ಪಾತ್ರದಲ್ಲಿ ಮನೋಜ್ಞವಾಗಿ ನಟಿಸಿದ್ದಳು.

ದಶಕದ ಹಿಂದೆ ಶಿವರಾಜ್‌ಕುಮಾರ್ ನಟಿಸಿದ್ದ 'ಸಿಂಹದ ಮರಿ' ಚಿತ್ರದಲ್ಲಿ ಕಾಣಿಸಿಕೊಂಡಿದ್ದ ಸಿಮ್ರನ್ ಮತ್ತೊಮ್ಮೆ ಕನ್ನಡ ಚಿತ್ರಗಳಲ್ಲಿ ನಟಿಸಿರಲಿಲ್ಲ. ಆದರೀಗ 'ಸೂಪರ್' ಸ್ಟಾರ್ ಉಪೇಂದ್ರ ಅವರು ತ್ರಿಪಾತ್ರದಲ್ಲಿ ನಟಿಸುತ್ತಿರುವ 'ಗಾಡ್‌ಫಾದರ್' ಚಿತ್ರದಲ್ಲಿ ಮುಖ್ಯ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಕೆ.ಎಸ್. ರವಿಕುಮಾರ್ ನಿರ್ದೇಶಿಸಿದ್ದ ತಮಿಳಿನ 'ವರಲಾರು' ಚಿತ್ರದ ರಿಮೇಕ್ ಇಲ್ಲಿ 'ಗಾಡ್‌ಫಾದರ್' ಆಗಿದೆ. ಈ ಜೆರಾಕ್ಸ್ ಪ್ರತಿಯನ್ನು ಗಂಡುಗಲಿ ಕೊಬ್ರಿ ಮಂಜು ಅವರು ಸಿದ್ಧಪಡಿಸುತ್ತಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Banga...
Fax : 26604536, E-mail :lankesh70@rediffmail.com. Printed at ...